ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ದೇಜಗೌ ಕಾವ್ಯ - ಒಂದು ಅಧ್ಯಯನ

ಸಂಶೋಧಕರು

ಜಗದೀಶ

KVTMKS-00417
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಕ.ವಿ.ವಿ. ಹಂಪಿ)

ಮಾರ್ಗದರ್ಶಕರು

ಡಾ. ಮಳಲಿ ವಸಂತಕುಮಾರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

ಕನ್ನಡ ವಿಶ್ವವಿದ್ಯಾಲಯ

ಹಂಪಿ

[illegible]

[illegible]

[illegible] ಕಾವ್ಯ – ಒಂದು ಅಧ್ಯಯನ

[illegible]

[illegible]

[illegible]

[illegible]

[illegible]

ಡಾ. [illegible]

[illegible]

[illegible]

[illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯–೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ದೇಜಗೌ ಕಾವ್ಯ – ಒಂದು ಅಧ್ಯಯನ

ಸಂಶೋಧಕರು

ಜಗದೀಶ

KVTMKS-00417
ಕನ್ನಡ ಎಂ.ಫಿಲ್. ಪದವಿ

ಮಾರ್ಗದರ್ಶಕರು

ಡಾ. ಮಳಲಿ ವಸಂತಕುಮಾರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯–೧೦

ಮಾರ್ಗದರ್ಶಕರ ಪ್ರಮಾಣಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00417**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಜಗದೀಶ ಅವರು ನನ್ನ ಮಾರ್ಗದರ್ಶನದಲ್ಲಿ **"ದೇಜಗೌ ಕಾವ್ಯ – ಒಂದು ಅಧ್ಯಯನ"** ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಸಂಶೋಧನಾ ನಿಬಂಧವನ್ನು ಶ್ರೀಯುತರು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಪದವಿ ಅಥವಾ ಡಿಪ್ಲೊಮೋಗಳಿಗಾಗಲಿ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮ್ಯಸೂರು
೧೪-೦೮-೨೦೧೦

(ಡಾ. ಮಳಲಿ ವಸಂತಕುಮಾರ್)
ಮಾರ್ಗದರ್ಶಕರು
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿರುವ ನಾನು ಡಾ. ಮಳಲಿ ವಸಂತಕುಮಾರ್ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ **"ದೇಜಗೌ ಕಾವ್ಯ – ಒಂದು ಅಧ್ಯಯನ"** ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತೇನೆ. ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಪದವಿ ಅಥವಾ ಡಿಪ್ಲೋಮೋ-ಗಳಿಗಾಗಲಿ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Jagadeesha

ಮೈಸೂರು
೧೪-೦೮-೨೦೧೦

(ಜಗದೀಶ)
ಕ್ರಮಸಂಖ್ಯೆ **KVTMKS-00417**
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ದೇಜಗೌ ಕಾವ್ಯ – ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ – ೧
ದೇಜಗೌ ಜೀವನದರ್ಶನ

ಜನನ, ಬಾಲ್ಯ, ವಿದ್ಯಾಭ್ಯಾಸ

ನಿಗೂಢ ಶಕ್ತಿಯ ಅಂತರಂಗದ ಅಭಿಪ್ಸೆಗಳು ಅನಂತ. ಅದು ತನ್ನ ಕಾರ್ಯ ಸಾಧನೆಗಾಗಿ ರಚಿಸುವ ವ್ಯೂಹ ವಿಸ್ಮಯ ಹುಟ್ಟಿಸುತ್ತದೆ. ತನ್ನ ಅಂತರಂಗದ ಅಭಿವ್ಯಕ್ತಿಗೆ ಆ ನಿಗೂಢಶಕ್ತಿ ಮನುಷ್ಯನನ್ನು ನಿಯೋಜಿಸಿ ಅವನನ್ನು ಸಾಧನವಾಗಿ ಬಳಸಿಕೊಳ್ಳುತ್ತಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡ ನಾಡುನುಡಿಯ ಮತ್ತು ವಿಶ್ವಮಾನವತೆಯ ಹೊಸ ಆವಿಷ್ಕಾರಕ್ಕಾಗಿ ಅದು ಇಬ್ಬರು ಮಹಾನ್ ವ್ಯಕ್ತಿಗಳನ್ನು ನಿಯೋಜಿಸಿತು. ಒಂದು ಶಕ್ತಿ ಮಲೆನಾಡಿನ ನಿಸರ್ಗಸೌಂದರ್ಯದ ರಮಣೀಯತೆಯಲ್ಲಿ ಜನಿಸಿದರೆ, ಮತ್ತೊಂದು ಶಕ್ತಿ ಬಯಲುನಾಡಿನ ಬಡತನದ ಬೇಗುದಿಯ ಗುಡಿಸಿಲಿನಲ್ಲಿ ಜನಿಸಿತು. ಅಂಥ ಎರಡು ಮಹಾನ್ ಚೇತನಗಳೇ ಕುವೆಂಪು ಮತ್ತು ದೇಜಗೌ.

ರಾಷ್ಟ್ರಕವಿ ಕುವೆಂಪು ಅವರು ಸಾಹಿತ್ಯದ ಮುಖಾಂತರ ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಹೆಸರಾದರೆ ದೇಜಗೌ ಸಾಹಿತಿಯಾಗಿ, ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ, ಆಡಳಿತಗಾರರಾಗಿ, ಸಂಘಟಕರಾಗಿ, ಕವಿಗಳಾಗಿ, ಚಳುವಳಿಗಾರರಾಗಿ ಇನ್ನು ಮುಂತಾದ ನಾನಾ ಮುಖಗಳಲ್ಲಿ ಕಾರ್ಯನಿರ್ವಹಿಸಿ ತಮ್ಮದೇ ಆದ ಕೊಡುಗೆಯನ್ನು ಈ ನಾಡು ನುಡಿಗೆ ಕೊಟ್ಟಿದ್ದಾರೆ. ಇಂದು ಕನ್ನಡದ ಜೊತೆಯಲ್ಲೇ ದೇಜಗೌ ಎಂಬ ಮೂರಕ್ಷರ ಬೆರತುಕೊಂಡಿದೆ.

ನಮ್ಮ ನಾಡಿನ ಬಹುಶ್ರುತ ವಿದ್ವಾಂಸರಲ್ಲಿ ಒಬ್ಬರಾಗಿರುವ ದೇಜಗೌ ಅವರು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಾಗಿ ಸರ್ವತೋಮುಖ ಬೆಳವಣಿಗೆಗಾಗಿ ತನುಮನ ಧನಗಳನ್ನು ಅರ್ಪಿಸಿಕೊಂಡಿರುವಂಥವರು.

ದೇಜಗೌ ಅವರ ಪೂರ್ಣ ಹೆಸರು ದೇ.ಜವರೇಗೌಡ. ಇವರ ಜನನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ತಾಯಿಯ ತವರಾದ ಮುದಿಗೆರೆಯಲ್ಲಿ ಜುಲೈ ೬, ೧೯೧೮ ಎಂದು ಸರ್ಕಾರದ ಕಡತಗಳಲ್ಲಿ ಅಧಿಕೃತ ದಾಖಲೆಯಾಗಿದೆ. ಇವರ ಜೀವನ ತಮ್ಮ ತಂದೆಯ ಊರಾದ ಚಕ್ಕರೆ ಎಂಬ ಕುಗ್ರಾಮದಲ್ಲಿ. ಇದು ಚನ್ನಪಟ್ಟಣದಿಂದ ಸುಮಾರು ನಾಲ್ಕೂವರೆ ಮೈಲಿದೂರದಲ್ಲಿದೆ.

[illegible]

ದಾರಿದ್ರ್ಯ, ಅಜ್ಞಾನ, ಅಶುಚಿ, ಅಸೌಕರ್ಯ, ಮುಗ್ಧತೆ, ಅಸಹಾಯಕತೆಗಳ ಬೀಡಾಗಿತ್ತು ಇವರ ಮನೆ. ತಂದೆ ದೇವೇಗೌಡರು ಮಗ ಕಣ್ಣುಬಿಡುವ ಹೊತ್ತಿಗೆ ಏನೋ ಬಡಿದಿದ್ದರಿಂದ ಕಣ್ಣು ಕುರುಡಾಗಿತ್ತು. ಸಾಕಷ್ಟು ಆಸ್ತಿಪಾಸ್ತಿಯಿಲ್ಲದೆ ಮನೆಯಲ್ಲಿ ದುಡಿಯುವವರಿಲ್ಲದೆ ಆ ಮನೆಯಲ್ಲಿ ಕಷ್ಟಕಾರ್ಪಣ್ಯಗಳೇ ಅಧಿಕವಾಗಿತ್ತು. ಉತ್ತಮ ಆಹಾರವಿಲ್ಲದೆ, ಮೈಮೇಲೆ ಸರಿಯಾದ ಬಟ್ಟೆಯೂ ಇಲ್ಲದೆ ಕಷ್ಟಕಾರ್ಪಣ್ಯಗಳಿಂದ ಕೂಡಿದ್ದ ಅವರ ಜೀವನ ಒಂದು ಕಡೆಯಾದರೆ ಬೇರೆಯವರ ಕರುಣೆಯ ಕೂಸಾಗಿ ಬೆಳೆದವರು ದೇಜಗೌ. ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆ ಇಲ್ಲದ ಸ್ಥಿತಿಯಲ್ಲಿಯೇ ಅಕ್ಷರಶಃ ಮಣ್ಣಿನ ಮಗನಾಗಿ ಬೆಳೆದು ಬಂದಿರುವುದನ್ನು ನಾವು ನೋಡಬಹುದಾಗಿದೆ.

ದೇವೆಗೌಡರು ತಮ್ಮ ಹಿರಿಯ ಮಗನನ್ನು ಶಾಲೆಗೆ ಕಳುಹಿಸಿ ಜವರೇಗೌಡರನ್ನು ಆಡು ಕಾಯ್ದುಕೊಂಡು ಬರುವ ಕೆಲಸಕ್ಕೆ ನೇಮಿಸಿದರು. ಏಕೆಂದರೆ ಓದಿಸುವ ಸ್ಥಿತಿಯಲ್ಲಿ ಇಲ್ಲದಿದ್ದುದೇ ಇದಕ್ಕೆ ಕಾರಣ. ಅದರಿಂದಾದರೂ ಮೂರುನಾಲ್ಕು ಕಾಸು ಬಂದರೆ ಜೀವನ ನಡೆಸಬಹುದು ಎಂಬ ದೃಷ್ಟಿಯಿಂದ. ಇಂಥ ಸ್ಥಿತಿಯಿಂದ ಬಂದ ಜವರೇಗೌಡರು ತಮ್ಮ ಬಾಳನ್ನು ಒಂದು ಪವಾಡ ಎಂದು ಕರೆದುದೇನೂ ಅಚ್ಚರಿಯಲ್ಲ.

ಬಾಲಕ ಜವರೇಗೌಡರಿಗೆ ಆರು ಏಳು ವರ್ಷಗಳಿದ್ದಿರಬೇಕು, ಬಾಲ್ಯ ಸಹಜವಾದ ಕುತೂಹಲ, ಅಕ್ಷರಭ್ಯಾಸ ಮಾಡಬೇಕೆಂಬ ಅದಮ್ಯ ಬಯಕೆ ಮನಸ್ಸಿನ ಎಲ್ಲೋ ಒಂದು ಮೂಲೆಯಲ್ಲಿ ಯೋಚಿಸುತ್ತಿತ್ತು.

ಅವರ ಬಾಲ್ಯದ ಮತ್ತೊಂದು ಅಕಾಂಕ್ಷೆಯೆಂದರೆ ತಮ್ಮಲ್ಲಿಯೇ ಇದ್ದ ನಾಲ್ಕಾರು ಕುರಿಗಳನ್ನು ಚೆನ್ನಾಗಿ ಮೇಯಿಸಿ ಒಂದು ದೊಡ್ಡ ಮಂದೆಯನ್ನಾಗಿ ಪರಿವರ್ತಿಸಿ, ಸ್ವತಂತ್ರ್ಯವಾಗಿ ಟಗರೊಂದನ್ನು ಸಾಕಬೇಕೆಂಬುದು ಕೂಡ ಆಗಿತ್ತು. ಆದರೆ ಜವರೇಗೌಡರಿಂದ ನಾಡುನುಡಿಯ ಸೇವೆಗೆ ಸಾಧನವಾಗಿ ಮಾಡಿಕೊಳ್ಳುವ ಸಲುವಾಗಿ ಯಾವುದೆ ಒಂದು ನಿಗೂಢಶಕ್ತಿ ಅವರನ್ನು ಗಗನದೆತ್ತರಕ್ಕೆ ಕೊಂಡೊಯ್ದುದು ಒಂದು ಪವಾಡವೇ ಸರಿ.

ಶಾಲೆಯ ಮಕ್ಕಳು ಓದುವುದನ್ನು ಕಂಡು ಜವರೇಗೌಡರು ಆಡುಗಳನ್ನು ಬೇಲಿ ಮೇಯಲು ಬಿಟ್ಟು ಪಾಠಶಾಲೆಯೊಳಗೆ ಹಣಿಕಿಕ್ಕ ತೊಡಗಿದರು. ಅಲ್ಲಿ ಏನೋ ಸಂತೋಷ ಸಂಭ್ರಮ. ಬೇಗಬೇಗನೆ ಅಕ್ಷರಗಳ ಕಲಿಕೆ, ಜಾಣ್ಮೆಯ ಪ್ರದರ್ಶನ ಬರಬರುತ್ತಾ ಮೇಷ್ಟರಿಗೆ ಬಹಳ ಹತ್ತಿರವಾಗುತ್ತ ಬಂದರು.

ಒಂದು ದಿನ ಬೇಲಿಮೇಯಲಿಕ್ಕೆ ಬಿಟ್ಟ ಆಡುಗಳು ಯಾರದೋ ಹೊಲ ಮೇಯ್ದು ಬಗೆಗೆ ದೂರು ಅವರ ತಂದೆಗೆ ಮುಟ್ಟಿತು. ತೋಟದ ಮಾಲೀಕರಿಂದ ದೇವೇಗೌಡರಿಗೆ ತರಾಟೆ, ಬೈಗುಳಗಳ ಸುರಿಮಳೆ, ಇದರಿಂದ ಕುಪಿತಗೊಂಡ ತಂದೆ ಶಾಲೆಯ ಒಳಗಡೆ ಮುಗ್ಧ ಬಾಲಕ ಜವರೇಗೌಡರು ಅಕ್ಷರ ಕಲಿಯುತ್ತಿದ್ದಾಗ ಧರಧರನೆ ಎಳೆದುಕೊಂಡು ಬಂದು 'ಬಡ್ಡಿಮಗನೆ ನಿನ್ನ ಇಸ್ಕೂಲಿಗೆ ಹೋಗು ಅಂದೋರು ಯಾರು?' ಎನ್ನುತ್ತಾ ಹಿಪ್ಪನೇರಳೆ ಕಡ್ಡಿಯ ರುಚಿಯನ್ನು ತೋರಿಸಿದರು.

ಇಂತಹ ಕರುಣಾಜನಕವಾದ ದೃಶ್ಯವನ್ನು ಕಣ್ಣಾರೆ ನೋಡುತ್ತಿದ್ದ ಶಾಲೆಯ ಮೇಷ್ಟ್ರು ವೆಂಕಟರಾಮಯ್ಯಂಗಾರ್ ಬಹಳ ಸಂಕಟಪಟ್ಟು ನಡೆದಿದ್ದನು ಮುಖ್ಯೋಪಾಧ್ಯಾಯರಿಗೆ ವಿವರಿಸಿ ಹೇಳಿ, ದೇವೆಗೌಡರಿಗೆ ಬುದ್ಧಿ ಹೇಳುವಂತೆ ಸೂಚಿಸಿದರು.

ಮೊದಲೇ ಕೋಪದಿಂದ ತತ್ತರಿಸಿದ್ದ ದೇವೆಗೌಡರು ನನಗೆ ಬೈಗುಳ ತಿನ್ನಿಸಿದನಲ್ಲಾ ಎಂದು ಆಕ್ರೋಶಗೊಂಡು ಹೊಡೆದಿದ್ದರಿಂದ ಮೈಮೇಲೆ ಬಾಸುಂಡೆ-ಗಳನ್ನು ಮೂಡಿಸಿತು. ಆ ಹುಡುಗನ ಅಸಹಾಯಕ, ಕರುಣಾಕ್ರಂದನವನ್ನು ಕೇಳಿದ ಉಪಾಧ್ಯಾಯರ ಕರುಳು ಮರುಗಿತು. ಸುರಿಯುತ್ತಿರುವ ಕಣ್ಣೀರಿನ ಏಟನ್ನು ಮುಗ್ಧಬಾಲಕ ಚೀರಾಡುತ್ತಿರುವ ಹರಿದ ಅಂಗಿಯ, ಬಿಚ್ಚಿಹೋಗುತ್ತಿರುವ ಕಚ್ಚೆಯ ಈ ಮಗುವನ್ನು ಕಂಡು ಧಾವಿಸಿ ಬಂದು ತಂದೆಯ ಕೈಯಿಂದ ಬಿಡಿಸಿ ಮುಖ್ಯೋಪಾಧ್ಯಾಯರ ಬಳಿಗೆ ಕರೆದೊಯ್ದದನ್ನು ನಾವು ತಿಳಿದಿರಬಹುದಾಗಿದೆ.[೧]

ಅಂದಿನ ಮುಖ್ಯೋಪಾಧ್ಯಾಯರು ಇನ್ನಾರು ಅಲ್ಲ. ಹಳೆ ಮೈಸೂರಿನ ರಾಜಕೀಯ ಹುಲಿ ಎಂದೇ ಹೆಸರಾದ ಎಚ್.ಕೆ.ವೀರಣ್ಣಗೌಡರು. ಇವರ ವಿವರವನ್ನು ತಿಳಿದುಕೊಂಡ ಮೇಲಂತೂ ದೇವೇಗೌಡರನ್ನು ತರಾಟೆಗೆ ತೆಗೆದುಕೊಂಡರು. ತಕ್ಷಣ ದೇವೇಗೌಡರನ್ನು ಕುರಿತು "ಏನಯ್ಯ ಗೌಡ ನಿನಗೇನು ಸ್ವಲ್ಪವೂ ಕರುಣೆ ಇಲ್ಲವೆ? ಆ ಹುಡುಗನನ್ನು ದನ ಹೊಡೆಯುವ ಹಾಗೆ ಹೊಡೆದಿರುವೆಯಲ್ಲಾ. ಸ್ಕೂಲಿಗೆ ಹುಡುಗರು ತಾನಾಗಿಯೇ ಬರುವುದಿಲ್ಲ. ನಿಮ್ಮ ಹುಡುಗ ತಾನಾಗಿಯೇ ಸ್ಕೂಲಿಗೆ ಬಂದರೆ ನಿನಗೆ ಆಗುವುದಿಲ್ಲ. ಇದು ಸರಿಯೇ?" ಎಂದು ಹೇಳಿರುವುದನ್ನು ನಾವು ತಿಳಿದಿರ-ಬಹುದಾಗಿದೆ.

ಆಗ ದೇವೇಗೌಡರು ಅಸಹಾಯಕತೆಯಿಂದ "ಒಬ್ಬ ಮಗನು ಆಗ್ಲೇ ಬರ್ತಾ ಇದ್ದಾನೆ ಸ್ವಾಮಿ, ಇನ್ನೊಬ್ಬನ ಓದಸ್ಲಿಕ್ಕೆ ನನಗೆ ಚೈತನ್ಯ ಇದೆಯೇ? ಇವನ ಬಟ್ಟೆ,

ಪುಸ್ತಕಕ್ಕೆ ನಾನು ಎಲ್ಲಿಂದ ದುಡ್ಡು ತರಲಿ? ನಾನು ಕಣ್ಣು ಕಾಣದ ಬಡವ. ನನ್ಕೈಲಿ ಕೂಲಿನಾಲಿ ಮಾಡೋಕಾಗ್ತದೆಯೋ? ಈಗ ನನಗೆ ಬರೋ ಆದಾಯ ಒಪ್ಪೊತ್ತಿನ ಊಟಕ್ಕೆ ಸಾಲೊಲ್ಲ. ಇವನು ಒಂದೆರಡು ಆಡು ಮೇಯಿಸಿಕೊಂಡು ಬಂದರೆ ಹೇಗೋ ಖರ್ಚು ಕಳೀತದೆ"[೨] ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ.

ಆಗ ಎಚ್.ಕೆ.ವೀರಣ್ಣಗೌಡರು ದೇವೇಗೌಡರಿಗೆ ಹುಡುಗನ ಬಟ್ಟೆಬರೆ, ಪಠ್ಯಪುಸ್ತಕ ಎಲ್ಲವನ್ನು ನೋಡಿಕೊಳ್ಳುವುದಾಗಿ ಹೇಳುತ್ತಾರೆ. ಸಮ್ಮತಿಸದೆ ಇದ್ದಾಗ ಹುಡುಗನನ್ನು ಶಾಲೆಗೆ ಕಳುಹಿಸದಿದ್ದರೆ ಸರ್ಕಾರದಿಂದ ಜುಲ್ಮಾನೆ ಹಾಕಿಸುವುದಾಗಿ ಬೆದರಿಕೆಯನ್ನು ಹಾಕಿದಮೇಲೆ ವಿನಾಕಾರಣ ಬೇರೆ ದಾರಿಯೇ ಇಲ್ಲದೆ ಒಪ್ಪಿಕೊಂಡಿರುವುದನ್ನು ನಾವು ತಿಳಿಯಬಹುದಾಗಿರುತ್ತದೆ.

ಅಂದಿನ ದಿನದಲ್ಲಿ ಶ್ರೀ ಎಚ್.ಕೆ.ವೀರಣ್ಣಗೌಡರು ಚಕ್ಕರೆಯ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಇಲ್ಲದೆ ಹೋಗಿದ್ದರೆ ಕನ್ನಡದ ಕೆಲಸಕ್ಕೆ ದೇಜಗೌ ಇಲ್ಲದೆ ಹೋಗುತ್ತಿದ್ದರು. ಅಂದು ವೀರಣ್ಣಗೌಡರು ಜವರೇಗೌಡರನ್ನು ಮೂರನೆಯ ತರಗತಿಗೆ ಸೇರಿಸಿದುದ್ದನ್ನು ನಾವು ತಿಳಿಯಬಹುದಾಗಿದೆ.

ಅನಂತರ ಬಡತನ, ಹಸಿವು, ಅರೆಹೊಟ್ಟೆಯಲ್ಲಿ ವಿದ್ಯೆ ಕಲಿತು ಹನ್ನೆರಡನೇ ವಯಸ್ಸಿನಲ್ಲಿ ಜವರೇಗೌಡರು ಲೋಯರ್ ಸೆಕೆಂಡರೀ ಪರೀಕ್ಷೆಯನ್ನು ಕಟ್ಟಿದರು. ಅದರಲ್ಲಿ ತೇರ್ಗಡೆಯಾದರು. ಅಂದೇ ಅವರಿಗೆ ಏಕಏಕಿ ಶಾಲೆ ಮುಖ್ಯೋಪಾಧ್ಯಾಯರಿಂದ ಕರೆಬಂದಿತು.

ಆದರೆ ಅದನ್ನು ಬಿಟ್ಟು ಸ್ಕಾಲರ್‌ಶಿಪ್‌ನಿಂದ ಓದನ್ನು ಮುಂದುವರಿಸಿ ಹೈಸ್ಕೂಲ್ ಓದಿಗೆ ಚನ್ನಪಟ್ಟಣಕ್ಕೆ ಬಂದರು. ನಂತರ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಬೆಂಗಳೂರು ಮೈಸೂರಿನಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಆನಂತರ ಯಾರೊಡನೆಯೂ ಬೆರೆಯದೆ ಪಠ್ಯೇತರ ಚಟುವಟಿಕೆಗಳಲ್ಲು ಭಾಗವಹಿಸದೆ ಕೇವಲ ಕಾಲೇಜು ಲೈಬ್ರರಿಗಳಲ್ಲಿ ನಿರಂತರವಾಗಿ ಓದುತ್ತಿದ್ದರು. ಆಗ ಅವರಿಗೆ ವಾಚನಾಲಯದಲ್ಲಿ ಓದುತ್ತಿದ್ದಾಗ ಆಕಸ್ಮಿಕವಾಗಿ 'ಇಂಗ್ಲಿಷ್ ತ್ರೈಮಾಸಿಕ ತ್ರಿವೇಣಿ' ಅವರ ಕಣ್ಣಿಗೆ ಬಿದ್ದಿತು. ಅದರಲ್ಲಿ ಕುವೆಂಪು ಅವರನ್ನು ಕುರಿತ ಲೇಖನ ಇವರ ಮನಸೆಳೆಯಿತು.

ಅಂದಿನಿಂದಲೇ ಕುವೆಂಪು ಅವರನ್ನು ತಮ್ಮ ಆರಾಧ್ಯದೈವವೆಂದು ಒಪ್ಪಿ ಸ್ವೀಕರಿಸಿದರು. "ಪ್ರಬುದ್ಧ ಕರ್ನಾಟಕದಲ್ಲಿ ಬಂದ ಕುವೆಂಪು ಅವರ ಭಾವಚಿತ್ರವನ್ನು ಯಾರಿಗೂ ಕಾಣದಂತೆ ಹರಿದು ತಂದು ಕಟ್ಟುಹಾಕಿಸಿ ತಮ್ಮ ಕೋಣೆಯಲ್ಲಿ

ಇರಿಸಿಕೊಂಡಿದ್ದರು. ಕುವೆಂಪು ವಿಷಯದಲ್ಲಿ ಪ್ರೊ. ದೇಜಗೌ ಆ ವೇಳೆಗಾಗಲೇ ಇದ್ದ 'ಭಾವ'ವಿದು"[೩].

"ನಂತರ ಬಿ.ಎ.ಆನರ್ಸ್‌ಗೆ ೧೯೩೮ರಲ್ಲಿ ಮೈಸೂರಿನ ಮಹಾರಾಜ ಕಾಲೇಜನ್ನು ಇಂಗ್ಲಿಷ್ ಓದಲು ಆರಿಸಿಕೊಂಡರು. ಕೊನೆಗೆ ತೆಗೆದುಕೊಳ್ಳಲು ನಿರ್ಧರಿಸಿದ್ದು ಚರಿತ್ರೆ. ಆ ಮೇಲೆ ತೆಗೆದುಕೊಂಡದ್ದು ಕನ್ನಡ. ಕಾರಣ ಕನ್ನಡ ತೆಗೆದುಕೊಂಡರೆ ಕುವೆಂಪುರವರ ಪಾಠ ಕೇಳಬಹುದೆಂದು ಅರ್ಜಿಯನ್ನು ತಿದ್ದಿ ಕನ್ನಡ ಎಂದು ಬರೆದಿದ್ದುದನ್ನು ನಾವು ತಿಳಿಯುತ್ತೇವೆ"[೪]

ಅಂದು ಮೈಸೂರಿನಲ್ಲಿ ಉಳಿದುಕೊಳ್ಳಲು ಶುಚಿತ್ವ ಜೀವನಕ್ಕೆ ಹೇಳಿ–ಮಾಡಿಸಿದಂತಹ ಶ್ರೀರಾಮಕೃಷ್ಣಾಶ್ರಮವನ್ನು ಸೇರಿದರು. ಅಲ್ಲಿಯೂ ಕೂಡ ಅವರಿಗೆ ವಿದ್ಯಾರ್ಥಿವೇತನ ದೊರೆಯಿತು. ಕನ್ನಡ ದಿಗ್ಗಜರುಗಳಾಗಿದ್ದ ಟಿ.ಎಸ್.ವೆಂಕಣ್ಣಯ್ಯ, ಬಿ.ಎಂ.ಶ್ರೀ, ಕುವೆಂಪು, ಎ.ಆರ್.ಕೃಷ್ಣಶಾಸ್ತ್ರಿ, ತೀ.ನಂ.ಶ್ರೀ ಮತ್ತು ಡಿ.ಎಲ್.ನರಸಿಂಹಾಚಾರ್ ಮುಂತಾದ ಶ್ರೇಷ್ಠ ವ್ಯಕ್ತಿಗಳು ದೇಜಗೌ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಮುದ್ರೆಯೊತ್ತಿದವರನ್ನು ನಾವು ಕಾಣಬಹುದಾಗಿದೆ.

ನಂತರ ಜವರೇಗೌಡರು ಕನ್ನಡ ತೆಗೆದುಕೊಂಡಿದ್ದಕ್ಕೆ ನಿರಾಸೆ ಅವರನ್ನು ಕೆಲವೊಂದು ಸಮಯದಲ್ಲಿ ಕಾಡಿಸಿತ್ತು. ನಂತರ ಎಂ.ಎ. ಓದಬೇಕೆಂದು ನಿರ್ಧರಿಸಿದರು. ನಂತರ ಜೀವನಕ್ಕೆ ದಾರಿಯನ್ನು ಕಂಡು ವಿದ್ಯಾ ಇಲಾಖೆಯಲ್ಲಿ ಗುಮಾಸ್ತರಾದರು. ನಂತರ ಈ ಅವಧಿಯಲ್ಲೇ ಆದರ್ಶ ಯುವಕ ಜವರೇಗೌಡರು ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರದ ಅಪ್ಪಾಜಿಗೌಡರ ಮಗಳು, ಸಾವಿತ್ರಮ್ಮನವರೊಂದಿಗೆ ಸರಳ ವಿವಾಹವಾದರು. ಅಂದಿನ ಲಗ್ನಪತ್ರಿಕೆಯ ಈ ಪದ್ಯ

"ಒಲುಮೆಗಿಂತಲೂ ಬೇರೆ ಪರಮಾರ್ಥವಿಲ್ಲ
ನರರ ಬದುಕಿನಲ್ಲಿ ಮೇಣ್ ಅರ್ಥ
ಹೀನಂ ಬಾಳ್ವೆ ಒಲುಮೆಯಿಲ್ಲದಿದ್ದರೆ,
ಹೂವಿಂದ ಸಾರ್ಥಕವಹುದು, ಗಿಡದ
ಬಾಳಂತರಕೆ ಒಲುಮೆ ಹೂವು"[೫]

ಎಂಬ ಕುವೆಂಪುರವರ ಚಿತ್ರಾಂಗದ ಪದ್ಯ, ಅಂದು ಅವರು ತೊಟ್ಟಿದ್ದು ಖಾದಿ ಬಟ್ಟೆಯೇ ಮದುವೆಯ ಸೂಟು ಆಗಿತ್ತು. ಮಂಗಳಸೂತ್ರವೇ ಎಲ್ಲಾ ತರಹದ ಒಡವೆಯಾಗಿತ್ತು. ಸರಳ ವಿವಾಹದ ರೀತಿಯಲ್ಲೇ, ಮುಂದೆಯೂ ಸರಳವಾಗಿ, ಅಷ್ಟೇ

ಒಲುಮೆಯ ಸತಿಪತಿಗಳಾಗಿ ಬದುಕಿ ತೋರಿಸಿದ ಆದರ್ಶ ವ್ಯಕ್ತಿತ್ವ, ಹೃದಯ ವೈಶಾಲ್ಯತೆ ದೇಜಗೌ ದಂಪತಿಗಳದ್ದು ಎಂಬುದನ್ನು ಈ ಮೇಲಿನ ಕವನದಿಂದ ತಿಳಿಯ-ಬಹುದಾಗಿದೆ.

ಸಾಹಿತ್ಯ ಬೃಹದ್ ಭೂಮಿಕೆಯಲ್ಲಿ ಜವರೇಗೌಡರದು ಭೀಮಬಲ. ಪಾತ್ರಗಾತ್ರಗಳೆರಡನ್ನೂ ಸೈ ಎನ್ನುವಂತೆ ಸರಿಗಟ್ಟುವ ಸಾಮರ್ಥ್ಯ ಅವರದು. ಏನನ್ನೇ ಮಾಡಿದರೂ ಅಲ್ಲಿ ಮೈಲಿಗಲ್ಲುಗಳನ್ನು ನೆಟ್ಟು ಮುನ್ನಡೆವ ಸ್ವಭಾವ. ಅವರ ಸಂಪಾದನೆ, ಅನುವಾದ ಮತ್ತು ಜೀವನ ಚರಿತ್ರೆಗಳ ರಚನೆಗಳು ಇದಕ್ಕೆ ಸ್ಪಷ್ಟ ನಿದರ್ಶನ.

"ಸಂಶೋಧನಾ ರಹಿತವಾದ ಸಂಪಾದನೆ ಅವರಿಗೆ ಒಗ್ಗದು. ಮೂಲತಃ ಅವರೊಬ್ಬ ಘನಪಂಡಿತ. ಕನ್ನಡ ಸಾಹಿತ್ಯ ಸಮಸ್ತವನ್ನೂ ಆಳವಾಗಿ ಅಧ್ಯಯನ ಮಾಡಿರುವ ಬಹುಶ್ರುತ ವಿದ್ವಾಂಸ, ಅಪಾರವಾದ ಶಾಸ್ತ್ರಜ್ಞಾನದ ಹಿನ್ನೆಲೆಯುಳ್ಳ ಅವರು ಕೃತಿಗಳನ್ನು ತೌಲನಿಕ ಹಿನ್ನೆಲೆಯಲ್ಲಿ ಅವಲೋಕಿಸಿ ಬೆಲೆಕಟ್ಟುವ ನೈಪುಣ್ಯತೆಯುಳ್ಳ ಶ್ರೇಷ್ಠ ವಿಮರ್ಶಕ".[೬]

ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯಗಳೆರಡನ್ನು ಕುರಿತ ದೇಜಗೌ ವಿಮರ್ಶೆಯನ್ನು ಪರಿಗಣಿಸಿದರೆ ಅದು ಮೂರು ಸಹಸ್ರ ಪುಟಗಳಷ್ಟಾಗುತ್ತದೆ. ಅದೆಲ್ಲವೂ ಗಟ್ಟಿ ಬರವಣಿಗೆ, ಲೋಕಾಭಿರಾಮ ಮನಸ್ಸಿನಿಂದ ಕಾಟಚಾರಕ್ಕೆ ಗೀಜುವ ಜಯಮಾನ ಅವರಿಗಿಲ್ಲವೇ ಇಲ್ಲ, ಕೃತಿ ವಿಮರ್ಶೆಯ ಮಾತಿರಲಿ ಸಾಹಿತಿಗಳನ್ನು ಕುರಿತ (ವ್ಯಕ್ತಿಚಿತ್ರಗಳ) ಬರವಣಿಗೆಯೂ ಸಹ ಸಮೃದ್ಧವಾಗಿದೆ.

ಸಾಹಿತ್ಯಗಳ ಸಂಗದಲ್ಲಿ 'ನೆನಪಿನಲ್ಲಿ ನಿಂದವರು' ಈ ದೃಷ್ಟಿಯಿಂದ ಉಲ್ಲೇಖಾರ್ಹ ಕೃತಿಗಳು. ವ್ಯಕ್ತಿ ಚಿತ್ರಗಳನ್ನು ಕುರಿತಂತೆ ಸಮೃದ್ಧಿಯಲ್ಲಿ ದೇಜಗೌ ಕನ್ನಡ ಸಾರಸ್ವತ ಲೋಕದಲ್ಲಿ ಮೊದಲಿಗರಾಗುತ್ತಾರೆ. ಅದು ಅವರಿಗೆ ಅಂಕಣದ ವೃತ್ತಿ ಮತ್ತು ಪ್ರವೃತಿ ಎರಡೂ ಆಗಿತ್ತು. ಅವರು ಅದನ್ನು ಬರವಣಿಗೆಯಾಗಿ ಪರಿಗಣಿಸಿದ್ದರು. ಸಾಹಿತ್ಯ ದಿಗ್ಗಜರನ್ನು ಪರಿಚಯಿಸುವಮಟ್ಟಿಗೆ ಲೇಖನ ಸಮುಚ್ಚಯದಲ್ಲಿ ದೇಜಗೌ ಮಹತ್ವದ ಸ್ಥಾನಕ್ಕೆ ಬರುತ್ತಾರೆ.

ಮಹಾಕವಿ ಕುವೆಂಪು ಅವರ ಜೀವನ ಸಾಹಿತ್ಯವನ್ನು ಕುರಿತಂತೆ ಈ ಲೇಖಕರು ನಡೆಸಿದ ತಲಸ್ಪರ್ಶಿ ಅಧ್ಯಯನ ನಾಲ್ಕು ಸಾವಿರ ಪುಟಗಳನ್ನು ದಾಟುತ್ತದೆ. ಕನ್ನಡ ಮಟ್ಟಿಗೆ ಮಾತ್ರವಲ್ಲ ಇಡೀ ಭಾರತೀಯ ಸಾಹಿತ್ಯದಲ್ಲಿ ಇಂಥ ಪ್ರಯತ್ನ ಇನ್ನಿಲ್ಲ. ಒಬ್ಬ ಸಾಹಿತಿಯ ಸಮಸ್ತ ಸಾಹಿತ್ಯವನ್ನು ಒಬ್ಬನೇ ಸಾಹಿತಿ ಲೌಕಿಕಾಲೌಕಿಕ ಸ್ತರಗಳಲ್ಲಿ

ವಿವೇಚನೆಗೊಳಗು ಮಾಡಿರುವುದು ವಿಶ್ವಸಾಹಿತ್ಯದಲ್ಲೂ ಅಪರೂಪ, ಷೇಕ್ಸ್‌ಪಿಯರ್ ಮತ್ತು ಕಾಳಿದಾಸ ಕವಿಗಳನ್ನು ಕುರಿತಂತೆ ಮಾತ್ರ ವಿಮರ್ಶೆಯ ಈ ಸಾಧ್ಯತೆ ಇದೆ.

“ಇನ್ನು ಜಗತ್ತಿನ ಮಹಾನ್ ಲೇಖಕ ಟಾಲ್‌ಸ್ಟಾಯ್ ಅವರ ‘ರೆಸರೆಕ್ಷನ್ ಮತ್ತು ವಾರ್ ಅಂಡ್ ಪೀಸ್’ ಕೃತಿಗಳನ್ನು ‘ಪುನರುತ್ಥಾನ’ ಹಾಗೂ ‘ಯುದ್ಧ ಮತ್ತು ಶಾಂತಿ’ಯಾಗಿ ಕನ್ನಡೀಕರಿಸಿ ತನ್ಮೂಲಕ ರಷ್ಯನ್ ಸಂಸ್ಕೃತಿಯನ್ನು ಕನ್ನಡೀಕರಿಸಿದ್ದು ಮಹತ್ವದ ಸಂಗತಿ. ಕೃಷ್ಣಾಹತೀ ಸಿಂಗರ ‘ವಿತ್ ನೋ ರಿಗ್ರೆಟ್ಸ್’ ಎಂಬ ಕೃತಿಯನ್ನು ‘ನೆನಪು ಕಹಿಯಲ್ಲ’ ಎಂಬ ಹೆಸರಿನಲ್ಲಿ ಪ್ರಕಟವಾದರೂ ಅಲ್ಲಿನ ಸೃಜನಶೀಲ ಗದ್ಯ ಕನ್ನಡ ಗದ್ಯಕ್ಷೇತ್ರದಲ್ಲಿ ಮುದನೀಡಿ ಜವರೇಗೌಡರ ಸಾಹಿತ್ಯ ಪ್ರವೇಶವನ್ನು ಉಜ್ವಲಗೊಳಿಸಿದ್ದು ಗಮನಾರ್ಹ ವಿಚಾರ.[೭]

ಹೀಗೆ ಅವರು ಅನುವಾದ, ಜೀವನ ಚರಿತ್ರೆ, ವ್ಯಕ್ತಿ ಚಿತ್ರ ಮತ್ತು ಪ್ರವಾಸ ಸಾಹಿತ್ಯವನ್ನು ಕುರಿತ ಕ್ಷೇತ್ರಗಳಲ್ಲಿ ಪ್ರಥಮ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಸಮರ್ಥಕವಿ ಯಾವತ್ತೂ ಸಮಕಾಲೀನ ಸಂಗತಿಗಳ ದರ್ಪಣವಾಗುತ್ತಾನೆ. ಅದೇ ಸಮಕಾಲೀನ ಪ್ರಜ್ಞೆ, ದೈನಂದಿನ ಘಟನೆಗಳಿಗೆ ರಮಣೀಯ ಅಭಿವ್ಯಕ್ತಿ ನೀಡಿದಾಗ ಅದು ಕಾವ್ಯವಾಗುತ್ತದೆ ಹಾಗೂ ಪ್ರಸ್ತುತ ವಿಚಾರಗಳ ಪ್ರತಿಬಿಂಬವಾಗುತ್ತದೆ.

ಭಾರತದ ಇಂದಿನ ಬಹುದೊಡ್ಡ ಸಮಸ್ಯೆ ಎಂದರೆ ಹದಗೆಟ್ಟ ರಾಜಕೀಯ ಸನ್ನಿವೇಶ, ಸ್ವಾರ್ಥ ರಾಜಕಾರಣಿಗಳ ನಾಚಿಕೆಗೆಟ್ಟ ಬದುಕು ದೇಶದಲ್ಲಿ ನಾನಾ ಅನಾಹುತಗಳನ್ನು ಸೃಷ್ಟಿಸುತ್ತದೆ; ಅವರು ಬಿತ್ತಿ ಬೆಳೆಯುವ ಭ್ರಷ್ಟಾಚಾರ, ಘನಘೋರ ರಾಷ್ಟ್ರೀಯ ಸಮಸ್ಯೆಯಾಗಿದೆ. ದೇಶದ ಆರ್ಥಿಕ ಅಭದ್ರತೆಗೆ ಕಾರಣವಾಗಿದೆ. ವೋಟಿಗಾಗಿ ಅವರು ತೋಡುವ ಜಾತೀಯ ಕಂದಕಗಳು ಮುಂದೆಂದೂ ಸರಿಪಡಿಸಲಾರದ ಹಾಗೆ ದೇಶವನ್ನು ಛಿದ್ರಗೊಳಿಸುತ್ತಿವೆ ಎಂಬುದನ್ನು ನಾವು ಇಂದು ನೋಡಬಹುದಾಗಿದೆ.

ಇದನ್ನೆಲ್ಲ ಕಂಡ ಕವಿ ಜವರೇಗೌಡರು ರೋಷಗೊಂಡಿದ್ದಾರೆ. ಅವರು ಹಿಡಿದ ಲೇಖನಿ ಖಡ್ಗವಾಗಿದೆ. ಅವರು ರಾಜಕಾರಣಿಗಳ ಈ ಹೀನ ಧೋರಣೆಗಳನ್ನು ಉಗ್ರವಾಗಿ ಖಂಡಿಸಿ ಮುಖದ ಬೆವರಿಳಿಸಿದ್ದಾರೆ. ಆತ್ಮಗೌರವ ಇರುವ ಯಾವ ರಾಜಕಾರಣಿಯೂ ಬೆಚ್ಚಿಬೀಳುವಂತೆ, ಆತ್ಮಾವಲೋಕನ ಮಾಡಿಕೊಳ್ಳುವಂತೆ ಕಾವ್ಯದ ಈಟಿಯಿಂದ ತಿವಿದಿದ್ದಾರೆ. ಅವರ ಚುಟುಕುಗಳಾಗಲಿ, ಮುಕ್ತಕಗಳಾಗಲಿ, ವಚನ-ಗಳಾಗಲಿ ಅಥವಾ ಈ ಸಂಕಲನದ ಶುದ್ಧಾಂಗ ಭಾವಗೀತೆಗಳಾಗಲಿ ರಾಜಕೀಯ ವಿಡಂಬನೆಯ ಸಿಂಹಶಕ್ತಿಯಾಗಿ ರೂಪುತಳೆದಿವೆ.

"ಪಾಪಪುಣ್ಯ ನ್ಯಾಯ ನೀತಿ
ಭೀತಿತೊಡರು ಇಲ್ಲವದಕೆ
ಕಾಲಗಾಳಿ ತೂರಿದಂತೆ
ಬಗ್ಗಿನಡೆವುದವರ ಚಾಳಿ
ಬಂಡ ಭಂಡರೆಲ್ಲರು"

"ಕರುಣೆ ಮರುಕವೆಂಬುದಿಲ್ಲ
ರಾಜಕೀಯ ನಾಯಕರಿಗೆ
ಲೂಟಿಯವರ ಬದುಕಿನ ಗುರಿ
ಸ್ವಾರ್ಥವೊಂದೆಯವರ ಸ್ವರ್ಗ
ಸುಳ್ಳೆಯವರ ಮನೆದೇವರು"[೮]

ರಾಜಕೀಯದ ಹೊಲಸು ಈ ಕಾವ್ಯದಲ್ಲಿ ನೋಡಬಹುದಾಗಿದೆ. 'ಕಾಲಗಾಳಿ-ಯಂತಹ ಸಮರ್ಥ ರೂಪಕ, ಸ್ವಾರ್ಥದ ಸ್ವರ್ಗ, ಸುಳ್ಳನ್ನು ಮನೆದೇವರಾಗಿಸಿದ ಉಪಮಾಚಿತ್ರಗಳು' ಮನಸೆಳೆಯುತ್ತವೆ.

ರಾಜಕೀಯ ವಿಡಂಬನೆ ಈ ಕವಿಗೆ ಇಂದಿನದಲ್ಲ. ಹಿಂದಿನಿಂದಲೂ ಬಂದ ಪ್ರತಿಸ್ಪಂದನ. ೨೦೦೦ದ ಇಸವಿಯಲ್ಲಿ ವೈದ್ಯವಾರ್ತಾ ಪ್ರಕಾಶನದಿಂದ ಪ್ರಕಟವಾದ 'ದೇಜಗೌ ಚುಟುಕುಗಳು' ಸಂಕಲನದಲ್ಲಿ ೨೦೦೯ನೇ ಇಸವಿಯಲ್ಲಿ ಪ್ರಕಟವಾದ ದೇಜಗೌ ಕಾವ್ಯಸಂಕಲನದಲ್ಲಿ ಸಹ ರಾಜಕೀಯದ ಅವಿವೇಕದ ವಿವಿಧ ಅವಾಂತರಗಳ ಕಟುಟೀಕೆಯನ್ನು ನೋಡಬಹುದಾಗಿದೆ.

ರಾಜಕಾರಣಿ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿರುವ ಸುಮಾರು ಮುವತ್ತಮೂರು ಮುಕ್ತಕಗಳಲ್ಲಿ ರಾಜಕಾರಣಿಗಳ ವಂಚನೆಯ ಬದುಕನ್ನು ನಗ್ನಗೊಳಿಸಿ ಅವರ ಜನ್ಮವನ್ನು ಜಾಲಾಡಿರುವುದನ್ನು ನಾವು ನೋಡಬಹುದಾಗಿದೆ.

"ಸಿಗರೇಟು ಕೈಯಲ್ಲಿ ಬಾಯಲ್ಲಿ ಬಾಟಲಿಯು
ಬಗಲಲ್ಲಿ ಕಪ್ಪು ಹಣ, ನಡೆನುಡಿಗಳಲ್ಲಿ ಕಪಟ
ಹಗಲೆಲ್ಲ ಇಸ್ಪೀಟು ಇರುಳು ಸುಳೆಯಸಂಗ
ಬಗೆಯಿದುವೆ ಮಂತ್ರಿಗಳ ಲೀಲೆ ಮಗಳೆ"

"ದುರುಳ ದುರ್ಯೋಧನನ ಮೀರಿಸುವ ಕಿರಬಗಳು
ಗರಳ ದುಶ್ಯಾಸನನ ರಕ್ತ ಸಂಬಂಧಿಗಳು

ಕರಿತರಲೆ ರಾಜಕೀಯಮಾಡೆ ತಪ್ಪುವುದೆ
ಭರತ ಭೂಮಿಯ ದೋತೆ ಕೇಳುಮಗಳೆ"[೯]

ಇಲ್ಲಿ ಮೊದಲ ಕವನದಲ್ಲಿ ರಾಜಕಾರಣಿಯ ಭೌತಿಕ ಚಿತ್ರ ಹಾಗೂ ಅವನ ಜೀವನ ವ್ಯಾಪಾರ ಚಿತ್ರವಾಗಿದೆ.

ಎರಡನೆಯ ಕವನದಲ್ಲಿ ಅವರ ಆಸುರೀ ಶಕ್ತಿಯ ಘೋರ ಚಿತ್ರಣವಿದೆ. ನನಗೆ ತಿಳಿದಮಟ್ಟಿಗೆ ಇಷ್ಟು ನಿಷ್ಠುರವಾಗಿ. ಇಷ್ಟು ಕಠೋರವಾಗಿ, ಇಷ್ಟು ನಿರ್ಭಿಡೆಯಿಂದ ರಾಜಕಾರಣಿಗಳನ್ನು ಉಗಿದಿರುವ ಬೇರೊಬ್ಬ ಕವಿಯನ್ನು ಕಾಣೆ ಎಂಬುದನು ನಾವು ನೋಡಬಹುದಾಗಿದೆ.

ಬೈಗುಳದ ಮಟ್ಟಿಗೆ ಇವರು ಕುಮಾರವ್ಯಾಸನ ಹಾಗೆ. ಕಂಡದ್ದನ್ನು ಕಂಡಂತೆ ಹೇಳುವ ಎದೆಗಾರಿಕೆಯಲ್ಲಿ ಸರ್ವಜ್ಞನ ರೀತಿ, ಯಾವ ಮುಲಾಜಿಲ್ಲದೆ, ಯಾರಿಗೂ ಹೆದರದೆ ಅದೂ ಇಂದಿನ ದುಷ್ಟ ರಾಜಕೀಯದ ಕರಾಳ ವ್ಯವಸ್ಥೆಯಲ್ಲಿ ಕೆಟ್ಟದಕ್ಕೂ ಸಾಕ್ಷೀಪ್ರಜ್ಞೆಯಾಗುವ ತಾಕತ್ತು ನಿಜಕ್ಕೂ ಅಸಾಮಾನ್ಯವಾದುದು ಎಂಬುದನ್ನು ನಾವು ತಿಳಿಯಬಹುದಾಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದು ನಿಂದೆಯೂ ಸಹ ಕಾವ್ಯಗಂಧಿತ್ವದಿಂದ ರಂಜನೆಗೊಂಡಿರುವುದು. ದುರ್ಯೋಧನನ ಮೀರಿಸುವ ಕಿರುಬಗಳು, ದುಶ್ಯಾಸನನ ರಕ್ತ ಸಂಬಂಧಿಗಳು. ಈಡಿಪಸ್ ವಂಶಜರು ಹೀಗೆ ಬಳಕೆಯಾಗುವ ಉಪಮೆ ಮತ್ತು ಪ್ರತಿಮಾ ಚಿತ್ರಗಳು ದೇಜಗೌರವರ ಕಾವ್ಯಶಕ್ತಿಯ ಆಕರ್ಷಣೆಯ ಕಾಲಾಂಶಗಳಾಗಿವೆ. ಇದು ಕಾವ್ಯದ ಯಶಸ್ಸಿಂದು ತೋರುವುದನ್ನು ನಾವು ಗಮನಿಸಬಹುದಾಗಿದೆ.

ಈ ಕವಿ ಇಲ್ಲಿ ಪ್ರಸ್ತಾಪಿಸಿರುವ ಪಕ್ಷಾಂತರದ ಪಿಡುಗು ರಾಷ್ಟ್ರವ್ಯಾಪಿಯಾಗಿದ್ದು ಅದು ಪ್ರಜಾಪ್ರಭುತ್ವದ ಸತ್ವವನ್ನೇ ಬುಡಮೇಲು ಮಾಡುತ್ತಿದೆ. ಪ್ರಜಾಪ್ರಭುತ್ವದ ಯಶಸ್ಸಿಗಾಗಿ ರೂಪಗೊಂಡ ಸ್ವಾತಂತ್ರ್ಯ ಸ್ವಾರ್ಥಕ್ಕಾಗಿ ದುರ್ಬಳಕೆಯಾಗಿ ಹಣ ಮತ್ತು ಅಧಿಕಾರಕ್ಕೆ ಇಂಬುಕೊಡುತ್ತದೆ. ಇದರಿಂದಾಗಿ ಆರ್ಥಿಕ ಅಭದ್ರತೆ ಕಾಡುತ್ತದೆ. ಈ ಅನಾಹುತದ ಒಳಸುಳಿಗಳನ್ನೆಲ್ಲ ತಿಳಿದೇ ದೇಜಗೌ "ತಾಯಿಗಂಡರ ಪಕ್ಷಾಂತರಿಗಳು"[೧೦] ಎಂದು ಕರೆದಿರುವುದನ್ನು ನಾವು ನೋಡಬಹುದಾಗಿದೆ.

ದೇಜಗೌ ರಾಜಕೀಯ ಮಾತ್ರವಲ್ಲದೆ ಅವರು ಇನ್ನು ತುಂಬ ಸಂಕೀರ್ಣವಾದ ಕವಿತೆಗಳನ್ನು ನಾವು ನೋಡಬಹುದಾಗಿದೆ. ಜೀವನದ ವ್ಯಾಪಕವಾದ ಅನುಭವ ಇಲ್ಲಿ

ಮೈತೆರೆದುಕೊಂಡಿದೆ. ಲೇಖಕರ ವೈಯಕ್ತಿಕ ಬದುಕು ಸಹ ಕಾವ್ಯಕ್ಕೆ ನೆಲೆಗಟ್ಟಾಗಿದೆ. ಹೇಳಿ ಕೇಳಿ ಜವರೇಗೌಡರು ರೈತನ ಮಗ.

ಮಣ್ಣಿನ ಬದುಕೇ ಇಂದೂ ಅವರನ್ನು ಆವರಿಸಿಕೊಂಡಿದೆ. ಜಾನಪದದ ಹಾಲುಂಡು ಬೆಳೆದ ಈ ಕವಿಗೆ ಮಣ್ಣಿನ ಮಕ್ಕಳ ಶೋಷಣೆಗೊಳಗಾಗಿರುವ ಸಂಗತಿ ಪ್ರತ್ಯಕ್ಷದರ್ಶಿಯಾಗಿದೆ. ಅವರಿಗಾಗಿ ಮನಮಿಡಿದಿದೆ; ಮನಸಿಡಿದಿದೆ. ಅದು ಕಾವ್ಯಸ್ಫೋಟನಕ್ಕೆ ಎಡೆಮಾಡಿರುವುದನ್ನು ಈ ಕೆಳಗಿನ ಕವನದ ಮೂಲಕ ನೋಡಬಹುದಾಗಿದೆ.

"ರೈತನುಸಿರು ಜ್ವಾಲೆಯಾಗಿ
ಅವನ ಬೆವರು ಲಾವವಾಗಿ
ಸಿರಿಯ ಜನರ ನೊಣೆವುದು
ತಿರೆಯನೆಲ್ಲ ಸುಡುವುದು"[೧೧]

ಇಲ್ಲಿನ ಕವಿತೆ ಹಿಂದೆ ಕವಿಯ ಅದಮ್ಯ ಜೀವನೋತ್ಸಾಹ ಪ್ರಕಟವಾಗಿದೆ. ಮನ ಸಂಭ್ರಮಿಸಿದೆ. ಆಶಾವಾದ ವಿಜೃಂಭಿಸಿದೆ. ಆದ್ದರಿಂದಲೇ ತೊಂಭತ್ತೊಂದರ ಈ ಇಳಿವಯಸ್ಸಿನಲ್ಲಿ ಅವರ ಕಾವ್ಯಮಯೂರ ಗರಿಗೆದರಿ ನರ್ತಿಸಿದೆ. ಜೀವನೋತ್ಸಾಹ ಇರುವ ತನಕ ಯಾವುದೇ ಕವಿಮನಸ್ಸಿಗೆ ಇಪ್ಪತ್ತರ ಹರೆಯವಿರುತ್ತದೆ. ಮುಪ್ಪು ಪೇರಿ ಕೀಳುತ್ತದೆ ಎಂಬುದನ್ನು ಮೇಲಿನ ಕವನಗಳಿಂದ ನಾವು ತಿಳಿಯಬಹುದಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಟಿ.ಕೆ.ಕೆಂಪೇಗೌಡ, ಅನಿಕೇತನದಲ್ಲೊಂದು ವಿಶ್ವಚೇತನ, ಪು. ೫, ಯಡೆಯೂರು ಸಿದ್ಧಲಿಂಗೇಶ್ವರ ಪ್ರಕಾಶನ, ಟಿ.ಕೆ.ಲೇ ಔಟ್, ಮೈಸೂರು, ೨೦೦೯.

೨. ಅದೇ, ಪು. ೬.

೩. ಅದೇ, ಪು. ೬.

೪. ಅದೇ, ಪು. ೭.

೫. ಅದೇ, ಪು. ೮.

೬. ಡಾ. ಮಳಲಿ ವಸಂತಕುಮಾರ್, ಮುನ್ನುಡಿ, ದೇಜಗೌ ಸೆಳಕು ಮೆಲುಕು, ಪು. ೬, ವೈದ್ಯವಾರ್ತೆ ಪ್ರಕಾಶನ, ಮೈಸೂರು, ೨೦೦೧.

೭. ಅದೇ, ಪು. ೪.

೮. ಅದೇ, ಪು. ೬.

೯. ಅದೇ, ಪು. ೭.

೧೦. ಅದೇ, ಪು. ೮.

೧೧. ಅದೇ, ಪು. ೧೧.

ಅಧ್ಯಾಯ – ೨

ಕಾವ್ಯ ಸ್ವರೂಪ ಮತ್ತು ಲಕ್ಷಣ

ಕಾವ್ಯ ಎಂದರೇನು? ಹಾಗು ಅದರ ಸ್ವರೂಪ ಲಕ್ಷಣವನ್ನು ತಿಳಿಯುವುದಕ್ಕಿಂತ ಪೂರ್ವದಲ್ಲಿ ಕಾವ್ಯ ಹೇಗೆ ಹುಟ್ಟುತ್ತದೆ ಎಂದು ತಿಳಿಯುವುದು ಆವಶ್ಯಕ. ಕಾವ್ಯ ಯಾವಾಗ ಹುಟ್ಟಿತು? ಎಂಬ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರ ನೀಡುವುದು ಅಸಾಧ್ಯ. ಶಿಷ್ಟ ಸಾಹಿತ್ಯದ ತಾಯಿಬೇರು ಜನಪದ ಸಾಹಿತ್ಯ. ಮೊದಲು ಕಾವ್ಯ ಕಾಣಿಸಿಕೊಂಡಿದ್ದು ಜನಪದರಲ್ಲಿ, ಜನಪದರು ಪಟ್ಟ ಪಾಡೇ ಕಾವ್ಯ ರೂಪ ತಳೆಯಿತು.

ಜನಪದರ ಕಾವ್ಯ ಬರವಣಿಗೆಯ ರೂಪದಲ್ಲಿರಲಿಲ್ಲ. ಅದು ಬಾಯಿಂದ ಬಾಯಿಗೆ ಬೆಳೆದು ಬಂದಿತು. ಸಾಮಾನ್ಯವಾಗಿ ಜನಪದರಲ್ಲಿ ಕಾವ್ಯಕ್ಕೆ ಪದ ಎಂಬ ಹೆಸರಿದೆ. "ಪದ ಎಂದರೆ ಹಾಡು"[೧] ಎಂದರ್ಥ. ಹಾಡಿಗೆ ತಾಳ, ಲಯ, ಗೇಯ, ನಾದ, ಮೇಳವಿಸಿಕೊಂಡರೆ ಅದು ಕಾವ್ಯವಾಗುತ್ತದೆ.

ಯಾವಾಗ ಮನುಷ್ಯ ಬರವಣಿಗೆಯ ಕಲೆಯನ್ನು ರೂಢಿಸಿಕೊಂಡನೋ ಅಂದಿನಿಂದ ಅವನು ತನ್ನ ಅನುಭವವನ್ನು ಬರೆಯುವುದಕ್ಕೆ ತೊಡಗಿದ ಆ ಹೊತ್ತಿನಿಂದ ಇಲ್ಲವೆ ಬೇರೆಯಾಗುವಂಥ ಒಂದು ಸ್ಥಿತಿಗೆ ಉತ್ಕರ್ಷಗೊಳ್ಳುವಂಥದ್ದು ಅಥವಾ ಅತಿಶಯವಾದದ್ದು. ಈ ಅತಿಶಯದ ಅಂಶವೇ ಅನುಭವ ವಿಶೇಷದ ಮುಖ್ಯ ಲಕ್ಷಣ. "ಹೇಳಬೇಕೆಂದರೆ ಅನುಭವದಲ್ಲೇ ವಿಶೇಷತೆ ಪೂರ್ವದಲ್ಲೇ ಮೈಗೂಡಿಸಿಕೊಂಡಿರುತ್ತದೆ. ಒಂದು ಪಕ್ಷ ಅದು ಇರಬಹುದು ಇಲ್ಲದಿರಬಹುದು. ಬುದ್ಧಿಯ ಮೂಲಕ ಲೋಕ ವಿಷಯಗಳನ್ನು ಗ್ರಹಿಸಿ ತರ್ಕಬದ್ಧವಾಗಿ ನಿರೂಪಿಸುವ ಕ್ರಮವನ್ನು ಶಾಸ್ತ್ರ ಎಂದು ಭಾವದ ಮೂಲಕ ಗ್ರಹಿಸಿ ಅದನ್ನು ಅಭಿವ್ಯಕ್ತಿಸುವ ಪ್ರಕ್ರಿಯೆಯನ್ನು ಕಾವ್ಯವೆಂದು ಕರೆಯಲಾಗಿದೆ."[೨] ಕಾವ್ಯ ಒಂದು ಕಲೆ, ಯಾವುದೇ ಒಂದು ವಿಷಯವನ್ನು ಅತ್ಯಂತ ರಮ್ಯವಾಗಿ ನಿರೂಪಿಸುವುದೇ ಕಲೆ.

ಒಂದು ವಿಷಯವನ್ನು ಎರಡು ದೃಷ್ಟಿಕೋನಗಳಿಂದ ಪರಿವೀಕ್ಷಿಸುತ್ತೇವೆ.

೧) ಮೊದಲನೆಯದು ಕಲಾತ್ಮಕ ದೃಷ್ಟಿ

೨) ಎರಡನೆಯದು ವೈಜ್ಞಾನಿಕ ದೃಷ್ಟಿ

ಉದಾ: ಒಂದು ಹೂವನ್ನು ಅದರ ಸೌಂದರ್ಯವನ್ನು ನೋಡಿ ಆನಂದ ಪಟ್ಟೋ ಅಥವಾ ಅದರ ಹೀನ ಸ್ಥಿತಿ ಮಾತಿನ ಬಾಯಿ ಕಾವ್ಯವಾಗಿದ್ದು ಇದರಿಂದ ಬರವಣಿಗೆಯ

ರೂಪ ಪಡೆದುಕೊಂಡಿತ್ತು. ಕಾವ್ಯ ಮೊದಲು ಜನ್ಮ ತಳೆದದ್ದು ಜನಪದರಲ್ಲಿ ಎಂಬುದು ವ್ಯಕ್ತಪಡುತ್ತದೆ.

ಕಾವ್ಯದ ಲಕ್ಷಣ ಸ್ವರೂಪವನ್ನು ಇದಮಿತ್ಥಂ ಎಂದು ಹೇಳುವುದು ಕಷ್ಟವೆನಿಸಿದರೂ ಕಾವ್ಯ ಮೂಲತಃ ಒಂದು ಅನುಭವಕ್ಕೆ ಈಡಾಗುವ ಒಂದು ವೈಶಿಷ್ಟ್ಯವೆನ್ನಬಹುದು. ಕವಿಗೊದಗುವ ಲೋಕಾನುಭವ ಜನ್ಯವಾದ ಅನುಭವ ವಿಶೇಷವನ್ನು ಓದುಗನ ಮನದಾಳದ ವಿಶೇಷವನ್ನಾಗಿಸುತ್ತದೆ. ಇದರಲ್ಲಿನ ಭಾಷೆ, ಛಂದಸ್ಸು, ಪ್ರತಿಮೆಗಳು ಕಾವ್ಯದ ಒಟ್ಟಂದವನ್ನು ಹೆಚ್ಚಿಸುವಂತಾಗುತ್ತದೆ.

"ಈ ಅನುಭವ ವೈಶಿಷ್ಟ್ಯವನ್ನು ಕಟ್ಟಿಕೊಡುವ ಶಬ್ದಾರ್ಥ ರೂಪದ ಅಭಿವ್ಯಕ್ತಿಯಲ್ಲಿ ಮೈ ಪಡೆದುಕೊಳ್ಳುವ ಕವಿಯ ಅನುಭವವಿಶೇಷವೇ ಕಾವ್ಯ. ಲೋಕದ ಅನುಭವವನ್ನು ಇದ್ದ ಹಾಗೇ ಹೇಳುವುದಾದರೆ ಅದು ಕಾವ್ಯವಾಗುವುದಿಲ್ಲ; ಅದು ಕೇವಲ ವರದಿಯಂತಾಗುತ್ತದೆ ಎಂದು ಹೇಳುವುದಿದೆ."[೩] (ಅಥವಾ ಹೇಳಲಾಗುವುದು).

ಕಾವ್ಯವನ್ನು ಅನುಭವ ವಿಶೇಷ ಎಂದು ಕರೆದಿದೆ. ಏಕೆಂದರೆ ಅದು ಸಾಧಾರಣಕ್ಕಿಂತಲೂ ಬೇರೆಯಾದದ್ದುದನ್ನು ಕಂಡು ದುಃಖಪಟ್ಟೋ ಅಥವಾ ಹರ್ಷಪಟ್ಟೋ ಕೆಲವೊಂದು ಮಾತುಗಳನ್ನು ಆಡಲು ನಮ್ಮ ಮನಸ್ಸು ತವಕಿಸಬಹುದು. ನಮ್ಮ ಭಾವನೆ ಅಥವಾ ಅನಿಸಿಕೆಗಳನ್ನು ರಮ್ಯವಾದ ರೀತಿಯಲ್ಲಿ ಅಭಿವ್ಯಕ್ತಿಸಿದರೆ ಅದುಕಾವ್ಯ ಕಲೆಯೆನಿಸಿಕೊಳ್ಳಬಹುದು. "ಹೂವನ್ನು ಕುರಿತು ಕವಿತೆಯೊಂದು ರೂಪುಗೊಳ್ಳುವ ಸಾಧ್ಯತೆ ಇರುತ್ತದೆ. ಆದರೆ ಅದೇ "ಗುಲಾಬಿ ಹೂವಿನ ಬಣ್ಣ, ಆಕಾರ, ಪರಿಮಳ, ಆ ಪಕಳೆಗಳು ರೂಪಣೆಗೊಂಡಿರುವ ರೀತಿ, ಟೊಂಗೆ, ಎಲೆ, ಇವೆಲ್ಲವುಗಳನ್ನು ಕುರಿತು ಹೂವಿನ ವೈಜ್ಞಾನಿಕ ಅಂಶಗಳನ್ನು ತಿಳಿಯಪಡಿಸಿದಾಗ ಆ ಕೆಲಸ ಶಾಸ್ತ್ರವೆನ್ನಿಸಿಕೊಳ್ಳುತ್ತದೆ. ಶಾಸ್ತ್ರ ರಸಾತ್ಮಕವಾದುದಾದರೆ ಜನಸಾಮಾನ್ಯಕ್ಕೂ ಹೃದಯಂಗಮಯವಾಗುವುದರಲ್ಲಿ ಸಂದೇಹವಿರದು. ಇಲ್ಲಿ ಉಂಟಾಗುವ ಆನಂದವು ಹೃದಯಕ್ಕೆ ಮಾತ್ರವಲ್ಲ ಬುದ್ಧಿಗೂ ಗ್ರಾಸವಾಗುತ್ತದೆ. ಕಾವ್ಯದ ಮುಖ್ಯ ಉದ್ದೇಶ ಆನಂದ ತರುವುದು; ಶಾಸ್ತ್ರದ ಮುಖ್ಯ ಉದ್ದೇಶ ತತ್ತ್ವ ನಿರೂಪಣೆ ಹಾಗೂ ವಿವರಣೆಯಾಗಿರುತ್ತದೆ."[೪] ಕಾವ್ಯ ಎಂಬುದು ಸಂಸ್ಕೃತದ ಮೂಲಧಾತು ಕವೃ ಎಂಬುದರಿಂದ ನಿಷ್ಪನ್ನವಾಗಿದೆ. ಕವೃ ಎಂದರೆ ವರ್ಣನೆ ಎಂದರ್ಥ. ಕಾವ್ಯವು ವರ್ಣಿಸುವಂಥ ಸ್ವರೂಪದಾಗಿರುತ್ತದೆ.

ಕಾವ್ಯದ ಸಾಮಾನ್ಯ ಅರ್ಥ

೧) ಭಾಷೆಯ ಕಲಾತ್ಮಕವಾದ ಪರಮಸಿದ್ಧಿಯ ಬರವಣಿಗೆಯ ರೂಪವೇ ಕಾವ್ಯ.

೨) ರಸಾತ್ಮಕವಾದ ಬರವಣಿಗೆಯನ್ನು ಕಾವ್ಯವೆಂದು ಕರೆಯಬಹುದಾಗಿದೆ.

೩) ಶಬ್ದ ಶರೀರದಲ್ಲಿ ಅರ್ಥಸತ್ವದ ಆತ್ಮ ಹೊಂದಿರುವ ಬರವಣಿಗೆಯೇ ಕಾವ್ಯ

೪) ವಾಚ್ಯವಿದ್ದರೂ ಸೂಚ್ಯಾರ್ಥದಲ್ಲಿರುವ ಬರವಣಿಗೆಯೇ ಕಾವ್ಯ

೫) ಬರಿಕಣ್ಣಿಗೆ (ಹಣೆಗಣ್ಣಿಗೆ) ಕಂಡಿರುವುದನ್ನು ಒಳಗಣ್ಣಿನಿಂದ ನೋಡಿ ಬಣ್ಣಿಸುವುದೇ ಕಾವ್ಯ

೬) ರಸಾತ್ಮಕವಾದ ಪದಪುಂಜಗಳ ಸಮೂಹವೇ ಕಾವ್ಯ

೭) ಕಣ್ಣಿಗೆ ಕಾಣಿಸಿದುದನ್ನು ಆತ್ಮಕ್ಕೆ ಆನಂದ ನಿಡುವಂತೆ ವರ್ಣಿಸುವುದೇ ಕಾವ್ಯ.

ಕಾವ್ಯ ಎಂದರೇನು? ಎಂಬುದರ ಬಗ್ಗೆ ಚರ್ಚಿಸಿದಂತಾಯಿತು. "ಕವಿ ಪರಿಸರದ ಕೂಸು"[೫] ಯಾವನೇ ಕವಿಯಾದವನು ತನ್ನ ಕಾಲಕ್ಕೆ ಅಥವಾ ಸಮಾಜಕ್ಕೆ ಸ್ಪಂದಿಸಿ ಕಾವ್ಯವನ್ನು ರಚಿಸಬೇಕಾಗುತ್ತದೆ. ಇಲ್ಲವಾದರೆ ಆ ಕಾವ್ಯ ಯೋಗ್ಯವೆನಿಸದು. ಅದು ಯಾವಾಗಲೂ ಹೊಸ ಹೊಸದಾಗಿಯೆ ಇರುತ್ತದೆ.

ಭಾರತೀಯ ಲಾಕ್ಷಣಿಕರು ಕಾವ್ಯದ ಸ್ವರೂಪವನ್ನು ತಿಳಿಸಲು ಪ್ರಯತ್ನಪಟ್ಟಿರುವುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಭಾಮಹನ ಪ್ರಕಾರ: ಆತ "ಶಬ್ದಾರ್ಥೌ ಸಹಿತೌ ಕಾವ್ಯಂ" ಎಂದು ಹೇಳುತ್ತಾನೆ. ಅಂದರೆ ಶಬ್ದ ಹಾಗೂ ಅರ್ಥವನ್ನು ಒಳಗೊಂಡ ಅದು ಸಹಿತವನ್ನುಂಟು ಮಾಡುವುದೇ ಕಾವ್ಯ."[೬] ಕಾವ್ಯ ಕೇವಲ ಶಬ್ದ ಅರ್ಥಗಳನ್ನು ಒಳಗೊಂಡು ಸಹಿತವಾಗಿರುವುದು ಅಲ್ಲದೇ ಅದು ವಕ್ರೋಕ್ತಿಯುಕ್ತವಾಗಿರಬೇಕು. ವಕ್ರೋಕ್ತಿ ಎಂದರೆ ಕೊಂಕು ಎಂದರ್ಥ. ಹೀಗೆ ಭಾಮಹ ಪರಮಾನಂದವನ್ನುಂಟು ಮಾಡುವುದಕ್ಕೆ ಕಾವ್ಯವೆಂದು ಕರೆಯುವನು.

ದಂಡಿಯ ಪ್ರಕಾರ: (ಕ್ರಿ.ಶ. ೭ನೇ ಶತಮಾನ) ದಂಡಿ ತನ್ನ ಕಾವ್ಯಾದರ್ಶದಲ್ಲಿ ಕಾವ್ಯದ ಸ್ವರೂಪವನ್ನು ಹೇಳುತ್ತಾ "ಕಾವ್ಯಂ ಸ್ಫುರದಲಂಕಾರ: ಗುಣವದೋಷ ವರ್ಜಿತಂ"

ಅಂದರೆ "ಅಲಂಕಾರದಿಂದಲೂ ಗುಣ ಸೌಂದರ್ಯ ದೋಷರಹಿತವಾದ ಶಬ್ದಗಳ ಸಮೂಹವೇ ಕಾವ್ಯ"[೭] ಎಂದು ಹೇಳಿ "ಶರೀರಂ ತಾವದಿಷ್ಟಾರ್ಥ ವ್ಯವಚ್ಛಿನ್ನಾದವಾಲಿ"[೮]

ಎಂದಿದ್ದಾನೆ. ಇಷ್ಟವಾದ ಅರ್ಥವನ್ನುಳ್ಳ ಪದ ಸಮೂಹವೇ ಕಾವ್ಯ. ಇಲ್ಲಿ ಇಷ್ಟವೆಂದರೇ ಪ್ರಿಯ ಎಂದರ್ಥ ಕೊಡುತ್ತದೆ ಎಂಬುದನ್ನು ನಾವು ತಿಳಿಯಬಹುದಾಗಿರುತ್ತದೆ.

"ದಂಡಿಯ ಹತ್ತು ಗುಣಗಳೇ ಕಾವ್ಯದ ಆತ್ಮ"ವೆಂದು ಹೇಳುತ್ತಾನೆ.[೯]

ಮಮ್ಮಟನ ಪ್ರಕಾರ ಕಾವ್ಯವೆಂದರೆ: "ತದ ದೋಷೌ ಶಬ್ದಾರ್ಥೌ ಸಗುಣಾವಲಂ ಕೃತಿಂ ಪುನಃ ಕ್ವಾಪಿ" ಕಾವ್ಯವು ದೋಷವಿಲ್ಲದ ಗುಣ ಸಹಿತವಾದ ಶಬ್ದಾರ್ಥಗಳಿಂದ ಕೂಡಿರುತ್ತದೆ."[೧೦] ಇವುಗಳಲ್ಲಿ ಕ್ವಚಿತ್ತವಾಗಿ ಅಲಂಕಾರವಿಲ್ಲದಿರಬಹುದು ಎಂದು ಹೇಳಿದ್ದಾನೆ. ಇವನ ಲಕ್ಷಣಕ್ಕೂ ಬಾಮಹ ವಾಮನಾದಿ ಪ್ರಾಚೀನಾಲಂಕಾರಿಕರ ಲಕ್ಷಣಗಳಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಅವರಂತೆಯೇ ಇವನು ಗುಣದೋಷ ಅಲಂಕಾರ ಇವುಗಳನ್ನಷ್ಟೇ ಹೇಳಿ ತನ್ನ ಲಕ್ಷಣಗಳನ್ನು ಮುಗಿಸಿ ಬಿಟ್ಟಿದ್ದಾನೆ. ಆದರೆ ಕಾವ್ಯ ಲಕ್ಷಣ ಪರಿಸ್ಕರಣಕ್ಕೆ ಮಮ್ಮಟನಿಂದ ಒಂದು ಉಪಕಾರವಾಗಿದೆ. ಅಲಂಕಾರ ಕಾವ್ಯದಲ್ಲಿ ನಿಯತ ಸ್ಥಾನದಲ್ಲಿರಬೇಕಾಗಿಲ್ಲ ಎಂಬುದನ್ನು ಅವನು ಕ್ರೋಢಿಕರಿಸಿದ್ದಾನೆ ಎಂಬುದನ್ನು ನಾವು ತಿಳಿಯಬಹುದಾಗಿದೆ.

ಸಾಮಾನ್ಯವಾದ ಅಲಂಕಾರವಿರಬೇಕೆಂಬುದು ಮಮ್ಮಟನ ಅಭಿಪ್ರಾಯ "ಕ್ವಚಿತ್ತು ಸ್ಫುಟಾಲಂಕಾರ್ ವಿರಹೇಪನ ಕಾವ್ಯತ್ವಹಾನಿ" ಅಂದರೆ ಒಂದೊಂದು ಕಡೆ ಮಾತ್ರ ಸ್ಫುಟವಾದ ಅಲಂಕಾರವಿಲ್ಲದಿದ್ದರೂ ಕಾವ್ಯಾತ್ವಕ್ಕೆ ಹಾನಿಯಲ್ಲ"[೧೧] ಎಂಬುದಾಗಿ ಹೇಳಿದ್ದಾನೆ.

ಜಗನ್ನಾಥನ ಪ್ರಕಾರ ಕಾವ್ಯವೆಂದರೆ "ರಮಣೀಯಾರ್ಥ ಪ್ರತಿಪಾದಕ ಶಬ್ದ: ಕಾವ್ಯಂ" ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದಗಳೇ ಕಾವ್ಯವೆಂದು"[೧೨] ಹೇಳುತ್ತಾನೆ. ಕಾವ್ಯದಿಂದ ಲೋಕೋತ್ತರವಾದ ಆನಂದವು ಅನುಭವದಿಂದ ಸಾಕ್ಷಾತ್ಕಾರವಾಗಿರುತ್ತದೆ. ರಮಣೀಯವಾದುದನ್ನು ಪುನಃ ಪುನಃ ಅನುಸಂದಾನ ಮಾಡುವುದರಿಂದ ಅದು ಉಂಟಾಗುತ್ತದೆ. ಜಗನ್ನಾಥನ ಈ ವಾಕ್ಯ ನವೀನವಾಗಿದೆ ಎಂಬುದನ್ನು ಸ್ವತಃ ಹೇಳಿದ್ದಾನೆ.

ಅಗ್ನಿಪುರಾಣದ ಪ್ರಕಾರ ಕಾವ್ಯವೆಂದರೆ "ಅಲಂಕಾರಗಳಿಂದ ಶೋಭಿತ-ವಾಗಿಯೂ, ಗುಣಗಳಿಂದ ಕೂಡಿಯೂ, ದೋಷಗಳಿಲ್ಲದೆಯೂ ಇಷ್ಟವಾದ ಅರ್ಥವುಳ್ಳದ್ದಾಗಿಯೂ ಇರುವ ಪದ ಸಮೂಹವೇ ಕಾವ್ಯ."[೧೩] ಹೀಗೆ ಆಲಂಕಾರಿಕರು ಕಾವ್ಯದ ಸ್ವರೂಪ ಲಕ್ಷಣಗಳನ್ನು ಹೇಳಲು ಪ್ರಯತ್ನ ಮಾಡಿದ್ದಾರೆ. ಕಾವ್ಯದ

ಲಕ್ಷಣವನ್ನು ನಿರ್ಣಯಿಸಲು ಹೊರಡುವುದರ ಫಲಿತಾಂಶವಿಷ್ಟೆ ಎಷ್ಟೆಷ್ಟೊ ಪರಿಷ್ಕರ ನಡೆಯಲಿ ಈ ಲಕ್ಷಣ ಸರ್ವ ಸಮರ್ಪಕವೆಂಬ ಭಾವನೆ ಬರುವುದಿಲ್ಲವೆಂದು ಪಂಡಿತ ತಾತಾಚಾರ್ಯ ಶಿರೋಮಣಿಯವರು ಅಭಿಪ್ರಾಯ ಪಡುತ್ತಾರೆ.

ಇವರು ಹೇಳುವಂತೆ ಕಾವ್ಯವೆಂದರೆ ಆಹ್ಲಾದವನ್ನೇ ನೇರವಾಗಿ ಗುರಿ ಓಡಿದು ಅದನ್ನು ಉಂಟುಮಾಡುವ ಶಬ್ದಾರ್ಥಗಳು ಕಾವ್ಯವೆಂದು ನನ್ನ ಸಿದ್ಧಾಂತ ಎನ್ನುತ್ತಾರೆ. ಕಾವ್ಯ ಎನ್ನುವುದನ್ನು ಕಾವ್ಯಮಿಮಾಂಸೆಯಲ್ಲಿ ನೋಡಬಹುದಾಗಿದೆ. ಒಟ್ಟಿನಲ್ಲಿ ಕಾವ್ಯವೆಂದರೆ ಏನೆಂಬುದು ಅದು ಅನುಭವಕ್ಕೆ ಮಾತ್ರ ಗೊತ್ತು; ಬಾಯಿ ಮಾತಿನಲ್ಲಿ ಖಚಿತವಾಗಿ ಹೇಳುವುದು ಕಷ್ಟ.

ಈ ಮೇಲಿನ ಎಲ್ಲಾ ಕಾವ್ಯಮಿಮಾಂಸಕರ ವ್ಯಾಖ್ಯಾನಗಳನ್ನು ಗಮನಿಸಿ ಕಾವ್ಯದ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಕಾವ್ಯದ ಲಕ್ಷಣಗಳು:

೧) ಕಾವ್ಯ ಒಂದು ಕಲೆಯಾಗಿದೆ. ಒಂದು ವಿಷಯವನ್ನು ರಮ್ಯವಾಗಿ ನಿರೂಪಿಸುವ ಶಕ್ತಿ ಕಾವ್ಯಕ್ಕಿದೆ.

೨) ಕಾವ್ಯ ಕವಿಗೆ ಒದಗುವ ಲೋಕಾನುಭವ ಜನ್ಯವಾದ ಒಂದು ಅನುಭವ ವಿಶೇಷವಾಗಿದೆ.

೩) ಕಾವ್ಯಕ್ಕೂ ಶಾಸ್ತ್ರಕ್ಕೂ ವ್ಯತ್ಯಾಸವಿದೆ. ಕಾವ್ಯದಿಂದ ಹೃದಯಕ್ಕೆ ಆನಂದ ದೊರೆತರೆ ಶಾಸ್ತ್ರ ಬುದ್ಧಿಗೆ ಆನಂದವನ್ನು ನೀಡುತ್ತದೆ.

೪) ಕಾವ್ಯವೆಂದರೆ ಒಂದು ವಿಷಯವನ್ನು ವರ್ಣಿಸುವುದು.

೫) ನಮ್ಮ ಮನಸ್ಸಿನ ಭಾವನೆಗಳನ್ನು ರಮ್ಯವಾದ ರೀತಿಯಲ್ಲಿ ಹೇಳಿದರೆ ಅದು ಕಾವ್ಯವಾಗುತ್ತದೆ.

೬) ಕಾವ್ಯ ಭಾಷೆಯ ಕಲಾತ್ಮಕವಾದ ಸಿದ್ಧಿಯನ್ನು ಪಡೆದುಕೊಂಡಿದೆ.

೭) ಕಾವ್ಯ ಯಾವಾಗಲೂ ಸೃಜನಶೀಲತೆಯನ್ನು ಪಡೆದುಕೊಂಡಿರುತ್ತದೆ.

೮) ಆತ್ಮಕ್ಕೆ ಆನಂದವನ್ನು ನೀಡುವ ಶಕ್ತಿ ಕಾವ್ಯಕ್ಕಿದೆ.

೯) ಕಾವ್ಯವು ಸಹೃದಯರಿಗೆ ಆನಂದವನ್ನು ನೀಡುವ ಸಾಮರ್ಥ್ಯ ಹೊಂದಿರುತ್ತದೆ.

೧೦) ಕಾವ್ಯದಲ್ಲಿ ದೋಷಗಳು ಕಟ್ಟುನಿಟ್ಟಾಗಿ ಬರಬಾರದೆಂಬ ನಿಯಮವೇನು ಇಲ್ಲ. ಕೆಲ ದೋಷಗಳಿದ್ದರೂ ಅದು ಧ್ವನಿಪೂರ್ಣವಾಗಿರಬೇಕು.

೧೧) ಕಾವ್ಯದಲ್ಲಿ ಅಲಂಕಾರ ನಿಯತವಾಗಿ ಇರಬಹುದು ಅಥವಾ ಇಲ್ಲದಿರಬಹುದು.

೧೨) ರಮಣೀಯ ಶಬ್ದದ ಪ್ರತಿಪಾದನೆ

ಇಂತಹ ಗುಣಗಳನ್ನು ಹೊಂದಿರುವುದಕ್ಕೆ ನಾವು ಕಾವ್ಯದ ಲಕ್ಷಣಗಳೆಂದು ಹೇಳಬಹುದಾಗಿದೆ.

ಕಾವ್ಯಕ್ಕೆ ಕಾರಣಗಳು:

ಯಾವುದೇ ಒಂದು ವಸ್ತು ನಿರ್ಮಾಣವಾಗಬೇಕಾದರೆ ಅದಕ್ಕೆ ಕೆಲವು ಆಕರ ಪರಿಕರಗಳು ಬೇಕೇಬೇಕು. ಹಾಗೆಯೇ ಕಾವ್ಯವು ಓತಪ್ರೋತವಾಗಿ ಹರಿದು ಬರುವುದಕ್ಕೆ ಕೆಲವು ಶಕ್ತಿಗಳ ಸಹಾಯಬೇಕು. ಕವಿಗೆ ಕಾವ್ಯವನ್ನು ರಚಿಸಬೇಕಾದರೆ ಕೆಲವೊಂದು ಅರ್ಹತೆಗಳು ಬೇಕಾಗುತ್ತವೆ.

ಕಾವ್ಯ ಭಾವ ಸಂಬಂಧಿಯಾದದ್ದು, ಕವಿಯಾಗಿದ್ದವನು ಭಾವನೆಯಿಂದ ಶ್ರೀಮಂತನಾಗಿರಬೇಕು ಭಾವನೆ ಎಂಬುದು ಹೃದಯಕ್ಕೆ ಸಂಬಂಧಿಸಿರುವಂತದ್ದು ಭಾವನಾತ್ಮಕ ಸಂಬಂಧ ಹುಟ್ಟಿನಿಂದಲೇ ಬರುತ್ತದೆ ಕಾವ್ಯಕ್ಕೆ ಇರುವ ಕಾರಣಗಳು ಅಥವಾ ಅಕರಗಳಾಗುತ್ತದೆ. ನಮ್ಮ ಭಾರತೀಯ ಅಲಂಕಾರಿಕರು ಕಾವ್ಯಕ್ಕೆ ಕಾರಣಗಳನ್ನು ಕುರಿತು ಚರ್ಚಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ರಾಜಶೇಖರನು "ಸ್ವಾಸ್ಥ್ಯಂ ಪ್ರತಿಭಾಭ್ಯಾಸೋ ಭಕ್ತಿರ್ವಿದ್ವತ್ಕಥಾ ಬಹುಶ್ರುತತಾ ಸ್ಮೃತಿದಾರ್ಢ್ಯ ಮನಿರ್ವೆದಶ್ಚ ಮಾತರೋಕ್ಪ್ಟ ಕವಿತ್ವಸ್ಯ" ಎಂದು ಹೇಳಿರುವುದನ್ನು ನಾವು ನೋಡಬಹುದಾಗಿದೆ.

ಕಾವ್ಯದ ರಚನೆಯನ್ನು ಮಾಡಬೇಕಾದರೆ ಈ ಕೆಳಗಿನ ಗುಣಗಳು ಅತ್ಯಂತ ಮಹತ್ವದ್ದಾಗಿದೆ.

೧) ದೇಹ ಹಾಗೂ ಮನಸ್ಸುಗಳ ಸ್ವಾಸ್ಥ್ಯತೆ

೨) ಪ್ರತಿಭೆ

೩) ಅಭ್ಯಾಸ

೪) ಭಕ್ತಿ

೫) ವಿದ್ವಾಂಸರೊಡನೆ ಚರ್ಚೆ

೬) ಪಂಡಿತರೊಡನೆ ಚರ್ಚೆ

೭) ದೃಢವಾದ ಜ್ಞಾಪಕ ಶಕ್ತಿ

೮) ಉತ್ಸಾಹ

ಈ ಮೇಲಿನ ಎಂಟು ಗುಣಗಳು ಯಾರ ಹತ್ತಿರ ಇರುತ್ತವೆಯೋ ಅವರು ಕಾವ್ಯ ರಚಿಸಲಿಕ್ಕೆ ಸಾಧ್ಯವೆಂದು ಹೇಳಬಹುದಾಗಿದೆ. ಈ ಎಂಟು ಗುಣಗಳು "ಕವಿತೆಯ ತಾಯಿಯರು"[೧೪] ಎಂದು ಹೇಳಬಹುದು.

ಈ ಮಾತೃಗುಣದಲ್ಲಿ ಕವಿತೆಗೆ ಹೆತ್ತ ತಾಯಿ 'ಪ್ರತಿಭೆ' ಮಿಕ್ಕೆಲ್ಲವುಗಳು ಸಾಕು ತಾಯಿಯರೆಂದು ರಾಜಶೇಖರ ತಿಳಿಸಿರುವುದನ್ನು ನಾವು ನೋಡಬಹುದಾಗಿದೆ.

ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶದಲ್ಲಿ ಕಾವ್ಯಕ್ಕೆ ತನ್ನದೇ ಆದಂತಹ ಒಂದು ಉದಾಹರಣೆ ಕೊಟ್ಟಿದ್ದಾನೆ.

'ರವಿ ಕಾಣದ್ದನ್ನು ಕವಿ ಕಂಡ' ಎನ್ನುವ ಮಾತು ಆತನಲ್ಲಿರುವ ಪ್ರತಿಭೆಗಾಗಿಯೇ ಹೇಳುವುದು ಸಾಮಾನ್ಯರಿಗಿಂತ ಹೊರತಾದ ಮಾನವ ಹೃದಯದ ಪ್ರತಿಭೆಯನ್ನು ಕವಿ ಹೊಂದಿ ತನ್ನ ಪ್ರತಿಭೆಯ ಕಣ್ಣಿನಿಂದ ಹೊಸ ಜಗತ್ತನ್ನು ನಿರ್ಮಿಸುತ್ತಾನೆ.

"ಆರು ಗಂಟೆಯ ಒಳಗು
ಮೂಡಣದ ಹೆರಿಗೆ ಮನೆಯಲ್ಲಿ ಸಡಗರವೋ ಸಡಗರ
ಕತ್ತಲಿನ ಬಸಿರಿನಿಂದ ಮೊರೆಯ ಕುವರ ಬಂದ
ಉಲ್ಲಾಸ ತಂದ"[೧೫]

ಇಲ್ಲಿ ಮೂಡಣದ ದಿಕ್ಕನ್ನು ಹೆರಿಗೆ ಮನೆಯನ್ನಾಗಿ ಕಂಡು ಸೂರ್ಯನ ಉದಯವನ್ನು ಕವಿ ಚಿತ್ರಿಸಿದ್ದಾನೆ. ಈ ಅರಿವು ಬರಲು ಕವಿಯ ಪ್ರತಿಭೆಯಿಂದಲೇ ಸಾಧ್ಯ.

ಅಡಿಟಿಪ್ಪಣಿಗಳು

೧. ಡಾ. ಚಿ.ಸಿ.ನಿಂಗಣ್ಣ, ಸಂಪಾದಕರು, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಪು. ೨೭೮, ೨೦೦೮.

೨. ಅದೇ, ಪು. ೨೭೯.

೩. ಅದೇ, ಪು. ೨೮೦.

೪. ತೀ.ನಂ.ಶ್ರೀಕಂಠಯ್ಯ, ಭಾರತೀಯ ಕಾವ್ಯಮೀಮಾಂಸೆ, ಪು. ೩೦೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೩.

೫. ಅದೇ, ಪು. ೩೦೩.

೬. ಅದೇ, ಪು. ೩೦೭.

೭. ಅದೇ, ಪು. ೩೧೦.

೮. ರಾಜಪ್ಪ ದಳವಾಯಿ (ಸಂ.), ಕನ್ನಡ ಸಾಹಿತ್ಯಕೋಶ, ಪು. ೨೪೦.

೯. ಅದೇ, ಪು. ೨೪೩.

೧೦. ಅದೇ, ಪು. ೨೪೭.

೧೧. ಅದೇ, ಪು. ೨೪೯

೧೨. ಕೆ.ವಿ.ಪುಟ್ಟಪ್ಪ, ಕನ್ನಡ ಕೈಪಿಡಿ, ಪು. ೧೪೭.

೧೩. ಅದೇ, ಪು. ೧೪೯.

೧೪. ಅದೇ, ಪು. ೧೫೩.

೧೫. ಅದೇ, ಪು. ೧೫೬.

ಅಧ್ಯಾಯ – ೩

ದೇಜಗೌ ಕಾವ್ಯ

ಕನ್ನಡದ ಹುಟ್ಟು ಹೋರಾಟಗಾರ ವಿಶ್ರಾಂತಿ ಬಯಸದ ಧೀಮಂತಶಕ್ತಿ. ದೂರದೃಷ್ಟಿಯುಳ್ಳ ಅಪ್ರತಿಮ ಸಾಹಸಿ ಕನ್ನಡದ ಸಾಮ್ರಾಜ್ಯವನ್ನು ಕಟ್ಟುವ ಕನಸುಗಾರ ಹಾಗೂ ಕರ್ನಾಟಕ ರತ್ನ ಡಾ. ದೇಜಗೌ ಅವರ ಕಾವ್ಯಸಂಕಲನ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಒಂದು ಅಪೂರ್ವವಾದ ಕೊಡುಗೆ.

ಈ ಕವನದ ಸಂಕಲನದಲ್ಲಿ ಒಟ್ಟು ನಲವತ್ತೆಂಟು ಕವಿತೆಗಳು ಸೇರಿಕೊಂಡಿವೆ. ಅದರಲ್ಲಿ ಒಂದೊಂದು ಕವಿತೆಯು ವಿಭಿನ್ನವಾದ ವಸ್ತುಗಳನ್ನು ಒಳಗೊಂಡಿದ್ದು ತಮ್ಮದೇ ಆದ ಮೌಲ್ಯಗಳನ್ನು ಪಡೆದುಕೊಂಡಿದೆ. ಈ ಕವನಗಳು ಓದುಗರಲ್ಲಿ ಚಿಂತನೆಯ ಲಹರಿಯನ್ನು ಹರಿಸುವಲ್ಲಿ ಸಫಲವಾಗಿದೆ ಎಂದು ಹೇಳಬಹುದು.

ಎಲ್ಲಿರಲಿ ಎಂತಿರಲಿ

"ಎಲ್ಲಿರಲಿ ಎಂತಿರಲಿ ಎಂದೆಂದು ಪೊರೆ ಗುರುವೆ
ಎನ್ನೊಳಗಡಗಿ ಕೈಬಿಡದೆ ಕಲ್ಪತರುವೆ
ಸುಖದಲ್ಲಿ ದುಃಖದಲಿ ಭೋಗದಲಿ ತ್ಯಾಗದಲಿ
ಸೊಕ್ಕಿನಲಿ ಸೊರಗನಲಿ ಪೊರೆದೊರೆಯ ಬಿಡದೆ"[1]

ಈ ಕವನದಲ್ಲಿ ಗುರುವನ್ನು ಕುರಿತು ಪ್ರಾರ್ಥಿಸಿರುವುದನ್ನು ನಾವು ನೋಡಬಹುದಾಗಿದೆ. ನೀನು ಎಲ್ಲೆ ಇದ್ದರೂ ನನ್ನನ್ನು ಮರೆಯಬೇಡ. ನನ್ನ ಕೈಬಿಡಬೇಡ. ಕೋಪ, ಶಾಂತಿ, ಮೋಹ, ದರ್ಪದ ವಿಚಾರದಲ್ಲಿ ಎಚ್ಚರದಿಂದ ನಡೆಯುವಂತೆ ಕರುಣಿಸು ಎಂದು ಪ್ರಾರ್ಥಿಸಿದ್ದಾರೆ. ಊಟ, ಆಟ, ಕೂಟ, ಬೇಟ, ನೋಟ, ಮಾಟ ಹಾಗೂ ವಿಹಾರದಲ್ಲಿ ನನ್ನನ್ನು ಅಗಲದಿರು ಎಂದಿದ್ದಾರೆ. ಸುಖ, ದುಃಖ, ಭೋಗ, ತ್ಯಾಗ, ಸೊಕ್ಕು ಬಂದಾಗಲೆಲ್ಲ ನನ್ನನ್ನು ಪೊರೆದು ಸಲಹಬೇಕೆಂದು ಗುರುವಿನಲ್ಲಿ ಬೇಡಿಕೊಂಡಿದ್ದಾರೆ.

ಒಟ್ಟಿನಲ್ಲಿ ಈ ಕವನದಲ್ಲಿ ಗುರುವನ್ನು ಕುರಿತು ಚಿಂತಿಸಿದ್ದಾರೆ. ದೇಜಗೌರವರಿಗೆ ಕುವೆಂಪು ಪ್ರಭಾವ ತುಂಬ ಆಗಿದೆ. ಅವರ ವಿದ್ಯಾರ್ಥಿದೆಸೆಯಿಂದ ಪ್ರಾರಂಭಿಸಿ ವಿಶ್ವವಿದ್ಯಾನಿಲಯದ ಅಧ್ಯಾಪಕರ ಹಾಗೂ ಕುಲಪತಿಗಳವರೆಗಿನ ಹುದ್ದೆಯನ್ನು ಅವರು ಏರಿದ್ದಾರೆ.

ನೀನೊಂಟಿ

"ಜಗದ ನಡುವಿದ್ದೂ ನೀನೊಂಟಿಯಪರಿಚಿತ
ಕೈಮುಗಿವೆ ದೂರದಿಂ ನಿನಗೆ"[೨]

ಈ ಕವನದಲ್ಲಿ ನಿನ್ನನ್ನು ಅರಿತರರು ಯಾರು ಇಲ್ಲವೆಂದು ಹೇಳುತ್ತಾರೆ. ನೀನು ಬೆಳೆದ ಎತ್ತರಕ್ಕೆ ಬೇರೆ ಯಾರು ಏರಿಲ್ಲವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಪರೋಕ್ಷವಾಗಿ ನಿನ್ನನ್ನು ತೆಗಳುವವರನ್ನು ಅವರು ಬಿಟ್ಟಿಲ್ಲ. ಹಾಗಂತ ನೀನು ನಿನ್ನ ಕೆಲಸದಲ್ಲಿ ತೊಡಗಿಸಿಕೊಂಡು ಅವರು ಆಶ್ಚರ್ಯಪಡುವ ರೀತಿಯಲ್ಲಿ ಆಕಾಶದೆತ್ತರಕ್ಕೆ ಬೆಳೆದು ನಿಂತಿರುವೆ ಒಬ್ಬಂಟಿಗನಾಗಿ. ಆದ್ದರಿಂದ ನಿನಗೆ ದೂರದಿಂದಲೆ ಕೈ ಮುಗಿಯುವೆ ಎಂದಿದ್ದಾರೆ.

ಏನ ಬೇಡೆ ನಿನ್ನ

ಈ ಕವಿತೆಯಲ್ಲಿ ಸಾವೊಂದನ್ನು ಹೊರತುಪಡಿಸಿ ಬೇರೆ ಏನನ್ನು ಬೇಡುವುದಿಲ್ಲ ದೇವಾ ಎಂದು ಬೇಡಿಕೊಂಡಿದ್ದಾರೆ. ಸಾವು ಬರುವುದಾದರೆ ಹಿಂದೆಯೇ ಬರಲಿ ನಾಳೆ ಬರುವುದು ಬೇಡ

"ರೋಗಿಯಾಗಿ ಬಳಲಲಾರೆ
ಪರರ ಕೃಪೆಯ ಹಂಗಿನಲ್ಲಿ
ತೊಳಲಲಾರೆ"[೩]

ಆರೋಗ್ಯವಾಗಿರುವಾಗಲೆ, ಚೆನ್ನಾಗಿರುವಾಗಲೆ ಸಾವು ಬರಬೇಕು ರೋಗಿಯಾಗಿ ಬಳಲುವುದಕ್ಕಿಂತ ಬೇರೆಯವರ ಹಂಗಿನಲ್ಲಿ ಬದುಕುವುದಕ್ಕಿಂತ ಚೆನ್ನಾಗಿರುವಾಗಲೇ ಸಾವು ಬರಬೇಕೆಂದು ದೇವರಲ್ಲಿ ಪ್ರಾರ್ಥಿಸಿಕೊಂಡಿದ್ದಾರೆ. ಇಂತಹ ಒಂದು ಮೊರೆಯನ್ನು ಕರುಣಾಮಯಿಯಾದ ನೀನು ಅನಾಥರನ್ನು ರಕ್ಷಿಸುವಂತನಾಗಿ ನೀನು ಈಡೇರಿಸಬೇಕೆಂದು ಕೇಳಿಕೊಂಡಿದ್ದಾರೆ.

ಸಾವು ಎನ್ನುವುದು ಅಗೋಚರವಾದುದು ಅದು ಯಾವಾಗ ಎಲ್ಲಿ ಹೇಗೆ ಬರುತ್ತದೆಂದು ಹೇಳುವುದು ಅಸಾಧ್ಯ. ಆದರೂ ಕವಿಯ ಬಿನ್ನಹವೆಂದರೆ ಸಾವನ್ನು ತುಂಬು ಹೃದಯದಿಂದ ಸಂತೋಷದಿಂದ ಸ್ವಾಗತಿಸುತ್ತಿದ್ದಾರೆ.

'ಬೀಳ್ಕೊಡಿಂ'

ಮಗಳು ಮನೆಗೆ ಹೋಗಿ ಅಲ್ಲಿಂದ ಹೊರಡುವ ವೇಳೆಯಲ್ಲಿ ಈ ಕವನ ಪ್ರಾರಂಭವಾಗುತ್ತದೆ. ನಮ್ಮನ್ನು ಹೊರಡಲು ತಾಳೆ, ಗುಲಾಬಿ, ಮಲಿಕಾ, ಅಂಜುರ, ಖರ್ಜೂರ, ಒಲ್ಲೀ, ಕಿತ್ತಳೆ ವಿವಿಧ ಜಾತಿಯ ವರ್ಣಮಯ ಹೂಗಳಿಗೆ ಹೇಳುತ್ತಿದ್ದಾರೆ.

"ಪುಷ್ಪಾಪ್ಸರಾ ಮಾತೆಯರೆ
ಬೀಳ್ಕೊಡಿಂ ಬೀಳ್ಕೊಡಿಮಹರಕೆಯನ್ನಿತ್ತು"[೬]

ಮಗಳು ಮತ್ತು ಅಳಿಯರ ಪ್ರೀತಿ ಹಾಗೂ ಸಂತೋಷದ ಹೊಳೆಯಲ್ಲಿ ಮುಳುಗೆದ್ದಿದ್ದೇವೆ. ಚತುರೆಯಾದ ಚೇತನ, ಬುದ್ಧಿವಂತನಾದ ಅರವಿಂದ ಎಲ್ಲರಿಗೂ ಹೇಳಿ ಸಿದ್ದರಾಗಿದ್ದೇವೆ. ಹೊರಗಡೆಯಿಂದ ಬಂದವರಿಗೆ ಸ್ವಾಗತವನ್ನು ಕೋರುವ ಕಲಾ ತಾಯಿಯ ಹೆಗಲ ಮೇಲೆ ನಲಿಯುವ ರಾಮ ಗಿಳಿಯೆ, ಅರಗಿಣಿಯೆ ನೀವೆಲ್ಲ ನಮ್ಮನ್ನು ಹೊರಡಲು ಬಿಡಿ ಎಂದಿದ್ದಾರೆ.

ಹೇಡಿಗಿಂತಲು ಹೇಡಿ

ಈ ಕವನವು ಕುಲಪತಿ ಹುದ್ದೆಯಿಂದ ಆದ ಅನುಭವದ ಬಗ್ಗೆ ಹೇಳುತ್ತದೆ.

"ನೀವು
ಕುಲಪತಿಗಾದಿಯಿಂದಿಳಿಯಬಾರದಿತ್ತು
ಇಳಿದರೂ. . . . .
ಎಂದು ಹೇಳುವರು ಮನೆಗೆ ಬಂದು ಮಿತ್ರವೃಂದ"[೭]

ತಮ್ಮ ಮನೆಗೆ ಬರುವ ಸ್ನೇಹಿತರು ಹೇಳುತ್ತಾರೆ ಕುಲಪತಿ ಹುದ್ದೆಯಿಂದ ಇಳಿಯಬಾರದಿತ್ತು ಉಪಾಧ್ಯಾಯರಾಗಬಾರದಿತ್ತು, ರಾಜಕೀಯವನ್ನು ಸೇರಿಕೊಂಡು ಈ ಸಮಾಜವನ್ನು ಸ್ವಚ್ಛ ಮಾಡಬೇಕಾಗಿತ್ತು. ಅವರು ಹೇಳಿದ ವಿಚಾರದ ಬಗ್ಗೆ ಹಲವು ಸಲ ಯೋಚಿಸಿದುಂಟು. ಹಗಲು ಕನಸು ಕಂಡುದುಂಟು ಹೀಗೆ ಯೋಚಿಸುತ್ತಿರುವಾಗಲೇ ಸುರುಚಿ ತಾಯಿಯು ನನ್ನನ್ನು ದುರುಗುಟ್ಟಿ ನೋಡಿ, ಕಿವಿಹಿಂಡಿ ನೀನು ರಾಜಕೀಯ ಮಾಡುವುದು ಬೇಡ ಅದು ಹೇಸಿಗೆ ಏ ಮಗನೇ ನೀನು ಅದನ್ನು ಬಿಟ್ಟು ಬಿಡು ಎಂದು ಹೇಳುತ್ತದೆ.

ಸುತ್ತಮುತ್ತಲಿನ ಜನರ ಮನಸ್ಸನ್ನು ಗೆಲ್ಲುವ ಮತ್ತು ಅವರ ಪ್ರೀತಿ ವಿಶ್ವಾಸ ಸಂಪಾದಿಸು, ಈ ಜಗತ್ತು ಫಲವತ್ತತೆಯಿಂದ ಕೂಡಿದೆ ಬಂಜೆಯಾಗಿಲ್ಲ. ಕಂದ

ಬುದ್ಧಿಯೊಂದಿದ್ದರೆ, ಚೆನ್ನಾಗಿ ಯೋಚಿಸುವ ಮನಸ್ಸಿದ್ದರೆ, ಧೈರ್ಯವಿದ್ದರೆ ಯಾವದನಾದರೂ ಗೆಲ್ಲಬಹುದು.

ನೀನು ಕ್ರಿಶ್ಚಿಯನ್, ಮುಸ್ಲಿಂ ಧರ್ಮದವನು ಆಗಿದ್ದರೆ ನಿನಗೆ ದೊರೆಯುವುದು ಸಕಲವೆಲ್ಲವು ಎಂದು ತಾಯಿ ಹೇಳಲು ನಾನು ಹಿಂದುವಾಗಯೇ ಬಾಳುತ್ತೇನೆ. ಬದುಕುತ್ತೇನೆ ಹೇಡಿಯಾಗಿ ಬದುಕಲಾರನೆಂದು ಹೇಳಿದ್ದಾರೆ. ಈ ಕವಿತೆಯಲ್ಲಿ ಹಿಂದು ಧರ್ಮದ ಬಗ್ಗೆ ಆಳವಾದ ಚರ್ಚೆ ಇದೆ. ಹಿಂದು ಧರ್ಮದ ಜಿಜ್ಞಾಸೆಯನ್ನು ಅದರಿಂದಾಗುವ ಅನ್ಯಾಯ ಅಸಮಾನತೆ ಶೋಷಣೆಗಳನ್ನು ಸೂಕ್ಷ್ಮವಾಗಿ ಪರಾಂಭರಿಸಿದುದನ್ನು ನೋಡಬಹುದಾಗಿದೆ.

"ಶಂಕರನಳಿವನು ಮರೆಯೆ"

"ಮೈಸೂರಿನ ಫೋನ್ ಕರೆಯೆ
ವಿಷಸಮ ವಾರ್ತೆಯ ಸುರಿಯೆ"[೬]

ಇದ್ದಕ್ಕಿದ್ದಂತೆ ಫೋನ್ ಶಬ್ದವಾಗಿದ್ದನ್ನು ನೋಡಿ ಕವಿ ಫೋನ್ ತೆಗೆದುಕೊಂಡು ವಿಷಯವನ್ನು ಕೇಳಿಸಿಕೊಂಡರು. ಅದು ಶಂಕರನು ತೀರಿಕೊಂಡ ವಿಷಯವಾಗಿತ್ತು. ವಿಷಯ ತಿಳಿದೊಡನೆ ಕುಸಿದು ಬಿದ್ದೆ, ದುಃಖ ತುಂಬಿ ಬಂದು ಅತ್ತೆ. ಶಂಕರನು ಸತ್ತಿರುವುದನ್ನು ಮರೆಯಲು ಜೋರಾಗಿ ಕಾರಿನಲ್ಲಿ ಹೋದೆನು. ಕಾಡಿನಲ್ಲಿ ಪಿಶಾಚಿಯೊಂದು ಹಾರಿಕೊಂಡು ಹೋಗುವಂತೆ.

ಹಕ್ಕಿಗಳ ಸ್ವರದಲ್ಲಿ ಸ್ವಚ್ಛಂದವಿರದೆ ಕೊರಗುವಿಕೆ ಇತ್ತು. ಯಾವುದೇ ಮಾಧುರ್ಯ, ಸುಮಧುರ ಗಾನವಿರಲಿಲ್ಲ. ಗಾಳಿಯು ಕೂಡ ಸರಿಯಾಗಿ ಬೀಸುತ್ತಿರಲಿಲ್ಲ. ಸೂರ್ಯನಲ್ಲಿ ಯಾವುದೇ ಕಳೆ ಇರಲಿಲ್ಲ, ನಾವು ನಡೆಯುವಾಗ ಯಾವುದೇ ಉತ್ಸಾಹ, ಹುಮ್ಮಸ್ಸು ಇರಲಿಲ್ಲ, ಬೇಸರದಿಂದ ಮನೆಗೆ ಬಂದು ಹಾಸಿಗೆಯ ಮೇಲೊರಗಿದೆ ಎಂದು ಹೇಳುತ್ತಾರೆ.

"ಪ್ರಾರ್ಥನೆ"

ಈ ಕವಿತೆಯಲ್ಲಿ ದೇವತೆಗಳ ಕಷ್ಟವನ್ನು ಕೇಳಿಸಿಕೊಂಡು ಭೂಮಿಯಲ್ಲಿ ಅವುಗಳಿಗೆ ಆಗುತ್ತಿದ್ದ ತೊಂದರೆಯನ್ನು ಕೇಳಿಸಿಕೊಂಡ ಭೂಮಿಯ ಒಡೆಯನೆ, ಶ್ರೀರಾಮನೆ, ಜನಕರಾಯನ ಪ್ರೀತಿಯ ಮಗಳಾದ ಸೀತಾದೇವಿಯನ್ನು ಮದುವೆಯಾಗಿ

[illegible]

[illegible]

[illegible]

[illegible]

[illegible]

[illegible]

ದುರಳನಾದ ರಾಮಣ್ಣನನ್ನು ಕೊಂದು ಭೂಮಿಯ ಭಾರವನ್ನು ಕಡಿಮೆಮಾಡಿ ಅದನ್ನು ರಕ್ಷಿಸಿದ ಶ್ರೀಹರಿಯೆ ನಮ್ಮನ್ನು ಯಾವಾಗಲೂ ಕಾಯಬೇಕೆಂದು ಮೊರೆ ಇಟ್ಟಿದ್ದಾರೆ.

"ಕುದಿದು ಕೃಶಳಾಗಿದ್ದ ಸೀತಾಮಾತೆಯನು ಕಂಡು
ಮುದದಿಯಂಗುರವಿತ್ತು ಬಳಲಿದ
ಎದೆಗೆ ಶಾಂತಿಯನಿತ್ತ ರಾಘವ
ಪಾದ ಕಿಂಕರ ಹನುಮ ರಕ್ಷಿಸು ಸತತ ಭಕ್ತರನು"[೭]

ಕಾಲಿನಿಂದಲೆ ಮೆಟ್ಟಿಸಿ ಬೆಟ್ಟವನ್ನು ಶ್ರೀರಾಮನ ಪಾದಕ್ಕೆ ಕೇಡುವಿದ ಹನುಮನ ವಿರಹವೇದನೆಯಿಂದ ನರಳುತ್ತಿದ್ದ ಸೀತಾದೇವಿಗೆ ಶ್ರೀರಾಮ ಕೊಟ್ಟ ಉಂಗುರವನ್ನು ಕೊಟ್ಟು ಬಳಲಿ ಬೆಂಡಾದ ಹೃದಯಕ್ಕೆ ಶಾಂತಿಯನ್ನು ನೀಡಿದ ಶ್ರೀರಾಮನ ಬಂಟನಾದ ಹನುಮನೆ ರಕ್ಷಿಸು ಎಲ್ಲರನ್ನು ಎಂದು ಹಾರೈಸಿದ್ದಾರೆ.

ಬಾರೆ ಸೋದರಿ

"ಬಾರೆ ಗೌರಿ ಅಡಿಯನಿಡುತ ಎನ್ನ ಜತೆಯಲಿ
ಜಾರುತಿಹನು ನೋಡು ಸೂರ್ಯನಪರಗಿರಿಯಲಿ"[೮]

ಈ ಮೇಲಿನ ಕವನದಲ್ಲಿ ಗೌರಿಯನ್ನು ಸಹೋದರಿ ಎಂದು ಬಿನ್ನವಿಸುತ್ತ ಕವಿ ಸೂರ್ಯನು ಪಡುವಣ ದಿಕ್ಕಿನಲ್ಲಿ ಮುಳಗುತಿರುವನು ಇದರಿಂದಾಗಿ ಸತ್ಯ ಇಲ್ಲದಂತಾಗಿದೆ. ಅವನಿಗೆ ಆ ಪುಟ್ಟ ಕವಿಯನ್ನು ಸಂಜೆ ರಮಣೀಯ ರಮಿಸುವಂತೆ ಇತ್ತ ರವಿಯ ಕಾಂತಿಯು ಹೆಚ್ಚುತ್ತಿರುವುದು ದನಗಳು ಅಂಬಾ ಎಂಬ ಧ್ವನಿಯು ಮೊಳಗಲು ಮನೆಯ ಕಡೆ ಹೊರಟ ಜನರು ಹರಟೆ ಹೊಡೆಯುತಿರಲು ನೀಲ ಆಕಾಶದಲ್ಲಿ ಹೊಲಗದ್ದೆಗಳಲ್ಲಿ ವಿವಿಧ ರೀತಿಯ ಗಂಡು ಹೆಣ್ಣು ಹಕ್ಕಿಗಳ ಸಮೂಹ ಮಾಡುತ್ತಿರುವುದು ಕಂಡು ಬರುತ್ತಿತ್ತು.

"ಕುವೆಂಪು ನಾಮ"

ಈ ಕವನದಲ್ಲಿ ಕುವೆಂಪು ಹೆಸರೇ ನನಗೆ ಶ್ರೀ ರಕ್ಷೆಯಾಗಿದೆ. ಅದೇ ನನ್ನನ್ನು ಎಲ್ಲಾ ರೀತಿಯಿಂದಲೂ ಸಲಹುವಂತದ್ದು.

"ನೀನೆ ನನಗೆ ದೇವ ಸರ್ವ
ನಿನಗೆ ನಮಿಸಿ ಹೋಯ್ತು ಗರ್ವ"[೯]

ನಿನಗೆ ನಮಿಸುವುದರಿಂದ ನನ್ನ ಅಹಂಕಾರ ಹೊರಟು ಹೋಯಿತು. ಯಾವಾಗಲೂ ನಾನು ನಿನ್ನನ್ನೇ ನೆನೆವೆ ನನ್ನ ಜೀವಿತದ ಕೊನೆಯವರೆಗೂ ಕೂಡ ನೀನು ಜಗತ್ತಿಗೆ

ತಂಪನ್ನು ಕೊಟ್ಟಿರುವೆ. ಜನತೆಗೆ ಹಸಿರನ್ನು ತೊಡಿಸಿರುವೆ ನೀನೇ ನನಗೆ ಶ್ರೀರಕ್ಷೆ ಎಂದು ಹೇಳಿದ್ದಾರೆ.

"ಶೂದ್ರನಾಮ"

"ಕ್ರಿಸ್ತಿಸ್ಲಾಂ ಬಸವಧರ್ಮಗಳ
ಪವಿತ್ರ ಸಂಗಮಂ ಮಮ ಹೃದಯ"[೧೦]

ಈ ಮೇಲಿನ ಕವಿತೆಯಲ್ಲಿ ನಾನು ಹಿಂದೂ ಮತದ ಅನುಯಾಯಿ ಅಲ್ಲ. ಕ್ರಿಸ್ತನಿ ಇಸ್ಲಂ ಬಸವ ಧರ್ಮದ ಸಂಗಮದಿಂದ ರೂಪಗೊಂಡ ಸರ್ವಧರ್ಮಿಯನವನು ನಾನು ಸೇವೆಗಾಗಿಯೇ ಹುಟ್ಟಿದವನು. ಗುರುಸೇವೆ, ತಂದೆತಾಯಿ ಸೇವೆ, ಜನಸೇವೆ, ನುಡಿಸೇವೆ, ದೇಶಸೇವೆಯಲ್ಲಿ ನಿರತನಾಗಿರುವ ಶೂದ್ರನಾಗಿರುವೆ ಎಂದಿದ್ದಾರೆ.

ಯಾರೂ ಅನಿವಾರ್ಯವೇನಲ್ಲ

ಈ ಕವನದಲ್ಲಿ ಪ್ರಪಂಚದಲ್ಲಿ ಯಾವುದು ಶಾಶ್ವತವಲ್ಲ. ಕಾಲದ ಮುಂದೆ ಯಾವುದೂ ನಿಲ್ಲುವುದಿಲ್ಲ. ಆದರೆ ಅವರು ಮಾಡಿದ ಕೆಲಸ ಒಳ್ಳೆಯದಾಗಿದ್ದರೆ ಅವರ ಹೆಸರು ಭೂಮಿ ಇರುವವರೆಗೂ ಶಾಶ್ವತವಾಗುತ್ತದೆ.

"ಸೋಕ್ರತೀಸ್ ಬುದ್ಧ
ಪ್ಲೇಟೊ ಅರಿಸ್ಟಾಟಲ್ ಅಶೋಕ
ವಾಲ್ಮೀಕಿ ದಾಂಟೆ ಮಿಲ್ಟನ್
ಶ್ರೀ ವಿಜಯ ಪಂಪಕಂಬಾದಿಗಳ್
ತೈಮಾರ್ ನೆಪೋಲಿಯನ್ ಹಿಟ್ಲರ್
ಬಸವ ಲಿಂಕನ್ ಲೆನಿನ್ ಗಾಂಧಿಯಂಬೇಡ್ಕರ್.. . . .
ಮಣ್ಣೊಳಗೆ ಮಣ್ಣಾದರೊಂದು ದಿನ"[೧೧]

ತಂದೆತಾಯಂದಿರು, ನೆಹರು, ಇಂದಿರಾಗಾಂಧಿಯರು ಉಳಿದಿಲ್ಲ ಅವರು ಶಾಶ್ವತರು ಅಲ್ಲ. ಈ ಪ್ರಪಂಚದ ಉಳುವಿಗೆ ಯಾರೂ ಅನಿವಾರ್ಯವು ಇಲ್ಲ. ಅದರ ಪಾಡಿಗೆ ಅದು ನಡೆದುಕೊಂಡು ಹೋಗುತ್ತಿರುತ್ತದೆ ಎಂಬುದು ಕವಿಯ ಆಶಯ.

ಇವರೇ ದೇವರ ಮಕ್ಕಳು

ಈ ಕವಿತೆಯು ಧೀನ ಧರಿದ್ರರನ್ನು ಕುರಿತು ಈ ಕವನ ಮಿಡಿಯುತ್ತದೆ.

"ಇವರೇ ದೇವರ ಮಕ್ಕಳು ನಿಜಕು
ದೇವರು ಪಾದದ ಭೃಂಗಗಳು"[೧೨]

ಇವರಿಗೆ ಮನೆಯಿಲ್ಲ ಬೀದಿಯಲ್ಲಿಯೇ ಇವರ ಜೀವನ ಹಗಲು ರಾತ್ರಿಯೆನ್ನದೆ ದುಡಿಯುವರು. ಶ್ರೀಮಂತರು ಊಟಮಾಡಿ ಬಿಸಾಡಿದ ಎಂಜಲು ಎಲೆಯೆ ಇವರಿಗೆ ಊಟ ತಿಪ್ಪೇಯಲ್ಲಿ ಬಿದ್ದಿರುವ ಬಟ್ಟೆಗಳಿಗೆ ಇವರ ಪಿತಾಂಬರ ಹರಿದುಹೋದ ಚಾಪೆಯೆ ಇವರ ಹೊದಿಕೆ.

ಈ ಕವನದಲ್ಲಿ ದಲಿತಪರವಾದದಂತೆ ಕಾಳಜಿಯನ್ನು ಹಾಗೂ ದಲಿತರ ಶೋಷಣೆಯನ್ನು ಅರ್ಥಗರ್ಭಿತವಾಗಿ ತಿಳಿಸಿಕೊಟ್ಟಿದ್ದಾರೆ.

'ಜಾತಿಯಿಲ್ಲ'

ಜಾತಿಯತೆಯನ್ನು ಕುರಿತು ಈ ಕವನದಲ್ಲಿ ಚರ್ಚಿಸಲಾಗಿದೆ ಅಥವಾ ಚಿಂತಿಸಲಾಗಿದೆ. ಈ ಜಾತಿ ಎನ್ನುವುದು ಶೋಷಣೆಯೇ ಹೊರತು ಮನುಷ್ಯನ ಉದ್ಧಾರವಿಲ್ಲ. ಮೊದಲು ನಾವು ಜಾತಿಯನ್ನು ಬಿಟ್ಟು ನಾವೆಲ್ಲರು ಒಂದೇ ಎಂಬ ಮಂತ್ರವನ್ನು ಜಪಿಸಬೇಕು. ಆಕಳಿಗೆ, ನೀರಿಗೆ, ಗಾಳಿಗೆ, ಬೆಳಕಿಗೆ, ಯಾವ ಜಾತಿಯಿದೆ, ಜಾತಿ ಮಾಡುವವರನ್ನು ಕುರಿತು;

"ಕುದಿನ ಮೂರ್ಖತತಿಯ
ಭೂಮಿ ನುಂಗಬಾರದೆ?"[೧೩]

'ಮಗಳನ್ನು ನೆನೆದಾಗ'

ವಿದೇಶದಲ್ಲಿರುವ ಮಗಳನ್ನು ನೆನೆಯುತ ಕವಿಯ ಮನದಾಳದ ಇಂಗಿತವನ್ನು ದಾಖಲಾಗಿಸುತ್ತ ಹೋಗುತ್ತದೆ ಈ ಕವನ.

"ಹಬ್ಬ ಹುಣ್ಣಿಮೆ ಬರಲು ನೆನಪಾಗುವುದು ಮಗಳ ಮುಖ
ನೆಂಟರಿಷ್ಟರು ಮನೆಗೆ ಬರೆ ಉಕ್ಕುವುದು ಕಣ್ಣೀರು ನೆನೆದು"[೧೪]

ಎಂಬ ಕಂಬನಿ ಮಿಡಿಯುತ್ತದೆ.

ಈ ಕವನದಲ್ಲಿ ಮಗಳ ಮೇಲಿನ ಪ್ರೀತಿ, ಕಾತರ, ಸಂತೋಷ, ನೋವು, ದುಃಖ, ಎಲ್ಲವು ದಾಖಲಾಗಿವೆ. ಕೊನೆಯಲ್ಲಿ ಹೀಗೆ ಹೇಳುತ್ತಾರೆ.

ಎಲ್ಲಿರಲಿ ಎಂತಿರಲಿ ಗುರುಹರಕೆ ಅವಳಿಗಿರಲಿ
ನಿತ್ಯವೂ ನಾ ತೃಪ್ತ ಗುರುಹರಕೆ ರಕ್ಕೆಯಲಿ

'ವುಯಿಲು'

"ನನ್ನ ಮರಣದ ಸುದ್ದಿ ಜಗಕೆ ತಿಳಿಯುವ ಮುನ್ನ
ಅಗ್ನಿದೇವನಿಗರ್ಪಿಸುವುದು ದೇಹವನೆನ್ನ"[೧೫]

ಈ ಕವನದಲ್ಲಿ ಮರಣ ಶಾಸನವನ್ನು (ಮರಣದ ವುಯಿಲು) ಕುರಿತು ತಿಳಿಸಿದ್ದಾರೆ. ತೀರಿಕೊಂಡ ನಂತರ ದೇಹವನ್ನು ಸುಡಬೇಕು. ಬೂದಿಯನ್ನು ಕವಿಶೈಲದಲ್ಲಿ ಸಿಂಪಡಿಸಬೇಕು. ಬಡವರಿಗೆ ಅನ್ನಬಟ್ಟೆ ದಾನವನ್ನು ಕೊಡಬೇಕು. ತುಂಬ ಖರ್ಚುಮಾಡಿ ತಿಥಿಯನ್ನು ಮಾಡಬಾರದು ಎಂಬುದು ಈ ವುಯಿಲು ಕವನದ ವಿಮರ್ಶೆಯಾಗಿದೆ.

'ಕನ್ನಡದ ಕಂದ'

"ಕೊಳಕು ಮಂಡಲವಹುದು ಸ್ವಘೋಷಿತ ವಿಮರ್ಶಕರು
ಜೇನಿನಲಿ ಕಲ್ಲನ್ನು ಅಮೃತದಲಿ ವಿಷವನ್ನು
ಚಂದ್ರನಲಿ ಕುಮದನ್ನು ಹಾಲಿನಲಿ ಕಪ್ಪನ್ನು
ಹುಡುಕುವರು; ಅವರುಸಿರಿನಲಿ ಉರಿವ ವಿಷವುಂಟು"[೧೬]

ಈ ಮೇಲಿನ ಕವನದಲ್ಲಿ 'ಎಂತಹ ತೊಂದರೆ ಸಮಸ್ಯೆ ಬಂದರು ಕನ್ನಡಕ್ಕಾಗಿ ಕನ್ನಡದ ಪ್ರಭುತ್ವಕ್ಕಾಗಿ ಕನ್ನಡನಾಡಿನ ರಕ್ಷಣೆಗಾಗಿ ಹೋರಾಡಬೇಕು. ಹೆದರಬಾರದು ಜೇನಿನಲ್ಲಿ ಕಲ್ಲುಹಾಕುವಂತೆ, ಅಮೃತದಲ್ಲಿ ವಿಷವನ್ನು ಹಾಕುವಂತೆ, ಚಂದ್ರನಲ್ಲಿ ಡೊಂಕನ್ನು ಹುಡುಕುವಂತೆ ಕೊಂಕು ಮಾಡುವರು ಅದನ್ನೆಲ್ಲವನ್ನು ಮೆಟ್ಟಿ ನೀನು ಕನ್ನಡದ ಕೆಲಸವನ್ನು ಮಾಡಬೇಕು ಕನ್ನಡದ ಕಂದ' ಎಂದಿದ್ದಾರೆ.

'ಹಿಂದು ಮತವನುಳಿಸಿದಿರಿ'

ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಕುರಿತು ಹೇಳುತ್ತ ಹಿಂದುವಾಗಿ ಸಾಯದೇ ಬೌದ್ಧಧರ್ಮವನ್ನು ಸ್ವೀಕರಿಸಿ ಇಲ್ಲಿಯ ಕೀಳರಿಮೆ, ಅಸಮಾನತೆ, ಶೋಷಣೆ, ವಂಚನೆ ಕೆಳಜಾತಿಗಳ ರಕ್ತವನ್ನು ಹೀರುವ ಅಂದರೆ ಶೋಷಣೆಯನ್ನು ಮಾಡುವ ಹಿಂದೂ ಧರ್ಮವನ್ನು ಹಾಗೆಯೇ ಉಳಿಸಿರುವುದು ಸರಿಯಿಲ್ಲವೆಂದು ಹೇಳುತ್ತಾರೆ.

"ಕ್ರಿಸ್ತಮತದ ಯಾ ಇಸ್ಲಾಂಮತವ ನೀವಪ್ಪಿರಲು
ಹೇಳ ಹೆಸರಿಲ್ಲದಂತಾಗುತ್ತಿತ್ತು ಹಿಂದು ಮತ ಭಾರತದ"[೧೭]

ಅಲ್ಲದೇ ನೀವು ಕ್ರೈಸ್ತಧರ್ಮಕ್ಕೊ ಅಥವಾ ಇಸ್ಲಾಂ ಧರ್ಮಕ್ಕೊ ಮತಾಂತರಗೊಂಡಿದ್ದರೆ ಹಿಂದೂಧರ್ಮವೇ ಭಾರತದ ಹೇಳಹೆಸರಿಲ್ಲದಂತಾಗುತ್ತಿತ್ತು. ಒಂದು ಕಡೆ ಬೌದ್ಧ (ಧರ್ಮ) ಮತವನ್ನು ಸೇರುವ ಮೂಲಕ ಅದನ್ನು ಬೆಳೆಸಿದರೆ ಮತ್ತೊಂದು ಕಡೆ ಹಿಂದೂಧರ್ಮವನ್ನು ಭಾರತದಲ್ಲಿ ಉಳಿಸಿರುವುದು ಕೂಡ ಅಷ್ಟೇ ಸತ್ಯ ಎಂದಿದ್ದಾರೆ.

ಅಡಿಟಿಪ್ಪಣಿಗಳು

೧. ದೇಜಗೌ, ಕಾವ್ಯಸಂಕಲನ, ಎಲ್ಲಿರಲ ಎಂತಿರಲಿ, ಪುಟ. ೧, ವೈದ್ಯವಾರ್ತ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು, ೨೦೦೬.

೨. ದೇಜಗೌ, ಕಾವ್ಯಸಂಕಲನ, ನೀನೊಂಟಿ, ಪುಟ. ೩, ವೈದ್ಯವಾರ್ತ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು, ೨೦೦೬.

೩. ಅದೇ (ಕವನ), ಏನಬೇಡೆ ನಿನ್ನ, ಪುಟ. ೩, ವೈದ್ಯವಾರ್ತ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು, ೨೦೦೬.

೪. ದೇಜಗೌ ಕಾವ್ಯ ಸಂಕಲನ: ಪುಟ. ೪, ವೈದ್ಯವಾರ್ತ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು, ೨೦೦೬.

೫. ದೇಜಗೌ ಕಾವ್ಯ ಸಂಕಲನ: ಹೆಡಿಗಿಂತಲೂ ಹೇಡಿ (ಕವನ), ಪುಟ. ೫, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೬. ದೇಜಗೌ ಕಾವ್ಯ ಸಂಕಲನ: ಶಂಕರನಳಿವನು ಮರೆಯ (ಕವನ), ಪುಟ. ೮, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೭. ದೇಜಗೌ ಕಾವ್ಯ ಸಂಕಲನ: ಪ್ರಾರ್ಥನೆ (ಕವನ), ಪುಟ. ೧೦, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೮. ದೇಜಗೌ ಕಾವ್ಯ ಸಂಕಲನ: ಬಾರೆಸೋದರಿ (ಕವನ), ಪುಟ. ೧೧, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೯. ದೇಜಗೌ ಕಾವ್ಯ ಸಂಕಲನ: ಕುವೆಂಪು ನಾಮ (ಕವನ), ಪುಟ. ೩೬, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೦. ದೇಜಗೌ ಕಾವ್ಯ ಸಂಕಲನ: ಶೂದ್ರನಾನು (ಕವನ), ಪುಟ. ೩೫, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೧. ದೇಜಗೌ ಕಾವ್ಯ ಸಂಕಲನ: ಯಾರೂ ಅನಿವಾರ್ಯವೇನಲ್ಲ (ಕವನ), ಪುಟ. ೫೩, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೨. ದೇಜಗೌ ಕಾವ್ಯ ಸಂಕಲನ: ಇವರೇ ದೇವರ ಮಕ್ಕಳು (ಕವನ), ಪುಟ. ೪೮. ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೩. ದೇಜಗೌ, ಕಾವ್ಯ ಸಂಕಲನ: ಜಾತಿಯಿಲ್ಲ (ಕವನ), ಪುಟ. ೫೫, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೪. ದೇಜಗೌ, ಕಾವ್ಯ ಸಂಕಲನ: ಮಗಳನ್ನು ನೆನೆದಾಗ (ಕವನ), ಪುಟ. ೬೦, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೫. ದೇಜಗೌ, ಕಾವ್ಯ ಸಂಕಲನ: ವುಯಿಲು(ಕವನ), ಪುಟ. ೭೦, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೬. ದೇಜಗೌ, ಕಾವ್ಯ ಸಂಕಲನ: ಕನ್ನಡದ ಕಂದ(ಕವನ), ಪುಟ. ೬೫, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

೧೭. ದೇಜಗೌ, ಕಾವ್ಯ ಸಂಕಲನ: ಹಿಂದುಮತವನುಳಿಸಿದಿರಿ(ಕವನ), ಪುಟ. ೬೯, ವೈದ್ಯವಾರ್ತ ಪ್ರಕಾಶನ, ಮೈಸೂರು, ೨೦೦೬.

ಅಧ್ಯಾಯ – ೪

ದೇಜಗೌ ಅವರ ಚುಟುಕುಗಳು

'ಚುಟುಕು' ಎನ್ನುವ ಪದದ ಅರ್ಥ ಲಘುವಾದದು, ಸಣ್ಣದು ಎಂದು. ಕೇವಲ ಕೆಲವೇ ಪದಪಂಕ್ತಿಗಳುಳ್ಳದ್ದು ಎಂದು ನಾವು ಆ ಪದದ ಅರ್ಥ ಮಾಡಬಹುದು. ಸಂಸ್ಕೃತದಲ್ಲಿಯೂ 'ಚುಟ್' ಎಂದರೆ "ಸಣ್ಣ"ವೆಂದರ್ಥ. ಚುಟುಕು ಎನ್ನುವುದಕ್ಕೂ ಸಣ್ಣದೆಂಬ ಅರ್ಥವಿದೆ. ಈಗ ಅದನ್ನೇ ಚುಟುಕು ಎಂಬುದಾಗಿ ರೂಢಿಯಲ್ಲಿದೆ. ಇವು ರೂಪದಲ್ಲಿ ಕಿರಿದಾದರೂ ಅರ್ಥದಲ್ಲಿ ಮಾತ್ರ ಗಂಭೀರವಾದ ಹಾಗೂ ಧ್ವನಿಪೂರ್ಣವಾದ ಅರ್ಥಪೂರ್ಣವಾಗಿ ನಿರ್ಮಿತವಾಗಿರುವುದುಂಟು.

ಚುಟುಕು ಕಣದಲ್ಲಿ ವಿಶ್ವವನ್ನು ಅನಂತತೆಯನ್ನು ಸಮಾಜದ ಸೂಕ್ಷ್ಮತೆಗಳನ್ನು ಕಂಡರಿಸುವ ವ್ಯಾಪಕಾರ್ಥವಿದೆ. ಇದು ಬರೆಯುತ್ತಿರುವ ಬಹುತೇಕ ಚುಟುಕು ಕವಿಗಳು ಸಮಾಜವನ್ನು ದರ್ಶಿಸಿ ವಿಮರ್ಶಿಸಿ ಒಂದು ಹೊಸಮೌಲ್ಯವನ್ನು ಕೊಡುವುದರಲ್ಲಿ ಸಫಲರಾಗಿದ್ದಾರೆ. ಡಿ.ವಿ.ಜಿ. ದಿನಕರದೇಸಾಯಿ, ಸರ್ವಜ್ಞ, ಕುವೆಂಪು, ದೇಜಗೌ, ಅಕಬರಲಿ, ಎಚ್ಚೆಸ್ಕೆ ದುಂಡಿರಾಜರವರೆಗೆ ಮೊದಲಾದ ಕವಿ ಮನಸ್ಸಿನ ಜೀವನದ ಒಂದು ಭಾಗವಾಗಿಯೇ ಚುಟುಕುಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ದಿನಕರ ದೇಸಾಯಿಯವರ ಚುಟುಕುಗಳನ್ನು ವ್ಯಾಸಂಗ ಮಾಡಿದಂತೆಲ್ಲ ಅವರು ತಮ್ಮ ಜೀವನದ ಬಹುಭಾಗವನ್ನು ಚುಟುಕು ರಚನೆಯ ಮಿತಿಗಳನ್ನು ಮೀರಿ ಅದರ ಸಾಧ್ಯತೆಗಳನ್ನು ವಿಸ್ತರಿಸಿದ್ದಾರೆ.

ಸಮಾಜದಲ್ಲಿ ಇಂದು ನಾವೆಲ್ಲ ಆಗಾಗ್ಗೆ ಮಾತನಾಡುವುದುಂಟು ಇಂದು ಮನುಕುಲ ದಾರಿತಪ್ಪಿದೆ ಎಂದು. ಇದು ಮೇಲ್ನೋಟಕ್ಕೆ ಕಂಡರೂ ಸರ್ವ ರಕ್ಷಾಮಯಿ ಪ್ರಕೃತಿಯ ನಿಗೂಢ ಸೂತ್ರದಂತೆ ಅಂತರಂಗದಲ್ಲಿ ಅದು ಪರಿಪೂರ್ಣತೆಯ ಕಡೆಗೆ ಸಾಗುತ್ತಿದೆ. ಪ್ರಸ್ತುತದಲ್ಲಿ ಮೌಲ್ಯಗಳು ಬದುಕಿನ ಅನಿವಾರ್ಯಗಳಲ್ಲಿ ಒಂದು ಎಂದು ಯಾರಿಗೂ ಬೇಕಿಲ್ಲ. ಆದರೂ ಅದನ್ನು ಬಿಟ್ಟು ಕೊಡಲಾಗದ ನಿಸರ್ಗ ಸಹಜ ತುಡಿತ ಪ್ರತಿಯೊಬ್ಬರ ಮನಃ ಹೃದಯವನ್ನೂ ಸದಾ ತುಡಿಯುತ್ತಲೇ ಇದೆ. ಸದ್ಯದ ಮನುಕುಲದ ಬದುಕನ್ನು ಕುರಿತು ಹಲವಾರು ಕವಿಗಳು ಬಹಳ ಮನೋಜ್ಞವಾಗಿ ಚಿತ್ರಿಸಿ ಮನಮುಟ್ಟುವಂತೆ ಆರೋಗ್ಯಕರವಾದ ರೀತಿಯಲ್ಲಿ ಬದುಕಿಗೆ ಬೆಳಕಿನ ದಾರಿ ತೋರುವಂತಹ ಕಾರ್ಯವನ್ನು ಮಾಡುತ್ತಿದ್ದಾರೆ.

"ಚುಟುಕು ಹಲವು ಬಿಡಿ ನುಡಿಗಳಾದರೂ ಮನಸ್ಸಿಗೆ ಚುಚ್ಚುವ ವಿಡಂಬನೆಯಿದೆ. ಮೆಚ್ಚುವ ವಿಷಯವು ಇದೆ. ಇದರಲ್ಲಿ ಜೀವನಮೌಲ್ಯ, ಕಾವ್ಯಮೌಲ್ಯಗಳೆರಡೂ ಮೇಳೈಸಿದೆ. ಇಡೀ ಚುಟುಕು ಸಾಹಿತ್ಯ ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಹಾಗೂ ಸಾಮಾಜಿಕ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದೆಯೆಂದರೆ ಅಚ್ಚರಿಪಡಬೇಕಾಗಿಲ್ಲ."[೧]

ಆಡು ಮುಟ್ಟದ ಗಿಡವಿಲ್ಲ ಚುಟುಕು ನಿರೂಪಿಸಲಾರದ ಸಾಮಾಜಿಕ ವಿಷಯ ಸಂಗತಿಗಳೇ ಇಲ್ಲ. ಚುಟುಕುಕವಿ, ತನಗಿರುವ ಲೌಕಿಕನುಭವವನ್ನು ಬೀಜದಲ್ಲಿ ಮರವು ಹುದುಗಿಕೊಂಡಿರುವಂತೆ, ತನ್ನ ಚುಟುಕುಗಳಲ್ಲಿ ಹುದುಗಿಸಿದ್ದಾನೆ. ಸಮಾಜದ ಅಂಕುಡೊಂಕು, ಏರುಪೇರುಗಳನ್ನು ಕಂಡು ವಿಡಂಬಿಸಿದ್ದಾನೆ, ವಿಮರ್ಶಿಸಿದ್ದಾನೆ. ಚುಟುಕುಕವಿ ಸಮಾಜಶಾಸ್ತ್ರಜ್ಞಾನ ಚಿಕಿತ್ಸಕ ಬುದ್ಧಿಯನ್ನು ಪಡೆದವನಾದುದರಿಂದ ಸಮಾಜದ ಎಲ್ಲವನ್ನು, ಎಲ್ಲರನ್ನು ಪರಿಶೀಲಿಸುವ ಸಾಮಾಜಿಕ ಚಿಂತಕನೆನಿಸಿದ್ದಾನೆ. ಚುಟುಕು ನಮ್ಮ ಸಮಾಜವನ್ನು ಎಲ್ಲರನ್ನೂ ಪರಿಶೀಲಿಸುವ ಸಾಮಾಜಿಕ ಚಿಂತಕನೆನಿಸಿದ್ದಾನೆ.

"ಚುಟುಕು ಮತ್ತು ಸಮಾಜವನ್ನು ಹೂವಿನ ಹಾಸಿಗೆ, ಸುಂದರಸ್ವಪ್ನವೆಂದು ಭಾವಿಸಿದಂತಿಲ್ಲ. ನಾಡಿನಲ್ಲಿಯ ಕಾಡುಮೃಗಗಳ ಶೋಷಣೆ, ದೌರ್ಜನ್ಯ, ದುರಾಸೆ, ವಂಚನೆ, ಪ್ರತ್ಯೇಕತೆ, ಭ್ರಷ್ಟಾಚಾರ ಮುಂತಾದುವನ್ನು ಚುಟುಕು ತದ್ವತ್ತಾಗಿ ಚಿತ್ರಿಸಿವೆ"[೨] ಚುಟುಕು ಸಾಹಿತ್ಯವೆಂದರೆ ಅದೊಂದು ಸ್ಪರ್ಶಮಣಿ ಇದ್ದಹಾಗೆ. ಓದುಗನಗೆ ಅವನ ಜೀವನದ ಕ್ಷಣಗಳು ರಸಮಯವಾಗುವಂತೆ ಮಾಡುವುದರ ಜೊತೆಗೆ ಸಮಾಜದ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು ಕೂಡ ಆಗಿದೆ.

"ಚುಟುಕು ಸಾಹಿತ್ಯ ಇದೆಯಲ್ಲ. ಇದು ಸಾಹಿತ್ಯದ ಕೆನೆಯಕೆನೆ, ಅದರ ಹೃದಯದ ಮಿಂಚು ಸಹೃದಯನ ಹೃದಯದಲ್ಲಿ ಆನಂದ, ಸೌಂದರ್ಯ ಸುಖ, ಕಾಂತಿ, ಮಾನವೀಯತೆ ಸಾಮಾಜಿಕ ಪ್ರಜ್ಞೆ ಮುಂತಾದವುಗಳ ಸಾಧನೆಗೈದು ಸಿದ್ಧಿಸಿಕೊಳ್ಳಬೇಕೆಂಬ ಚುಂಬನ ಶಕ್ತಿ ಚಟುಕು ಸಾಹಿತ್ಯಕ್ಕಿದೆ. ಚುಟುಕುಗಳಲ್ಲಿ ಮುಖ್ಯವಾಗಿ ಬಡತನ, ಹಸಿವು ಲೈಂಗಿಕ ತೃಷೆ ಅಂಧಾನುಕರಣೆಗಳ ವಾಸ್ತವ ಚಿತ್ರಣವಂತೂ ಮನಮುಟ್ಟುವಂತೆ ಚಿತ್ರಿಸಿದ್ದಾನೆ"[೩] ಸಮಾಜದ ಸಮಸ್ತ ವಿಷಯಗಳನ್ನು ಜನರಾಡುವ ಭಾಷೆಯಲ್ಲಿ ಅಭಿವ್ಯಕ್ತಪಡಿಸಿದ್ದರಿಂದ ಶ್ರೀಸಾಮಾನ್ಯನಿಗೂ ಅರ್ಥವಾಗುತ್ತಿವೆ. ಚುಟುಕುಗಳಲ್ಲಿ ಒಬ್ಬ ಪ್ರಜೆ ತನ್ನ ದೇಶ ನಾಡು-ನುಡಿಯ ಬಗ್ಗೆ ಇಟ್ಟುಕೊಂಡಿರುವ

ಪ್ರೀತಿ ಆದರ್ಶಗಳು, ಸಾಮಾಜಿಕ ಮಾನವೀಯ ಮೌಲ್ಯಗಳನ್ನು ಹೇಗೆ ಅಳವಡಿಸಿಕೊಳ್ಳಬೇಕು. ಅನುಕಂಪ, ಸಹೃದಯತೆ, ಸಹಜಶೀಲತೆ, ಹೀಗೆ ಹಲವಾರು, ಸಾಮಾಜಿಕ ನೀತಿ ವಿಚಾರಗಳಿವೆ. ಈ ಪ್ರಕಾರ ಪ್ರಾಚೀನ ಕಾಲದಿಂದ ಇದೆ. ಆಧುನಿಕ ಸಾಹಿತ್ಯದಲ್ಲಿ ಇತ್ತೀಚೆಗೆ ಚಾಲ್ತಿಯಲ್ಲಿದೆ.

ದೇಜಗೌ, ಚನ್ನವೀರಕಣವಿ, ಎಸ್.ವಿ.ಪರಮೇಶ್ವರಭಟ್ಟ, ಎಚ್ಚೆಸ್ಕೆ, ಅಕಬರ ಅಲಿ ಅವರು ನವೋದಯದ ಆಶಯವನ್ನು ದಲಿತ ಬಂಡಾಯದ ಕಾಲಘಟ್ಟದಲ್ಲಿ ಎತ್ತಿಹಿಡಿದವರಾಗಿದ್ದಾರೆ. ಅವರು ರಚಿಸಿರುವ ಪ್ರತಿಯೊಂದು ಚುಟುಕುಗಳಲ್ಲಿಯೂ ತುಂಬ ಪರಿಣಾಮಕಾರಿಯಾದ ರೀತಿಯಲ್ಲಿ ಬರೆದಿದ್ದಾರೆ. ಇಂದು ಸಮಾಜದಲ್ಲಿ ಜನಾಂಗಕ್ಕೊಂದು ಮಠ; ಸನ್ಯಾಸಿಗಳು ಜಗದ್ಗುರುಗಳೂ ಲೆಕ್ಕವಿಲ್ಲದಷ್ಟು ಹುಟ್ಟಿಕೊಂಡು ಇಂದಿನ ಮಠಗಳು ಯಜಮಾನ ಸಂಸ್ಕೃತಿಯ ಪ್ರತೀಕವೆಂಬಂತೆ ಕಾಣುತ್ತಿವೆ. ಕೇವಲ ಸ್ವಾರ್ಥ ಉದ್ದೇಶದಿಂದ ಸ್ಥಾಪಿತವಾಗಿರುವ ಮಠಗಳೇ ಹೆಚ್ಚು. ಚನ್ನವೀರ ಕಣವಿಯವರ ಈ ಒಂದು ಚುಟುಕು ಅಭಿವ್ಯಕ್ತಿ ದೃಷ್ಟಿಯಿಂದಲೂ ತುಂಬ ಪರಿಣಾಮಕಾರಿಯಾಗಿ ಮೂಡಿಬಂದಿದೆ.

"ನಾಡಿನ ತುಂಬಾ ನೂರು ಜಗದ್ಗುರು
ಇರುವುದು ಜಗವೊಂದೇ
ಕಾಡಿನ ತುಂಬಾ ಬಣ್ಣದ ಹೂಗಳು
ವಾಸನೆ ಕೆಲವೊಂದೇ"[೨]

ನಿಜವಾದ ಯೋಗ್ಯತೆಯುಳ್ಳವರು ಒಬ್ಬರೋ ಇಬ್ಬರೋ ಅಷ್ಟೇ ಸ್ವಾಮಿಜಿಗಳಲ್ಲೂ ಅಧಿಕಾರದ ದಾಹವಿದೆ. ಹುಚ್ಚುಸಾಹಸ ಮಾಡಿ ಸಮಾಜವನ್ನು ದಿಕ್ಕು ತಪ್ಪಿಸುವ ಕೆಲಸವೂ ನಡೆದಿದೆ. ಇಂದು ಮತ ಬ್ಯಾಂಕ್ ಆಗಿ ಮಠಗಳು ಪರಿವರ್ತನೆ-ಯಾಗುತ್ತಿರುವುದನ್ನು ನಾವೆಲ್ಲ ಕಂಡಿದ್ದೇವೆ. ಸ್ವಾಮೀಜಿಗಳ ಸ್ವಾರ್ಥ ಬದುಕನ್ನು ಈ ಚುಟುಕು ತುಂಬ ಮಾರ್ಮಿಕವಾಗಿ ವಿಡಂಬಿಸಿರುವುದನ್ನು ಕಾಣಬಹುದು.

ಸಾಮಾಜಿಕ ಬದ್ಧತೆ ಚುಟುಕು ಸಾಹಿತ್ಯಬ್ರಹ್ಮರಾದ ದಿನಕರ ದೇಸಾಯಿಯವರ ಜೀವನ ಸಂಕಲ್ಪವಾದ್ದರಿಂದ ತಮ್ಮ ಸುತ್ತಮುತ್ತಣ ಸಮಾಜದ ಹಾಗೂ ರಾಜಕೀಯ ಕ್ಷೇತ್ರದ ದುರಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ, ನಿರ್ಭಯವಾಗಿ ಸತ್ಯ ನಿಷ್ಠುರರಾಗಿ ಟೀಕಿಸುತ್ತಾರೆ. ಆ ಟೀಕೆಯಲ್ಲಿ ಲಘುಹಾಸ್ಯವಿದೆ. ಸಾತ್ವಿಕ ಕ್ರೋಧವಿದೆ. ಮೂಕಸಂಕಟವೂ ಇದೆ.

"ಇವರ ಸಮತಾವಾದ ಗಾಳಿಯಲಿ ಘೋಷ
ಎಷ್ಟು ದಿನ ನಡೆಯುವುದರ ಈ ಹಗಲುವೇಷ?
ಕೊನೆಗೊಮ್ಮೆ ಮೈತುಂಬ ಬರುವತನಕ ಬೆವರು
ಕೈಲಿ ಚಪ್ಪಲಿ ಹಿಡಿದು ಹೊಡೆಯುವರು ಜನರು"[೫]

ಸುಮಾರು ನಾಲ್ಕು ದಶಕಗಳ ಹಿಂದೆ ಅಲ್ಲೊಬ್ಬ ಕಪಟ ಸಮತಾವಾದಿಗಳು ಕಣ್ಣಿಗೆ ಬೀಳುತ್ತಿದ್ದರೇನು? ಈಗಂತೂ ಪ್ರಖರ ವಿದ್ಯುದ್ದೀಪದ ಬೆಳಕಿನಲ್ಲಿ ಭೂತಗನ್ನಡಿ ಹಿಡಿದು ಹುಡುಕಿದರೂ ಸಮತವಾದಿಗಳು ಕಾಣಲಾರರು. ಎಲ್ಲರೂ ಜಾತಿವಾದಿಗಳು, ಕುಡುಕರು, ತತ್ವಭ್ರಷ್ಟರು, ದುರಭಿಮಾನಿಗಳು, ದೇಶಾಭಿಮಾನ, ವಿರಹಿತರು, ಮೊದಲೆರಡು ಪಂಕ್ತಿಗಳಲ್ಲಿ ಅಡಕವಾಗಿರುವ ಸಂಗತಿಗಳೇ ವಾಸ್ತವವಾದರೂ ಆ ವಂಚಕರನ್ನು ಚಪ್ಪಲಿಯಿಂದ ಹೊಡೆಯುವ ಜನ ಇನ್ನು ಹುಟ್ಟಿಲ್ಲ, ದೇಸಾಯಿಯವರ ಕಾಲಜ್ಞಾನ ನಿಜವಾಗುವ ದಿನ ಬಂದೇಬರತ್ತದೆಂಬ ಆಶಾವಾದದಲ್ಲಿ ವಿವೇಕಿಗಳಿಗೆ ವಿಶ್ವಾಸವಿದೆ". ದೇಜಗೌ ಅವರ ಈ ಮಾತುಗಳು ಆದರ್ಶ ಸಮಾಜವನ್ನು ಕಾಣಬೇಕಾದ ಮನಸ್ಸಿನ ರಹಸ್ಯಮಯತೆಯನ್ನು ಇಲ್ಲಿ ಗುರುತಿಸಬಹುದು.

ಇನ್ನು ಮುಂದೆ ಹೋದರು ಹಾಲಕ್ಕಿ ಒಕ್ಕಲಿಗರ ಪಾಲಿಗಂತೂ ದಿನಕರರು ಅವರ ನೋವುಗಳನ್ನು ಬಹಳ ನೊಂದು ನುಡಿದಿದ್ದಾರೆ. ಇವರನ್ನು ಸ್ಥಿತಿವಂತರನ್ನಾಗಿ ಮಾಡಬೇಕಾದರೆ ಶಾಲೆಗೆ ಕಳುಹಿಸಿ ವಿದ್ಯೆಯನ್ನು ನೀಡಿ ಎನ್ನುತ್ತಾರೆ. ಫ್ರೆಂಚ್ ಗಾದೆಯೊಂದರಲ್ಲಿ ಬರುವ ಒಂದು ಅಂಶವೆಂದರೆ ಒಬ್ಬನಿಗೆ ಒಂದು ದಿನ ಮೀನಿನ ಸಾರುಕೊಡುವುದಕ್ಕಿಂತ ಅವನಿಗೆ ಮೀನು ಹಿಡಿಯುವುದನ್ನು ಕಲಿಸುವುದು ಒಳ್ಳೆಯದು ಎಂಬಂತೆ ಈ ಚುಟಕುವಿನಲ್ಲಿ ಶಾಲೆಯ ಮಹತ್ವವಿರುವುದನ್ನು ಕಾಣಬಹುದು.

"ನಡುಹಗಲಿನಲಿ ನನಗೆ ಬೀಳುವುದು ಕನಸು
ಈ ಕನಸಿನಿಂದ ಚಿಗುರುವದುಂಟು ಮನಸು
ಒಂದೊಂದು ಚಿಗುರಿಗೂ ಒಂದೂಂದು ಶಾಲೆ
ಮೂಡಿದರೆ ಶಾರದಾಂಬೆಗೆ ಪುಷ್ಪಮಾಲೆ"[೬]

ಫ್ರೆಂಚ್ ಗಾದೆಯ ಪ್ರೇರಣೆ ಎಂಬಂತೆ ಅಪಾರ ಶ್ರದ್ಧೆಯಿಂದ ಸಾಮಾಜಿಕ ಕಳಕಳಿಯಿಂದ ಈ ಚುಟುಕಿನಲ್ಲಿ ಸುಂದರವಾಗಿ ರಚಿಸಿದ್ದಾರೆ.

ಕವಿಯ ಜೀವನಮೌಲ್ಯಗಳ ಬಗ್ಗೆ ಬರೆಯುತ್ತ ಕಾವ್ಯಬೇರೆಯಲ್ಲ ಬದುಕು ಬೇರೆ ಅಲ್ಲ ಎಂಬ ಮೌಲ್ಯವನ್ನು ಒತ್ತಿ ಹೇಳುತ್ತಾರೆ.

"ನನ್ನ ದೇಹದ ಬೂದಿ ಗಾಳಿಯಲ್ಲಿ ತೂರಿಬಿಡಿ
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ
ಬೂದಿಗೊಬ್ಬರದಿಂದ ತೆನೆಯೊಂದು ನಗೆದುಬರೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ"[೭]

ಭ್ರಷ್ಟಾಚಾರ, ದುರಾಡಳಿತ, ಅಂದ ವಿಷಯದಿಂದ ಹಿಡಿದು ಜೀವನ ಮೌಲ್ಯಗಳ ಗಂಭೀರ ಚಿಂತನೆಯವರೆಗೆ ಅವರ ಚುಟುಕು ವಿಷಯ ವ್ಯಾಪ್ತಿ ಹರಡಿದೆ. ಇಂತಹ ವಿಷಯ ಅಪಾರ ಪ್ರಮಾಣದಲ್ಲಿ ಕಾಣಬೇಕಾದರೆ ನಾವು ದೇಜಗೌರವರ ಚುಟುಕಗಳಿಗೆ ಮೊರೆ ಹೋಗಲೇಬೇಕು. ದೇಜಗೌ ಅವರು ಕೂಡ ಚುಟುಕುಗಳಲ್ಲಿ ದೈವದ ಅಸ್ತಿತ್ವವನ್ನು ಎತ್ತಿಹಿಡಿಯುವ ಅಪಾರ ಜೀವನಾನುಭವದ ಅಭಿವ್ಯಕ್ತಿ ಬಹಳ ಹೃದ್ಯವಾಗಿ ಮೂಡಿಬಂದಿದೆ.

"ಮರಗಳ್ಗೆ ನೀರೆರೆಯೆ ಹಣ್ಣು ಹೂ ದಕ್ಕುವುವು
ಹರಣಮಂ ನೀಡುವುದು ಶುನಕಮಂ ಪೋಷಿಸಲು
ಬರಿಯೊದೆತವ ಮಾನಗಳ ಕಾಣ್ಕೆ ದೊರಕುವವು
ನರರಿಗುಪಕರಿಸೆ ಜಗರೂಢೀ ಮಗಳೆ"[೮]

"ಹೋರಾಟ ಕಲಿಯಲ್ಕೆ ಹೋರಾಟ ಬೇಕಲ್ತೆ
ನೀರಿಗಿಳಿಯದೆ ಈಜು ಮೇಣಿ ಹಿಡಿಯ ಉಳುಮೆ
ದಾರಿ ನಡೆಯದೆ ಗುರಿಯು ಕರ್ಮವಿಲ್ಲದೆ ಫಲವು
ಸಾರುವುವೆ? ಇದೆ ಬದುಕು ಕೇಳು ಮಗಳೆ"[೯]

ದೇಜಗೌರವರ ಸ್ವಾನುಭವದ ಕಂಪನ್ನು ತೀಡುವ ಚುಟುಕುಗಳು ತುಂಬಾ ಮಾರ್ಮಿಕವಾಗಿ ಮೂಡಿಬಂದಿದೆ. ದುಡಿವ ಬಡವನ ದುರ್ಗತಿಯ ಬಗೆಗಿನ ಅನುಕಂಪ, ಶೋಷಕರ ವಿಡಂಬನೆ, ರಾಜಕೀಯ ವಿಡಂಬನೆ, ಆರ್ಥಿಕ ವಿಡಂಬನೆ, ಶೋಷಣೆಯ ನೆಲೆ, ಮತಮಾನ್ಯಗಳ ಗೋಸುಂಬೆತನ ಹೀಗೆ ಸಮಾಜದ ಹಲವಾರು ಸಮಸ್ಯೆಗಳನ್ನು ಬಯಲುಗಳೆಯುವುದರ ಮುಖೇನ ಅದಕ್ಕೆ ಪರಿಹಾರಗಳನ್ನು ನೀಡುತ್ತಾರೆ.

"ಹಲವು ಬಣ್ಣಗಳ ಹೂಗುಂಪು ಗುಂಪಾಗಿರಲು
ಬಲು ಚಂದವು ಧ್ಯಾನವಲ್ಲದಿರೆ ಸೊಗಸಿಲ್ಲ
ಹಲವು ಧರ್ಮಗಳು ಸಮರಸದಿ ಸಂಗಮಿಸುವ
ವಲಯದಲ್ಲಿ ಸುಖಶಾಂತಿಯುಂಟುಮಗಳೆ

ಹೊಲಗದ್ದೆ ತೋಟದಲ್ಲಿ ಮನಕ್ಕೆ ಬಂದುದ ಮೇದು
ಮಲೆತು ಕೊಬ್ಬಿಹ ಬಸವನಿಗೆ ಸಕಲ ಶೃಂಗಾರ
ಸಲೆ ದುಡಿವ ದನಕಿಲ್ಲ ಒಣಹುಲ್ಲು, ಕೇಳ್ಮಗಳೇ
ತಲೆಕೆಳಗು ನೀತಿಯದು ಲೋಕರೂಢಿ"[೧೦]

ಇಲ್ಲಿ ಸಮರಸದ ಕಂಪಿದೆ, ತಾತ್ವಿಕ ಚಿಂತನೆ ಇದೆ. ದುಡಿವ ಬಡವನ ಬಗ್ಗೆ ಅನುಕಂಪವಿದೆ. ದುಡಿವ ಜನತೆಗೆ ಹೊಟ್ಟೆತುಂಬ ಊಟವಿಲ್ಲದೆ ಶೋಚನೀಯ ಸ್ಥಿತಿಯನು ದೇಜಗೌರವರು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಶ್ರೀಮಂತರು ಶ್ರೀಮಂತರಾಗಿಯೇ ಮುಂದುವರೆಯುತ್ತಿದ್ದಾರೆಯೇ ಹೊರತು, ಬಡವ ಬಡವನಾಗಿಯೇ ಉಳಿಯುವ ಅಂಶವನ್ನು ಇಲ್ಲಿ ಸೂಚ್ಯವಾಗಿ ತಿಳಿಸಿದ್ದಾರೆ.

ತಾನು ಹುಟ್ಟಿದ ಊರು, ನಾಡು, ನುಡಿ ದೇಶಗಳ ಬಗ್ಗೆ ಪ್ರೊ. ದೇಜಗೌ ಸದಾ ಜಾಗೃತಿಯುಳ್ಳವರಾಗಿದ್ದಾರೆ. ಕನ್ನಡವನ್ನು ಒಂದು ಭಾಷೆಯಾಗಿ ಕಾಣದೆ ಸ್ವರ್ಗವಾಗಿ ಕಂಡು ಅನುಭವಿಸಿ, ಬೇರೆಯವರಿಗೂ ಭಾಷೆಯ ಬಗ್ಗೆ ಜಾಗೃತಿಯನ್ನುಂಟು ಮಾಡಿದರು. ಕನ್ನಡ ನನಗೆ ಗಾಯತ್ರಿ ಇದ್ದ ಹಾಗೆ ಎಂದು ಹೇಳಿದವರು. "ಕನ್ನಡತ್ರ್ಯಕ್ಷರಿಯೆ ನನ್ನ ಗಾಯತ್ರಿ; ಸಗ್ಗಕಿಂ ಮಿಗಿಲೀ ಕನ್ನಡ ಧರಿತ್ರಿ"[೧೧] ಢಕಾಯಿತರನ್ನು ಕುರಿತು ಹೀಗೆ ತಮ್ಮ ಚುಟುಕುವಿನಲ್ಲಿ ಅಭಿವ್ಯಕ್ತಪಡಿಸಿರುವುದನ್ನು ನಾವು ತಿಳಿಯಬಹುದಾಗಿರುತ್ತದೆ.

"ಢಕಾಯಿತರು ಗಿರಿಗಹ್ವರ ಕಾನನಗಳಲ್ಲಿಲ್ಲ
ಪಿಂಡಾರೆಯರು ಪರ್ವತ ಗುಹೆಗಳಲ್ಲಿವಿತಿಲ್ಲ
ಸಂಸದ್ಯಾಸನ ಸಭೆಯ ಹೊಕ್ಕಿಹರೆಲ್ಲ
ಮಂತ್ರಿಮಂಡಲಿಯ ಸೇರಿಹರು ಬಲ್ಲೆ
ಎಂದು ಗುಡುಗಿಹುದು ಸರಿ ಪೋಲನ್‌ದೇವಿ ಸೊಲ್ಲೆ
ಸಭ್ಯರು ಹಲವರುಂಟೆಂಬುದನು ನಾ ಬಲ್ಲೆ"[೧೨]

ಢಕಾಯಿತರು ಪರ್ವತ ಬೆಟ್ಟಗುಡ್ಡಗಳಲಿಲ್ಲ. ಮಂತ್ರಿಮಂಡಲದಲ್ಲಿದ್ದಾರೆ. ರಾಜಕೀಯ ಢಕಾಯಿತರನ್ನು ಕುರಿತು ತುಂಬಾ ಮಾರ್ಮಿಕವಾಗಿ ಇಲ್ಲಿ ಹೇಳಿರುವುದನ್ನು ಗಮನಿಸಬಹುದಾಗಿದೆ.

ದೇಜಗೌರವರ ಪ್ರತಿಯೊಂದು ಚುಟುಕು ಕೂಡ ಓದುಗರಿಗೆ ತುಂಬ ಪರಿಣಾಮಕಾರಿಯಾಗಿ ಪ್ರಭಾವ ಬೀರುವುದರಲ್ಲಿ ಯಶಸ್ವಿಯಾಗುತ್ತವೆ. ಇಂದಿನ ಸಮಾಜದ ಹದಗೆಟ್ಟ ಸ್ಥಿತಿಯನ್ನು ಎತ್ತಿತೋರಿಸಲು ಚುಟುಕು ಪುಟ್ಟದುರ್ಬೀನು ಇದ್ದ

ಹಾಗೆ ತನ್ನ ಮಾತಿನ ಮೊನಚಿನಿಂದ, ಹರಿತ ವ್ಯಂಗ್ಯ ವಿಡಂಬನೆಯ ಮೂಲಕ ಚುಟುಕು ಓದುಗನನ್ನು ಚುಚ್ಚುತ್ತದೆ ಮತ್ತು ಎಚ್ಚರಿಸುತ್ತದೆ.

ಬೆಳಕನ್ನು ಸೋಸಿ ಹೊಸ ಬೆಳಕನ್ನು ಓದುಗನಿಗೆ ನೀಡುವ ತಾಕತ್ತು ನೀಡುವ ಶಕ್ತಿ ದೇಜಗೌರವರ ಚುಟುಕುಗಳಿವೆ, ನಮ್ಮ ರಾಜಕಾರಣಿಗಳ ಇಬ್ಬಂದಿತನವನ್ನು ಕುರಿತು ಹೀಗೆ ವಿಡಂಬಿಸಿದ್ದಾರೆ.

"ಮಂತ್ರಿ ಹೆಬ್ಬುಲಿ ತೋಳನಧಿಕಾರಿ ಗಡಣವದು
ಕಂತ್ರಿ ನೌಕರ ಕಿರುಬ ಕಣೆಹಂದಿ ಚಿರತೆಯು
ಮಂತ್ರವೇತ್ತಕಿ ಕೊಳಕು ಮಂಡಲವು ನಾಯಕ
ತಂತ್ರಿಗಳೇ ಸೀಳ್ನಾಯಿ ಕೇಳು ಮಗಳೆ,[೧೩]

ಜಾತಿಯ ವಿಷ ಇಂದು ತಾಂಡವವಾಡುತ್ತಿದೆ. ಅವರ ಜಾತಿಯ ನಾಯಕರು, ನಮ್ಮವರು ಎಂಬ ಭೇದ ಭಾವವನ್ನು ಕಾಣುತ್ತಿದ್ದೇವೆ. ಸಾಮಾನ್ಯ ಶೂದ್ರವರ್ಗದ ವ್ಯಕ್ತಿ ದೊಡ್ಡ ಸ್ಥಾನಕ್ಕೆ ಏರಿದಾಗ ಜನರಾಡುವ ಮಾತನ್ನು ಹೀಗೆ ಅಭಿವ್ಯಕ್ತಪಡಿಸುತ್ತಾರೆ.

"ಪುರುಷ ಗಾಂಧಾರಿಯರುಂಟು ಈ ಯುಗದಿ
ಗೌಡನೊಬ್ಬ ದೆಹಲಿ ಗಾದಿಯೇರಿದರೆ ಭರದಿ
ಹೊಟ್ಟೆ ಹಿಸುಕಿಕೊಳ್ಳುವರು, ಕಕ್ಕುವರು, ಕಾರುವರು
ಭೂತ ಹಿಡಿದವರಂತೆ ಸುತ್ತುವರು ಬಯ್ಯುವರು
ನಾಗರಿಕ ನೀತಿಯನು ಬದಿಗೊತ್ತಿ"[೧೪]

ಇಂದಿನ ಯುಗದಲ್ಲಿ ಹೊತ್ತಿಗೆ ತೆಗೆಸಿ ತಮ್ಮ ಹಣೆಬರಹವನ್ನು ಜೋಯಿಸರ ಹತ್ತಿರ ಕೇಳುವುದುಂಟು. ತೀರ್ಥಯಾತ್ರೆ, ದೇವಾಲಯಕ್ಕೆ ಹೋಗಿ ಹಣ, ಸಮಯವನ್ನು ಖರ್ಚುಮಾಡುವುದುಂಟು. ಅದಕ್ಕೆ ದೇಜಗೌರವರು ತಮ್ಮ ಚುಟುಕುವಿನಲ್ಲಿ ನಂಬಿಕೆ ನನ್ನಲ್ಲಿದ್ದರೆ ಸಾಕು ಎನ್ನುತ್ತಾರೆ.

"ನನ್ನ ನಾ ನಂಬುವೊಡೆ
ಜೋಯಿಸರು ಬೇಡ
ಪಂಚಾಂಗವೂ ಬೇಡ
ತೀರ್ಥಯಾತ್ರೆಯೂ ಬೇಡ
ದೇವಾಲಯವೂ ಬೇಡ"[೧೫]

ದೇಜಗೌ ಅವರಿಗೆ ಕುವೆಂಪು ಗುರು ಮಾತ್ರ ಅಲ್ಲ, ಎಲ್ಲವೂ ಆಗಿದ್ದಾರೆ. ಅವರು ಕುವೆಂಪುರವರಿಂದ ಸತ್ಯದ ದರ್ಶನವನ್ನು ಮಾಡಿಕೊಂಡವರು. ಅವರ ಸಂಪೂರ್ಣ ಬದುಕನ್ನು ನೋಡಿದವರು, ಬೇರೆಯವರಿಗೂ ಕುವೆಂಪು ದರ್ಶನವನ್ನು ಉಣಬಡಿಸಿದವರು.

"ಬೇಡ ಬೇಡ ಪ್ರದರ್ಶನ
ಬೇಕು ಸತ್ಯ ಸುದರ್ಶನ
ಇದುವೆ ನಿಜದ ದರ್ಶನ
ಕುವೆಂಪು ಬದುಕು ನಿದರ್ಶನ"[೧೬]

ಇಂದಿನ ದಿನಗಳಲ್ಲಿ ಏನೇ ಕೆಲಸ ಕಾರ್ಯಗಳನ್ನು ಸಮಾಜದಲ್ಲಿ ಮಾಡಬೇಕಾದರೆ ಲಾಭ ಇಲ್ಲದೆ ಸಾಧ್ಯವಿಲ್ಲ. ಈ ಲಾಭತನವನ್ನು ಕುರಿತು

"ಲಾಬಿಯೆಂಬುದು ಯೋಗ್ಯನಭಿನಯಿಪ ನಾಟಕಂ
ಲೋಭಿಜನ ಬೆಣ್ಣೆ ಹಚ್ಚುವ ಕಪಟ ವರ್ತನಂ
ಲಾಭಕೋರರು ಹೊಂಚಿ ಬೀಸೆಸೆವ ಹೆಜ್ಜಾಲ
ಲಾಬಿಯೇ ಬದುಕು ಕೆಲವರಿಗೆ ಮಗಳೆ"[೧೭]

ಇಂದಿನ ನಮ್ಮ ರಾಜಕಾರಣಿಗಳು ಹೊರಗಡೆಯ ರಾಜ್ಯಗಳಿಂದ ಬಂದು ಇಲ್ಲಿ ಸಂಸದರಾಗಿ ಮತ್ತೆ ಧನಿಕ ಶೋಷಕರಾಗಿ ನಿರ್ಮಾಣಗೊಳ್ಳುತ್ತಿರುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ.

"ಹೊರಗಡೆಯ ನೆಲೆಯಿರದ ಧನಿಕ ಶೋಷಕರನ್ನು
ಕರೆ ಕರೆದು ಕಯ್ಯೊಡಿಯಂಜಲಿಗೆ ಸಂಸದರ,
ವರ ಪದವಿ ನೀಡುತ್ತ ರಾಜ್ಯವನ್ನು ಮಾರಿ ನರೆ
ಮರೆವ ಮನೆ ಮುರುಕರನು ಶಪಿಸು ಮಗಳೆ"[೧೮]

ಸಮಾಜದ ನಗ್ನ ಸತ್ಯಂಗಳನ್ನು ಪ್ರೊ. ದೇಜಗೌ ಹಿಂದುಮುಂದು ನೋಡದೆ ಬಯಲಿಗೆಳೆಯುತ್ತಾರೆ. ಜಾತಿಮೋಹ, ಮತಧರ್ಮ, ರಾಜಕೀಯ, ಭ್ರಷ್ಟಚಾರ ಇವೆಲ್ಲವನ್ನು ತುಂಬ ಮಾರ್ಮಿಕವಾಗಿ ಚುಟುಕುಗಳಲ್ಲಿ ವಿಡಂಬಿಸಿದ್ದಾರೆ.

ಬಡವರಿಗೆ ಸದಾ ಬರದ ಪೀಡೆ ಇದ್ದರೆ, ಶ್ರೀಮಂತರಿಗೆ ಯಾವಾಗ ರಾಸ ಕ್ರೀಡೆಯಾಡುತ್ತಾರೆ ಎಂಬ ಅಂಶವನ್ನು ಎರಡೇ ಪಂಕ್ತಿಗಳಲ್ಲಿ ಹೀಗೆ ಬರೆಯುತ್ತಾರೆ.

"ಬಂತು ಬಡವರಿಗೆ ಪೀಡೆ
ಅಂತೆ ಸಿರಿಯರಿಗೆ ರಾಸ ಕ್ರೀಡೆ"[೧೯]

ಎಷ್ಟೋ ಮಂದಿ ಸಮಾಜದಲ್ಲಿ ಮತಿಯಿದ್ದು ಕೂಡ ಅದನ್ನು ಸರಿಯಾಗಿ ಬಳಸದೆ ಬೇತಾಳದಂತೆ ವರ್ತಿಸುತ್ತಿದ್ದಾರೆ.

"ಮತಿಯಿದ್ದೂ ಬಳಸದ
ಕೈಯಿದ್ದೂ ಗೆಯ್ಯದ
ಕಾಲಿದ್ದೂ ನಡೆಯದ
ಕಣ್ಣಿದ್ದೂ ನೋಡದ
ನರನರನಲ್ಲ
ಪ್ರಾಣಿಯು ಅಲ್ಲ
ಬೇತಾಳ"[೨೦]

ನಮ್ಮಲ್ಲಿ ಇಂದು ರೋಗ ಬಂದರೆ, ರಾಜಕೀಯದಲ್ಲಿ ಗೆದ್ದರೆ ದೇವರ ಮೇಲೆ ಆರೋಪಿಸಿ ಕೈತೊಳೆದುಕೊಳ್ಳುವುದುಂಟು, ಖಾಯಿಲೆ ವಾಸಿ ಮಾಡಿದ ವೈದ್ಯನ ಪಾತ್ರ ಇಲ್ಲಿ ನಮಗೆ ಪ್ರಮುಖವಾಗುವುದಿಲ್ಲವೆಂಬುದಕ್ಕೆ –

"ಜಯಲಲಿತ ಗೆದ್ದದ್ದುಗುರುವಾಯೂರಪ್ಪನಾ ಕೃಪೆಯಂತೆ
ಜನರ ಮತಗಳಿಂದಲ್ಲ
ಪ್ರಧಾನಿ ವಾಜಪೇಯಿ ಮಂಡಿ ಸರಿಯಾದದ್ದು ಚಂಡಿ
ಯಾಗದಿಂದಂತೆ
ವೈದ್ಯರ ಪಾತ್ರದಿಂದಲ್ಲ
ಜನರು ವೈದ್ಯರು ತಿಳಿಯ
ಬೇಕಿವರ ಮತಾಂಧ ಭಂಡ
ಬುದ್ಧಿಯನು"[೨೧]

ಇಂದಿನ ರಾಜಕೀಯ ಪುಡಾರಿಗಳು ಆಣೆ ಇಟ್ಟು ಮತ ಪಡೆಯುವುದನ್ನು ನಾವು ನೋಡುತ್ತಿದ್ದೇವೆ. ಇಂಥವರು ವಿಶ್ವಾಸಘಾತಕ ಸ್ವಾರ್ಥಿಗಳು ಎಂಬುದಾಗಿ ದೇಜಗೌ ಎಚ್ಚರಿಸುತ್ತಾರೆ.

"ತಂದೆ ಮಕ್ಕಳ ಮೇಲೆ ಮನೆಯ ದೇವರ ಮೇಲೆ
ಮಿಂದಾಣೆಯಿಟ್ಟಡೆಯು ನಂಬದಿರು ಪುಢಾರಿಯ

ನೆಂದು ವಿಶ್ವಾಸ ಘಾತಕ ಸ್ವಾರ್ಥಿ ಸಮಾಜದ
ಬಂದಿಳಿಕೆ ದೇಶದ್ರೋಹಿಯವ ಮಗಳೆ"[೨೨]

ಅಧಿಕಾರ, ಸಮಾಜವಾದಿಗಳು ಪ್ರಜಾಪ್ರಭುತ್ವವಾದಿಗಳು, ಕ್ರಾಂತಿಕಾರರು ಈಗ ದುರ್ಜನರಾಗುತ್ತಿದ್ದಾರೆ ಎಂಬ ಅಂಶವನ್ನು ದೇಜಗೌ ತಮ್ಮ ಚುಟುಕುವಿನಲ್ಲಿ ಮಾರ್ಮಿಕವಾಗಿ ತಿಳಿಸಿದ್ದಾರೆ.

ಪ್ರೊ. ದೇಜಗೌ ಅವರು ಗುರುವನ್ನು ಆರಾಧಿಸುತ್ತಾ ಸದಾ ನಂಬಿ ಪ್ರಾರ್ಥಿಸುತ್ತಾ ಬರುತ್ತಿದ್ದಾರೆ. ಗುರುವಿನ ಬಗ್ಗೆ ಎಷ್ಟು ಬರೆದರೂ ಧ್ಯಾನಿಸಿದರೂ ಅವರಿಗೆ ಸಾಕೆನಿಸುವುದಿಲ್ಲ. "ಇದುವರೆಗೂ ಮೂರುವರೆ ಸಾವಿರದಷ್ಟು ಪುಟಗಳನ್ನು ಕುವೆಂಪು ಅವರ ಬಗ್ಗೆ ಅವರ ಸಾಹಿತ್ಯದ ಮೇಲೆ ಬರೆದಿರುವುದು ವಿಶ್ವಸಾಹಿತ್ಯದಲ್ಲೇ 'ಮೊದಲ ಪ್ರಯತ್ನ' ಎಂದರೆ ಅತಿಶಯೋಕ್ತಿಯೇನಲ್ಲ. "ಚುಟುಕು"[೨೩]ವಿನಲ್ಲೂ ಗುರುವಿನ ಸ್ಥಾನ ತಪ್ಪಿಸಿಲ್ಲ ಎಂಬುದಕ್ಕೆ

"ಏಸು ಮಹಮದ ಬುದ್ಧ ಬಸವೇಶ್ವರ ಚೈತನ್ಯ
ಮಾಸದಿಹೆ ಹೆಸರಾಂತ ರಾಮಕೃಷ್ಣ ಗುರು ಯತಿ
ಭಾಸುರರ ಕಾಂಬೆನಲ್ತೆ ಕುವೆಂಪು ಗುರುವಿನಲಿ
ಏಸುಧನ್ಯನೊ ನಾನು ಮರೆಯೆ ಮಗಳೆ"[೨೪]

ಕುವೆಂಪುರವರ ವಿಚಾರಗಳನ್ನು ವಿಶ್ವಮಾನವ ಸಂದೇಶಗಳನ್ನು ಚುಟುಕುಗಳಲ್ಲಿ ತುಂಬ ಸರಳವಾಗಿ, ಸೂಕ್ಷ್ಮವಾಗಿ ಅಭಿವ್ಯಕ್ತಪಡಿಸುತ್ತಾರೆ. ಸಮಾಜದ ಜನ ಕುವೆಂಪುರವರ ಸಂದೇಶಗಳನ್ನು ಚೆನ್ನಾಗಿ ಅರಿತರೆ ಸಮಾಜೋದ್ದಾರ ಸಾಧ್ಯ ಎಂಬುದು ದೇಜಗೌ ಅವರ ನಿಲುವು, ವಿಶ್ವಮಾನವಸೂತ್ರ ಬರಿಯ ಘೋಷಣೆಯಲ್ಲ. ಅದು ವಿಶ್ವಕ್ಕೆ ವರ, ದಿವ್ಯಮಂತ್ರ ಅದು ತಪಸ್ಸಿದ್ಧಿಯಿಂದ ಬಂದುದು ಎಂಬ ಅಂಶವನ್ನು ಹೀಗೆ ಸ್ಪಷ್ಟಪಡಿಸುತ್ತಾರೆ.

"ವಿಶ್ವಮಾನವ ಸೂತ್ರ ಬರಿಯ ಘೋಷಣೆಯಲ್ತು
ವಿಶ್ವಕವಿ ತಪಸ್ಸಿದ್ಧಿಗೆ ಮಣಿದು ತಿಳಿ ಮಗಳೆ
ವಿಶ್ವಾತ್ಮರಿಳಿತಂದು ವಾಗ್ರೂಪಮಂ ಧರಿಸೆ
ವಿಶ್ವಕ್ಕೆ ವರವಾದ ದಿವ್ಯಮಂತ್ರ"[೨೫]

ಪಂಚಮಂತ್ರ, ಸಪ್ತಸೂತ್ರ, ಮನುಜಮತ, ವಿಶ್ವಪಥ ಇದೇ ನಮಗೆ ಮುಖ್ಯ. ಆ ಮತಕ್ಕೆ ಈ ಮತಕ್ಕೆ ನೇತುಕೊಳ್ಳುವುದು ಬೇಡ, ಭ್ರಮೆಯೇಕೆ ಎಲ್ಲರಲ್ಲಿ ನಿನ್ನ ಮತ ನಿನಗಿರಲಿ ಎನ್ನುತ್ತಾರೆ. ಸಮಾಜದಲ್ಲಿ ಇಂದು ಕೂಡ 'ಮದುವೆ' ಎಂಬುದು ಕೆಲವರಿಗೆ

ಪ್ರತಿಷ್ಠೆಯಾಗಿ ಬಿಟ್ಟಿದೆ. ಸಾಲಮಾಡಿಯಾದರೂ ಮದುವೆ ಮಾಡಿ ಮೃತ್ಯುಕೂಪಕ್ಕೆ ಸಿಕ್ಕಿಹಾಕಿಕೊಂಡು ನರಳುತ್ತಿರುವ ಈ ಜಗತ್ತಿನಲ್ಲಿ ಕುವೆಂಪುರವರ ಮಂತ್ರಮಾಂಗಲ್ಯವನ್ನು ಸರಿಯಾಗಿ ಪಾಲಿಸುತ್ತಿಲ್ಲವಲ್ಲ ಎಂಬ ನೋವು ದೇಜಗೌರವರಿಗಿದೆ.

ಕವಿ ಕೊಟ್ಟ ಮಂತ್ರಕ್ಕೆ ಎಂದು ಕುಂದುಂಟಾಗದು, ವಿಶ್ವಾಸವಿಲ್ಲದವರನ್ನು 'ಕಂತ್ರಿ ನಾಯೊಂದು ಬೀದಿಯಲ್ಲಿ ಬಗುಳಿದರೆ' ಎಂದು ವಿಡಂಬಿಸಿರುವುದು ಬಹಳ ಮಾರ್ಮಿಕವಾಗಿ ಮೂಡಿ ಬಂದಿದೆ. ದೈವವನ್ನು ಕುರಿತು ಹಲವಾರು ಚುಟುಕುಗಳಲ್ಲಿ ತುಂಬ ವಿಡಂಬನಾತ್ಮಕವಾಗಿ ರಚಿಸಿದ್ದಾರೆ. ಭಾಷೆಗಳು ನಾನಾತರ, ನಾನಾರೂಪ, ರೂಪಾತೀತ ಎನ್ನುವುದನ್ನು ಹೀಗೆ ಧ್ವನಿಸುತ್ತಾರೆ.

"ಎಷ್ಟೊಂದು ಭಾಷೆಗಳು ಅಷ್ಟೊಂದು ನಾಮಗಳು
ಎಷ್ಟೊಂದು ವಸ್ತುಗಳು ಅಷ್ಟೊಂದು ರೂಪಗಳು
ಸೃಷ್ಟಿಗಧಿಪತಿಗೆ ನಾಮ ರೂಪಾತೀತನಿಗೆ
ಅಷ್ಟೆಲ್ಲ ಸಲ್ಲುವುವು ಕೇಳು ಮಗಳೆ"[೨೬]

ದೇವರ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯ, ಕಂದಾಚಾರ, ಮೋಸ, ಕಪಟ, ವಂಚನೆಗಳನ್ನು ಹೀಗೆ ಬಯಲಿಗೆಳೆಯುತ್ತಾರೆ.

ದೇವರಾಭರಣಗಳ ಪೂಜಾರಿ ಮಾರುತಿರೆ
ಕಾವ ದೇವರ ಹುಂಡಿಯನೆ ತಸ್ಕರರು ಕದಿಯೆ
ಸೇವೆಗೋಸುಗ ವೋಪ ಭಕ್ತನಪಘಾತದಲ್ಲಿ
ಸಾವಪ್ಪೆ ಗುಡಿಯೇಕೆ ಯಾತ್ರೆ

– ಎನ್ನುವಲ್ಲಿಯೂ ದೇವರ ಧರ್ಮದ ಹೆಸರಿನಲ್ಲಿ ನಡೆಯುವ ಕಂದಾಚಾರವನ್ನು ಟೀಕಿಸಿದ್ದಾರೆ. ಸಮಾಜದಲ್ಲಿ ಒಬ್ಬರಿಂದ ಉಪಕಾರ ಪಡೆದು ಮತ್ತೊಬ್ಬರಿಗೆ ಅಪಕಾರ ಬಗೆಯುವವರೆ ಹೆಚ್ಚು. ಕೃತಘ್ನತೆ ಎಂಬುದೇ ಎಲ್ಲೆಲ್ಲೂ ರಾರಾಜಿಸುತ್ತಿದೆ, ದೇಜಗೌ ಜೀವನದಲ್ಲಿ ಸ್ವತಃ ಕಂಡು ಅನುಭವಿಸಿದ ಸತ್ಯವನ್ನು ಹೀಗೆ ಬರೆದಿದ್ದಾರೆ.

"ಉಪಕಾರ ಪಡೆದವನು ನೆನೆಯದಿರೆ ಚಿಂತಿಲ್ಲ
ಅಪಕಾರ ಮಾಡುವಡೆ ತಗಲುವುದು ದುಷ್ಪಾಪ
ಅಪರಾಧವಿದಕ್ಕಿಂತ ಬೇರಿಲ್ಲ ಜಗದೊಳಗೆ
ವಿಪದವಗೆ ದೊರೆಕೊಳದೆ ಪೇಳುಮಗಳೆ"[೨೭]

ಅಪರಾಧವನ್ನು ಮಾಡಬೇಡಿ ಎಂಬ ಸಾತ್ವಿಕ ಸಲಹೆಯನ್ನು ಇಲ್ಲಿ ನೀಡಿದ್ದಾರೆ. ತಪ್ಪು ಮಾಡುವುದು ಸಹಜ. ಅದನ್ನು ತಿದ್ದಿಕೊಳ್ಳುವುದೇ ಒಳ್ಳೆಯ ಮಾರ್ಗ. ಕಾಯಕದ ಬಗ್ಗೆ ಬರೆಯುತ್ತಾ ಬಡತನವೆಂಬ ವೈರಿಯನ್ನು ಹೋಗಲಾಡಿಸಬೇಕಾದರೆ 'ಕಾಯಕವೇ ಮದ್ದು' ಎಂಬ ಸಲಹೆಯನ್ನು ನೀಡಿದ್ದಾರೆ.

ಹೋರಾಟ ಕಲಿಯಲ್ಕೆ ಹೋರಾಟ ಬೇಕಲ್ತೆ
ನೀರಿಗಿಳಿಯದೆ ಈಜು ಮೇಳಿ ಹಿಡಿಯದೆ ಉಳುಮೆ
ದಾರಿ ನಡೆಯದೆ ಗುರಿಯು ಕರ್ಮವಿಲ್ಲದೆ ಫಲವು
ಸಾರುವುದೆ?

ಇದೇ ಬದುಕು ಎಂದು ಹೇಳುವುದರ ಮುಖೇನ ಕಾಯಕದ ಮಹತ್ವವನ್ನು ಸಾರುತ್ತಿದ್ದಾರೆ. ಬರೀ ಆಸೆ, ಆಕಾಂಕ್ಷೆ ಇಟ್ಟುಕೊಂಡರೆ ಸಾಲದು, ಸದಾ ದುಡಿಯಬೇಕು. ದುಡಿಮೆಗೆ ತಕ್ಕ ಫಲ ಸಮಾಜದಲ್ಲಿ ದೊರೆಯುತ್ತದೆ.

ಸಮಾಜದಲ್ಲಿ ರೈತನಿಗೆ ಮಹತ್ವದ ಸ್ಥಾನವನ್ನು ಕೊಟ್ಟವರು ರಾಷ್ಟ್ರಕವಿ ಕುವೆಂಪು ನಂತರ ದೇಜಗೌ, ಸಾಹಿತ್ಯದಲ್ಲಿ ರೈತನ ಮಹತ್ವವೇನು? ಎಂಬ ಅಂಶವನ್ನು ಒತ್ತಿ ಹೇಳಿದ್ದಾರೆ. ಸಮಾಜದ ಎಲ್ಲಾ ವರ್ಗದವರಿಗೂ ರೈತನಿಂದಲೇ ಸುಖ ಸಂಪತ್ತು ದೊರೆಯುತ್ತದೆ.

"ರೈತನಿಂ ಧನಧಾನ್ಯ ಸಂಪತ್ತು ಹೆಚ್ಚುವುವು
ರೈತನಿರೆ ವಿಜ್ಞಾನ ಯಂತ್ರಗಳು ನಡೆಯುವುವು
ರೈತನಿಂ ರಾಜಕಾರಣಿ ಮಂತ್ರಿಪಂಡಿತರು ಮೆರೆಯುವರು
ರೈತನಿಂ ಸುಕ್ಷೇಮ ಧರೆಗೆ ಮಗಳೆ"[೨೮]

ರೈತ ಏನಾದರೂ ಪತನದ ಹಾದಿ ಹಿಡಿದರೆ ನಾಡು ಕೂಡ ನಾಗರಿಕತೆಯ ಪತನವನ್ನು ಕಾಣುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ. 'ರೈತ ಪತನವೇ ರಾಷ್ಟ್ರಪತನಕ್ಕೆ ಹೆದ್ದಾರಿ' ರೈತನಿಂದಲೇ ಇಹಪರವು ಎಂಬುದಕ್ಕೆ

ರೈತನಿರೆ ವಿದ್ಯೆ ಜಪತಪ ಪೂಜೆ ರತಿ ಸೌಖ್ಯ
ತಾತ್ವಿಕರ ಮಂತ್ರಿಗಳ ಶೋಧಕರ ದವಲತ್ತು
ರೈತನಾ ನಿಟ್ಟುಸಿರೆ ಜಗಕ್ಕೆ ಕಾಳ್ಗಿಚ್ಚಹದು
ರೈತನಿಂ ಇಹಪರವು ಕೇಳು ಮಗಳೆ

ಇಂತಹ ಚುಟುಕುಗಳಲ್ಲಿ ದೇಜಗೌರವರ ಸಾಮಾಜಿಕ ಪ್ರಜ್ಞೆ ಸದಾ ಜಾಗೃತವಾಗಿ ಮೂಡಿ ಬಂದಿದೆ. ಕೃಷಿಕ ಮನೆತನದಿಂದ ಬಂದ ಅವರಿಗೆ ಕೃಷಿಕನ ಕಷ್ಟಕಾರ್ಪಣ್ಯಗಳು ಗೊತ್ತು. ಆದ್ದರಿಂದ ಗ್ರಾಮದಿಂದ ಹಿಡಿದ ವಿಶ್ವದತನಕ ಚುಟುಕುಗಳಲ್ಲಿ ಸಮಸ್ತ ವಿಷಯಗಳನ್ನು ಕುರಿತು ಚಿಂತನೆ ನಡೆಸಿದ್ದಾರೆ.

ಚುಟುಕುಗಳ ಬೆಳವಣಿಗೆ ಇಂದಿನದಲ್ಲ, ಹಿಂದಿನದು ಎಂಬ ಅಂಶವನ್ನು ನಾವು ಮನಗಾಣಬೇಕಾಗಿದೆ. ೧೦ನೇ ಶತಮಾನದ ಪಂಪ ಮಹಾಕವಿಯ ಈ ವಾಕ್ಯ ಇಂದಿಗೂ ಪ್ರಸ್ತುತವಾಗಿದೆ.

"ಸೂಳ್ಪಡೆಯಲಪ್ಪುದು ಕಾಣಮಹಾಜಿರಂಗದೊಳ್"[೨೯]

– ಇಡೀ ಜೀವನಕ್ಕೆ ಅನ್ವಯಿಸುವ ವ್ಯಾಪಕಾರ್ಥವಿದೆ, ಮನುಷ್ಯ ಜಾತಿ ತಾನೊಂದೆವಲಂ" ಎಂಬ ಆದಿಪುರಾಣದ ಸೂಕ್ತಿ ಇಂದಿಗೂ ಅತ್ಯಗತ್ಯ ಲೌಕಿಕ ಸಂದೇಶವಾಗಿದೆ.

ಸರ್ವಜ್ಞನ ಹಲವಾರು ತ್ರಿಪದಿಗಳು ಉತ್ತಮ ಚುಟುಕುಗಳಾಗಿ ಕಂಡುಬರುತ್ತವೆ. ಒಂದು ಜೀವನದ ದರ್ಶನವನ್ನೇ ಮಾಡಿದಂತಾಗುತ್ತದೆ. ಸರ್ವಜ್ಞ ತ್ರಿಪದಿಗಳನ್ನು ಅಭ್ಯಾಸ ಮಾಡುವಾಗ ಜೀವನ ದರ್ಶನ ಆಗುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಮಹಿಳೆಯರು ಕೂಡ ಚುಟುಕುಗಳನ್ನು ರಚಿಸಿ ಸಂವೇದನೆಯ ನೆಲೆಯಲ್ಲಿ ಚಿಂತನೆ ನಡೆಸಿದ್ದಾರೆ. ಅವರಲ್ಲಿ ಮುಖ್ಯವಾಗಿ ಸ.ಉಷಾ, ಕಮಲಾಹೆಮ್ಮಿಗೆ, ಶೈಲಜಾ ಉಡಚಣ, ಡಾ. ಕಮಲ ಹಂಪನಾ, ಸುಕನ್ಯಾ ಮಾರುತಿ, ಸವಿತಾ ನಾಗಭೂಷಣ, ಬಿ.ಟಿ.ಲಲಿತಾನಾಯಕ್, ಡಾ. ಮಲ್ಲಿಕಾ ಘಂಟಿ ಹೆಸರಿಸಬಹುದಾದ ಹೆಸರುಗಳು,

"ಚಿನ್ನದ ಕಣ್ಣು ಬೆಳ್ಳಿ ಮೀಸೆ
ಇಡಿಸಿದೆನಲ್ಲೋ ಊರಹನುಮಪ್ಪ
ನನ್ನ ಕಣ್ಣೀರು ಕಂಡು
ಮೀಸೆಯೊಳಗೆ ಕಿಸಕ್ಕನೆ ನಗುತ್ತಿದ್ದಿ"[೩೦]

ತಾನು ಸಾಗುತ್ತಿರುವ ದಾರಿಯಲ್ಲಿ ನಿಂತು ಹಿಂದಿರುಗಿ ನೋಡಿದ್ದಾಳೆ. ಮಹಿಳೆ ತನ್ನ ಬೆಂದ ಹಿಂದೆ ಹಲವು ಹುನ್ನಾರಗಳು ನಡೆದಿವೆ ತನ್ನ ಕಣ್ಣಿರು ಒರೆಸಲು ತಾನೇ ಮುಂದಾಗಬೇಕೆಂದು ಅರಿವು ಮೂಡಿರಲು ಸಾಕು.

ಯಮರಾಜನನುಜನೆ ಹೇ ವೈದರಾಜರೆ
ಮಣಿದೆವು ಮುಡಿಬಾಗಿ ನಾವು
ಪ್ರಾಣವನೊಂದನೆ ಯಮರಾಜನೊಯ್ದರೆ
ಧನುವನು ಮೊಯ್ವಿರಿ ಆತವು

ರಾಷ್ಟ್ರಕವಿ ಕುವೆಂಪುರವರು "ಶ್ರೀರಾಮಾಯಣದರ್ಶನಂ ಮಹಾಕಾವ್ಯ ಬರೆದರು. ಅದೇ ರೀತಿ ಅವರು "ಮುಕ್ತಕ"ಗಳನ್ನು ಬರೆದು "ಮಂತ್ರಾಕ್ಷತೆ"[೩೧] ಎಂಬ ಹೆಸರಿನಿಂದ ಗ್ರಂಥರೂಪದಲ್ಲಿ ಓದುಗರಿಗೆ ದೊರಕಿಸಿಕೊಟ್ಟಿದ್ದಾರೆ. ಕುವೆಂಪುರವರ ಮುಕ್ತಕಗಳ ವಸ್ತು ಅನಂತ; ವೈವಿಧ್ಯ ವಿಫುಲ, 'ಮಂತ್ರಕ್ಷತೆ' ಎಂಬ ಬಿಡಿಕವನಗಳೇ ಈ ಸಂಗ್ರಹದಲ್ಲಿ ಒಂದುನೂರು ಹದಿನೇಳು ಮುಕ್ತಕಗಳಿವೆ. ಇಲ್ಲಿ ಕವಿ ಕುವೆಂಪುರವರು ವಿಷಯಗಳನ್ನು ವಿಫುಲವಾಗಿ ತಂದಿರುವುದಷ್ಟೇ ಅಲ್ಲದೆ ವೈವಿಧ್ಯಪೂರ್ಣವಾಗಿ ಮೂಡಿಬಂದಿದೆ. ಪ್ರಕೃತಿ ವರ್ಣನೆ ದೈವದ ಹಿರಿಮೆ, ಪ್ರೇಮ, ವಿರಹ, ಬಾಳಿಗೊಂದು ನಂಬಿಕೆ, ವಿಡಂಬನೆ ಹೀಗೆ ಹಲವು ವಿವಿಧ ಪುಸ್ತಕಗಳನ್ನು ಒಳಗೊಂಡಿವೆ.

ಭಾರತದ ಮಕ್ಕಳ ಮೇಲೆ ಇಂಗ್ಲಿಷ್ ಭಾಷೆ ಸವಾರಿ ಮಾಡುತ್ತಿದೆ. ಕವಿ ಮನಸ್ಸು ಹೀಗೆ ಸಂಕಟಪಟ್ಟಿದೆ. ಭಾರತದ ಮಕ್ಕಳು ಈ ಭಾರವನ್ನು ತಪ್ಪಿಸುವಂತೆ ಮಾಡುತ್ತಿರುವ ಆರ್ತನಾದ ಹೀಗೆ ಮೂಡಿಬಂದಿವೆ.

"ಓ ಯಾರದರೂ ಬನ್ನಿ!
ಎಲ್ಲಿಂದಾದರೂ ಬನ್ನಿ
ಏನಾದರೂ ಮಾಡಿ
ಹೆಣ ಹೊರೆಯ ಇಂಗ್ಲಿಷಿನಿಂದೆಮ್ಮ ಪಾರುಮಾಡಿ!"[೩೨]

ಇಂಗ್ಲಿಷಿನಿಂದ ಮಕ್ಕಳ ಕೊಲೆಯನ್ನು ನಿಲ್ಲಿಸಲು ಸರಿಯಾದ ವಿದ್ಯಾಭ್ಯಾಸದ ಯೋಜನೆ ಅವಶ್ಯಕವೆಂದು ಈ ವಿಷಯದಲ್ಲಿ ವಿದ್ವಾಂಸರು ಡೋಲಾಯಮಾನ ಮನಸ್ಕರಾಗಿರುವುದನ್ನು ಕಂಡು

"ಬೇಡ ಬೇಡ ಬೇಡ
ಮಕ್ಕಳ ಈ ಕೊಲೆಬೇಡ!
ತುಸು ಯೋಚಿಸೋ, ಹೇ ವಿದ್ವನ್ಮೂಡ
ತಪ್ಪಿಸೋ ಈ ಇಂಗ್ಲಿಷಿನ ಕೇಡ![೩೩]

ಎಂದು ಪ್ರಾರ್ಥಿಸುತ್ತಾರೆ.

ಸೂಕ್ತಿಗಳಂತೆ ಈ ಮೇಲಿನ ವಾಕ್ಯಗಳು ಕಂಡುಬಂದರೂ ಅರಿವಿನ ಆಳದ ಅಂತರಂಗದ ನುಡಿಗಳಿವು. ಒಟ್ಟಿನಲ್ಲಿ ಮಂತ್ರಾಕ್ಷತೆಯಲ್ಲಿ ಬರುವ ಚುಟುಕುಗಳು ಕೇವಲ ಅಕ್ಕಿಯ ಕಾಳಲ್ಲ. ಅನೇಕ ಮಹಾನಾಯಕರ ಆಶೀರ್ವಾದದ ಬಲವನ್ನು ಹೊಂದಿ ರಕ್ಷೆಯ ಬಲವನ್ನು ನಮಗೆ ನೀಡುತ್ತವೆ. ಸಮಾಜದ ಉದ್ಧಾರಕ್ಕೆ ಬೇಕಾದ ಸಲಹೆಗಳಿವೆ. ಬಾಳಿನಲ್ಲಿ ಶ್ರದ್ಧೆಮಾಡುವ ಅಂಶಗಳಿವೆ. ದುಷ್ಟಶಕ್ತಿಗಳನ್ನು ಎದುರಿಸುವ ಶಕ್ತಿ ಇಲ್ಲಿನ ಮುಕ್ತಕಗಳನ್ನು ಓದಿದಾಗ ನಮಗೆ ತಿಳಿಸುತ್ತದೆ.

ಒಟ್ಟಿನಲ್ಲಿ ಕಲ್ಪನಾಂಶ, ಚಿಂತನಾಂಶ, ಗೇಯಾಂಶ, ನವಿರಾದ ಹಾಸ್ಯ, ವ್ಯಂಗ್ಯ, ವಿಡಂಬನೆ, ಗೇಲಿ, ಕಿಟಕಿ, ಶಬ್ದ, ಚಮತ್ಕಾರ, ಚತುರೋಕ್ತಿ, ಶ್ಲೇಷೆ, ಅಂತ್ಯಪ್ರಾಸ, ಅರ್ಥಧ್ವನಿ, ಶಬ್ದಧ್ವನಿ, ಧ್ವನಿಪೂರ್ಣ, ಅಂತ್ಯ ಇವೇ ಮುಂತಾದ ಗುಣಲಕ್ಷಣಗಳನ್ನು ಚುಟುಕು ಹೊಂದಿರುತ್ತದೆ; ಹೊಂದಿರಬೇಕು. ಕೆಲವೇ ಶಬ್ದಗಳ ಮೂರ್‍ನಾಲ್ಕು ಸಾಲುಗಳ ಕವಿ ಭಾವವೊಂದು ಅಭಿವ್ಯಕ್ತಗೊಂಡು ವಾಚಕನ ಮನವನ್ನು ತೀವ್ರವಾಗಿ ಸ್ಪಂದಿಸುತ್ತದೆ. ಶಬ್ದಭಂಡಾರ, ಅನಗತ್ಯ ವೈಭವೀಕರಣ, ಛಂದಸ್ಸಿನ ಬಂಧನ ಅಲಂಕಾರಗಳು ಕೃತಕತೆಗಳಿಗೆ ಅಲ್ಲಿ ಅವಕಾಶವೇ ಇಲ್ಲ. ಸರಳ, ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತ ನಿರೂಪಣೆ ಇದರ ಜೀವಾಳ. ಹೀಗಾಗಿ ಕವಿಯ ಭಾವನೆಯನ್ನು ಜನತೆಗೆ ಮುಟ್ಟಿಸುವ ಅತ್ಯಂತ ಪ್ರಭಾವಿ ಮತ್ತು ಪರಿಣಾಮಕಾರಿ ಮಾಧ್ಯಮವೆಂದರೆ ಚುಟುಕು. ಪಂಡಿತ ಪಾಮರರನ್ನು ಮೆಚ್ಚಿಸಬಲ್ಲ ಶಕ್ತಿ ಇದಕ್ಕಿದೆ. ಬಂಡಾಯ ದಲಿತ ಕಾವ್ಯ ಸೋತು ಸ್ಥಗಿತಗೊಂಡ ಸಂದರ್ಭದಲ್ಲಿ ಚುಟುಕು ದಿನದಿಂದ ದಿನಕ್ಕೆ ಅನನ್ಯತೆಯನ್ನು ಪಡೆಯುತ್ತಿದೆ. ಇಂದಿನ ಸಂಕ್ಷಿಪ್ತ ಸಾಮಾಜಿಕ ಸಂದರ್ಭದಲ್ಲಿ ಪ್ರಸ್ತುತವಾಗುತ್ತಿದೆ. ಸಾಮಾಜಿಕ ಚಿಂತನೆಗಳ ಧ್ವನಿಪೂರ್ಣ ಅಭಿವ್ಯಕ್ತಿಯಾದ ಚುಟುಕು ಶ್ರೇಷ್ಠ ಕಾವ್ಯವೇ.

ಕಾವ್ಯ ಮೌಲ್ಯದ ಜೊತೆಗೆ ಸಾಮಾಜಿಕ ಮೌಲ್ಯಗಳು ಈ ಚುಟುಕುಗಳಲ್ಲಿವೆ ಎಂಬ ಅಂಶವನ್ನು ವಿಮರ್ಶಕರು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಚುಟುಕು ಸಾಹಿತಿಗಳು ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತವನ್ನು ಮಾಡಿದ್ದಾರೆ. ಕ್ಷಣಿಕ ಸುಖದ ಹುಚ್ಚನು ಬಿಟ್ಟು ಶಾಶ್ವತ ಸುಖ ನೀಡುವ ಸಾಮಾಜಿಕ ಮೌಲ್ಯಗಳನ್ನು ತರುವುದರ ಮೂಲಕ ಚುಟುಕು ಸಾಹಿತ್ಯದ ಕ್ಷೇತ್ರ ಸಾರ್ಥಕವಾಗಿದೆ ಎಂಬ ಅಂಶವನ್ನು ಎಲ್ಲರೂ ಮನಗಾಣಬೇಕಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಎಂ.ಜಿ.ಆರ್.ಅರಸ್(ಸಂ.), ಚುಟುಕು, ಮಂದಾರ, ಪು. ೬೦, ವೈದ್ಯವಾರ್ತೆ ಪ್ರಕಾಶನ, ಮೈಸೂರು.
೨. ಅದೇ, ಪು. ೬೧.
೩. ಅದೇ, ಪು. ೬೨.
೪. ಅದೇ, ಪು. ೬೩.
೫. ಅದೇ, ಪು. ೬೪.
೬. ದೇಜಗೌ, ಚುಟುಕುಗಳು(ಲೇಖಕರ ಮಾತು), ಪು. ೫, ವೈದ್ಯವಾರ್ತೆ ಪ್ರಕಾಶನ, ಮೈಸೂರು.
೭. ಅದೇ, ಪು. ೬.
೮. ಅದೇ, ಪು. ೭.
೯. ಅದೇ, ಪು. ೭.
೧೦. ಅದೇ, ಪು. ೮.
೧೧. ಡಾ. ಎಂ.ಜಿ.ಆರ್.ಅರಸ್(ಸಂ.), ಚುಟುಕು, ಮಂದಾರ, ಪು. ೬೭.
೧೨. ಅದೇ, ಪು. ೬೮.
೧೩. ಅದೇ, ಪು. ೬೯.
೧೪. ಅದೇ, ಪು. ೭೦.
೧೫. ಅದೇ, ಪು. ೭೨.
೧೬. ಅದೇ, ಪು. ೭೪.
೧೭. ಅದೇ, ಪು. ೭೫.
೧೮. ಅದೇ, ಪು. ೭೫.
೧೯. ಡಾ. ಎಂ.ಜಿ.ಆರ್.ಅರಸ್(ಸಂ.), ಚುಟುಕು, ಸಾಹಿತ್ಯ ವಿಮರ್ಶೆ, ಪು. ೩, ವೈದ್ಯವಾರ್ತೆ ಪ್ರಕಾಶನ, ಮೈಸೂರು.
೨೦. ಅದೇ, ಪುಟ. ೫.
೨೧. ಅದೇ, ಪುಟ. ೫.
೨೨. ಡಾ. ಎಂ.ಜಿ.ಆರ್.ಅರಸ್(ಸಂ.), ಚುಟುಕು, ಸಾಹಿತ್ಯ ವಿಮರ್ಶೆ, ಪು. ೬, ವೈದ್ಯವಾರ್ತೆ ಪ್ರಕಾಶನ, ಮೈಸೂರು.
೨೩. ಅದೇ, ಪು. ೭.
೨೪. ಅದೇ, ಪು. ೮.
೨೫. ಅದೇ, ಪು. ೧೨.

೨೬. ಅದೇ, ಪು. ೧೧.

೨೭. ಅದೇ ಪುಟ. ೧೩.

೨೮. ಅದೇ ಪುಟ. ೧೨.

೨೯. ಅದೇ ಪುಟ. ೧೩.

೩೦. ಅದೇ ಪುಟ. ೧೪.

೩೧. ಅದೇ ಪುಟ. ೧೪.

೩೨. ಅದೇ ಪುಟ. ೧೬.

೩೩. ಅದೇ ಪುಟ. ೧೭.

ಅಧ್ಯಾಯ – ೫

ದೇಜಗೌ ಅವರ ಮುಕ್ತಕಗಳು

ಮುಕ್ತಕ ಎಂಬುದು ಒಂದು ಕಾವ್ಯ ಪ್ರಕಾರ. ಇದು ಒಂದು ಪದ್ಯ ಜಾತಿಯ ಹೆಸರೂ ಹೌದು. ಸ್ವತಂತ್ರ್ಯವಾಗಿರುವಂಥದ್ದೂ ಸರಳವಾಗಿರುವಂಥದ್ದೂ ಮುತ್ತಿನಂತೆ ಆಕಾಶದಲ್ಲಿ ಕಿರಿದಾಗಿ ಇದ್ದು ಶೋಭೆಯಲ್ಲಿ ಸ್ವಯಂ ಪ್ರಕಾಶದಿಂದ ಕೂಡಿರುವಂಥದ್ದೂ ಆಗಿದೆ. "ಅನುಭವದ ನೆಲೆಯಲ್ಲಿ ಮೂಡಿಬಂಧಂಥ ಹೃದಯಸ್ಪರ್ಶಿ ರಚನೆಗಳು ಮುಕ್ತಕವೆನಿಸುತ್ತವೆ. ಈ ರಚನೆಗಳಲ್ಲಿ ಅರ್ಥವೈಶಾಲ್ಯ, ಶಬ್ದಚಮತ್ಕಾರ, ಸಾಹಿತ್ಯ ಶೋಭೆ, ಹೃದಯಂಗಮ, ವರ್ಣನ ಸಾಮರ್ಥ್ಯಗಳು ಎದ್ದು ಕಾಣುತ್ತವೆ. ಗಾಂಭೀರ್ಯ, ಔದಾರ್ಯ, ಶೌರ್ಯ, ನೀತಿ ಮುಂತಾದ ಕಲ್ಯಾಣ ಗುಣಗಳು ಮುಕ್ತಕಗಳಲ್ಲಿ ಕಾಣುತ್ತವೆ. ಸಂಸ್ಕೃತದಲ್ಲಂತೂ ಮುಕ್ತಕಗಳು ಹೇರಳವಾಗಿವೆ. ಖ್ಯಾತ ಲಾಕ್ಷಣಿಕರಾದ ದಂಡಿ, ಬಾಮಹ, ವಿಶ್ವನಾಥ, ಆನಂದವರ್ಧನ ಮುಂತಾದವರು ಗುಣಲಕ್ಷಣಗಳನ್ನು ತಿಳಿಸಿದ್ದಾರೆ."[೧] ಪ್ರಾಚೀನ ಕನ್ನಡ ಗ್ರಂಥಗಳಲ್ಲಿ ಮುಕ್ತಕಗಳು ವಿಪುಲವಾಗಿವೆ.

"ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಸುಭಾಷಿತ ಮಂಜರಿ', ಪ್ರೊಫೆಸರ್ ಟಿ.ವಿ ವೆಂಕಟಾಚಲಶಾಸ್ತ್ರೀ ಅವರು ಸಂಪಾದಿಸಿರುವ 'ಕನ್ನಡ ಚೆನ್ನುಡಿ' ಸಂಕಲನ ಗ್ರಂಥಗಳನ್ನು ನೋಡಿದಾಗ ಮಹಾಕಾವ್ಯಗಳ ಗರ್ಭದಲ್ಲಿ ಬಹುಸಂಖ್ಯೆಯ ಚುಟುಕುಗಳು ಹುದುಗಿವೆಯೆಂಬುದೂ ಮಹಾಕವಿಗಳ ಚುಟುಕು ಸಾಹಿತ್ಯಕ್ಕೆ ದೂರದವರಲ್ಲವೆಂಬುದೂ ವ್ಯಕ್ತವಾಗುತ್ತದೆ. ಚುಟುಕುಗಳ ಸಾಲಿಗೆ ಸೇರಿಸಬಹುದಾದ ವಚನ ಪ್ರಕಾರವಂತೂ ಕನ್ನಡದಲ್ಲಿ ಬೃಹದಾಕಾರವಾಗಿ ಬೆಳೆದಿದೆ. ಗುಣಗಾತ್ರಗಳಲ್ಲಿ ಅದಕ್ಕೆ ಹೆಗಲೆಣೆಯಾದ ಸಾಹಿತ್ಯ ಜಗತ್ತಿನ ಯಾವ ಭಾಷೆಯಲ್ಲಿಯೂ ಇಲ್ಲ"[೨].

"ಕನ್ನಡದಲ್ಲಿ ಪ್ರಚಲಿತವಿರುವ ಹನಿಗವನ, ಚೆನ್ನುಡಿ, ನಾಟುನುಡಿ, ಚುಟುಕು ಮುಂತಾದ ರಚನೆಗಳು ಮುಕ್ತಕಗಳ ಹತ್ತಿರ ಹತ್ತಿರ ಬರುವುದಾದರೂ ಮುಕ್ತಕಗಳ ನಿಜ ಸ್ವರೂಪ ಭಿನ್ನವೇ ಆಗಿದೆ. ಅನುಭವದ ಆಳದಿಂದ ಮುಕ್ತಮನೋಭಾವದಿಂದ, ನೀತಿಯುತವಾಗಿ, ಶ್ರದ್ಧೆಯಿಂದ ಹೃದಯಸ್ಪರ್ಶಿಯಾಗುವಂಥ ರಚನೆಗಳೇ ಮುಕ್ತಕಗಳು"[೩] ಮುಕ್ತಕಗಳು ಇಂದು ಬೆಳೆದು ಬಂದ ರೀತಿ ವೈಶಿಷ್ಟ್ಯತೆಯಿಂದ ಕೂಡಿದೆ.

"ಕನ್ನಡದ ಮಟ್ಟಿಗೆ ಹೇಳುವುದಾದರೆ ಸರ್ವಜ್ಞನ ತ್ರಿಪದಿಗಳು ಪುಲಿಗೆರೆ–ಸೋಮನ ಸೋಮೇಶ್ವರ ಶತಕಗಳು ಕೆಲವು ವಚನಕಾರರ ವಚನಗಳು, ದಿನಕರ

[illegible]

[illegible]

[illegible]

[illegible]

[illegible]

ದೇಸಾಯಿಯವರ ಚೌಪದಿಗಳು, ಎಸ್.ವಿ.ಪರಮೇಶ್ವರಭಟ್ಟರ ಇಂದ್ರಚಾಪದ ಪದ್ಯಗಳು ಡಾ. ಸಿ.ಪಿ.ಕೆ.ರವರ 'ಮುಕ್ತಕ ಮುಕುರ' ಮತ್ತು 'ಮುಕ್ತಹಾರ' ಎಸ್.ರಾಮಪ್ರಸಾದ್‌ರವರ 'ಗುಳಿಗೆಗಳು', ಜಿ.ವಿ.ಜಯಪರಮೇಶ್ವರ್‌ರವರ 'ಕಾಶಿಮುಕ್ತಕಗಳು', ಕೆ.ಗಣೇಶ್‌ರಾವ್‌ರವರ 'ಗಣಪಯ್ಯನ ವಚನಗಳು', ಎಚ್.ಎಂ.ನಾಗರಾಜರಾಯರ 'ಶೃಂಗಗಿರಿ ಒಡೆಯ' ಅಂಕಿತದ ರಚನೆಗಳು ಮುಂತಾದವೆಲ್ಲ ಮುಕ್ತಕಗಳು"[೪] ರಸಕ್ಕೆ ಅವಕಾಶ, ಪೂರ್ವಪರ ಎಣಿಕೆ ಇಲ್ಲದಿರುವುದು ಮುಂತಾದವೆಲ್ಲ ಮುಕ್ತಕಗಳ ಲಕ್ಷಣಗಳೆನಿಸುತ್ತವೆ.

ಮುಕ್ತಕ ರಚನೆಗಳಿಗೆ ಸಂಬಂಧಿಸಿದಂತೆ ಇಂತಿಷ್ಟೇ ಪಂಕ್ತಿಗಳು ಇರಬೇಕೆಂದು ನಿರ್ಬಂಧವು ಇಲ್ಲದಿದ್ದರೂ "ಚಿಕ್ಕದು ಚಿನ್ನ" ಎಂಬ ಮಾತಿನಂತೆ ನಾಲ್ಕೊ ಐದೋ ಪಂಕ್ತಿಗಳಲ್ಲಿ ರಚನೆಗಳು ಮೂಡಿಬಂದರೆ ಉತ್ತಮವೆನಿಸುತ್ತವೆ. "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎಂಬಂತೆ ಮುಕ್ತಕಗಳು ಕಿರಿದರೊಳ್ ಪಿರಿದರ್ಥವನ್ನು ತುಂಬಿಕೊಂಡಿರುವಂತಾದರೆ ಅದು ಮನಸ್ಸಿಗೆ ನೆಮ್ಮದಿಯನ್ನು ಓದುಗರಿಗೂ ಕೇಳುಗರಿಗೂ ಆನಂದವನ್ನು ತರುತ್ತದೆ. ಹೃದಯದ ಅಂತರಾಳದಲ್ಲಿ ಆಗೊಮ್ಮೆ ಈಗೊಮ್ಮೆ ಮೂಡಿಬರುವ ಭಾವದ ಹೊನಲು ಮನೋಜ್ಞವಾಗಿ ಅಭಿವ್ಯಕ್ತವಾದಲ್ಲಿ ಅದು ಮುಕ್ತಕವೆನಿಸುವದರಲ್ಲಿ ಸಂಶಯವಿಲ್ಲ"[೫] ರಚನೆಗಳಲ್ಲಿ ಆದಿಪ್ರಾಸ, ಅಂತ್ಯಪ್ರಾಸ ಅಂಕಿತಗಳು ಸಹಜವಾಗಿ ಮೂಡಿ ಬಂದಿದ್ದರೆ ಮುಕ್ತಕಗಳು ತಮ್ಮ ಸಹಜ ದೀಪ್ತಿಯನ್ನು ಪ್ರದರ್ಶಿಸಬಲ್ಲವು.

ದೇಜಗೌರವರ ಮುಕ್ತಕಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ವಚನಕಾರರ ನೆನಪು ತಟ್ಟನೆ ಹೊಳೆಯುತ್ತದೆ. ವಚನಕಾರರು ತಮ್ಮದೇ ಆದ ರೀತಿಯಲ್ಲಿ ವಚನಗಳನ್ನು ಬರೆಯುತ್ತ ತಮ್ಮ ಇಷ್ಟ ದೇವರ ಅಂಕಿತವನ್ನು ಅಲ್ಲಿ ಇಟ್ಟಿರುವುದನ್ನು ನಾವು ನೋಡಬಹುದು.

ಬಸವಣ್ಣ ಕೂಡಲ ಸಂಗಮದೇವ ಎಂತಲೂ, ಅಲ್ಲಮಪ್ರಭು ಗುಹೇಶ್ವರ ಎಂತಲೂ, ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನ ಎಂತಲೂ, ಸಿದ್ಧರಾಮ ಗುಹೇಶ್ವರ ಎಂತಲೂ ತಮ್ಮ ವಚನಗಳಲ್ಲಿ ಅಂಕಿತಗಳನ್ನು ಬಳಸಿದ್ದಾರೆ. ಹಾಗೆಯೇ ದೇಜಗೌರವರು ತಮ್ಮ ಮುಕ್ತಕಗಳಲ್ಲಿ ಮಗಳೆ ಎಂಬ ಸಂಬೋಧನೆ ಅಥವಾ ಅಂಕಿತವನ್ನು ಬಳಸಿರುವುದನ್ನು ಅವರ ಮುಕ್ತಕಗಳಲ್ಲಿ ನೋಡಬಹುದಾಗಿದೆ.

ದೇಜಗೌರವರ ಎಲ್ಲಾ ಮುಕ್ತಕಗಳಲ್ಲಿ ಸಾಮಾನ್ಯವಾಗಿ ನಾಲ್ಕು (ಪಂಕ್ತಿ) ಸಾಲುಗಳನ್ನು ನೋಡುತ್ತೇವೆ.

ಶ್ರೀ ಕುವೆಂಪು

"ಏಸು ಮಹಮದ ಬುದ್ಧ ಬಸವೇಶ ಚೈತನ್ಯ
ಮಾಸದಿಹ ಹೆಸರಾಂತ ರಾಮಕೃಷ್ಣ ಗುರು ಯತಿ
ಭಾಸುರರ ಕಾಂಬೆನಲ್ತೆ ಕುವೆಂಪು ಗುರುವಿನಲಿ
ಏಸು ಧನ್ಯನೊ ನಾನು ಮರೆಯೆ ಮಗಳೆ"[೬]

ದೇಜಗೌರವರು ಕುವೆಂಪುರವರನ್ನು ಗುರುವಿನ ಮೇರು ಪರ್ವತದಲ್ಲಿ ಇಟ್ಟು ಪೂಜಿಸಿದ್ದಾರೆ. ಅವರ ದೃಷ್ಟಿಯಲ್ಲಿ ಏಸುಕ್ರಿಸ್ತ, ಮಹಮದ್‌ಪೈಗಂಬರ್, ಬುದ್ಧ, ಚೈತನ್ಯ, ಶ್ರೀರಾಮಕೃಷ್ಣ ಇವರ ಹೊಸರೂಪಗಳನ್ನೆಲ್ಲ ಕುವೆಂಪುನಲ್ಲಿ ಕಾಣುತ್ತಿದ್ದಾರೆ.

ಕುವೆಂಪುರವರು ಮನುಜಮತ ಮತ್ತು ವಿಶ್ವಪಥವನ್ನು ಸರ್ವೋದಯ ಮಂತ್ರವನ್ನು ಜಪಿಸಿದವರು, ವಿಶ್ವಮಾನವ ತತ್ವವನ್ನು ಕನ್ನಡ ಸಾಹಿತ್ಯದಲ್ಲಿ ಜಾರಿಗೆ ತಂದವರು.

ಆ ಮತ ಈ ಮತ ಯಾವುದು ಬೇಡ 'ಮನಜಮತ' ಒಂದೇ ರಾಷ್ಟ್ರಮತ ಎಂದು ಹೇಳುತ್ತಾರೆ. ಮಂತ್ರಮಾಂಗಲ್ಯದ ಮೂಲಕ ಸರಳ ಮದುವೆಯನ್ನ ಆಚರಣೆಗೆ ತಂದು ಕೊಡುತ್ತಾರೆ.

ಪ್ರೀತಿ

ಈ ಮುಕ್ತಕದಲ್ಲಿ ಪ್ರೇಮ ಮತ್ತು ಒಲವನ್ನು ಕುರಿತು ಚರ್ಚಿಸಿರುವುದನ್ನು ನೋಡಬಹುದು. ಪ್ರೇಮ ಒಂದು ತವನಿಧಿ ಇದ್ದ ಹಾಗೆ. ಇದರಿಂದ ಸುಜ್ಞಾನ ಲಭಿಸುತ್ತದೆ ಮತ್ತು ಶಾಂತಿ ದೊರೆಯುತ್ತದೆ. ಹಾಗೆಯೇ ಒಲವಿನಿಂದ ಸಂಬಂಧ, ಗೆಳೆತನ, ಸಂಸಾರ, ಸರ್ವಸುಖ ಎಲ್ಲವು ದೊರೆಯುತ್ತದೆ.

"ಒಲವೊಂದೆ ನೆಂಟತನ ಗೆಳೆತನಗಳಿಗಡರ್ಪು
ಒಲವಿಂದೆ ಸಂಸಾರ ಸರ್ವಸುಖ ಸಾಮ್ರಾಜ್ಯ
ಒಲವೊಂದೆ ಪುರುಷಾರ್ಥ ಜಗಶಾಂತಿಗಾಧಾರ
ಒಲವೊಂದೆ ಋತನಿಯಮ ಕೇಳು ಕುವರಿ"[೭]

ಮನಸ್ಸು

ಮನುಷ್ಯನಿಗೆ ಮನಸ್ಸು ಬಹಳ ಮುಖ್ಯವಾಗಿರುವಂಥದ್ದು. ಮನಸ್ಸನ್ನು ಶಾಂತಿಯಿಂದ ಸ್ವಚ್ಛತೆಯಿಂದ ಇಟ್ಟುಕೊಂಡಾಗ ಯಾವ ರೋಗವು ಬರುವುದಿಲ್ಲ.

ಎಲ್ಲಾ ಇದ್ದು ಮನಸ್ಸೇ ಸರಿಯಿಲ್ಲದಿದ್ದರೆ ಏನು ಪ್ರಯೋಜನವಾದೀತು ಎಂದು ಈ ಮುಕ್ತಕದಲ್ಲಿ ತಿಳಿಸಿದ್ದಾರೆ.

"ಭೂತ ಮನದೊಳಗಿಹುದು ಹೊರಗಿಲ್ಲ ನಿಶ್ಚಯಂ
ಪಾತಾಳ ಸಗ್ಗಗಳ ಸೃಷ್ಟಿಪುದು ಚಣಚಣರು
ಭೀತಿರತಿ ಖ್ಯಾತಿಫಲಗಳಿಗೆಲ್ಲವದೆ ಮೂಲ
ಮಾತೇಕೆ ಮನವನನುಗೊಳಿಸು ಮಗಳೆ"[೮] ಎಂದಿದ್ದಾರೆ.

ಅಂದರೆ ಮನಸ್ಸನು ಭೂತದ ಕೈಯಲ್ಲಿ ಕೊಡಬಾರದು ಹಾಗೆ ಕೊಟ್ಟೆಯಾದಲ್ಲಿ ಈ ಮನಸ್ಸೆಂಬುವುದು ಸ್ವರ್ಗನರಕಗಳ ಸೃಷ್ಟಿಗೆ ಕಾರಣವಾಗದೆ ಭೀತಿಯನ್ನುಂಟು ಮಾಡುತ್ತದೆ. ಆದ್ದರಿಂದ ಮನಸ್ಸನ್ನು ಶಾಂತತೆಯಿಂದ ಇರುವಂತೆ ನಾವು ಪ್ರಯತ್ನಿಸಬೇಕು. ಮನಸ್ಸು ಸರಿಯಿಲ್ಲದಿದ್ದರೆ ಗಲಾಟೆ, ಚಿಂತೆ, ಅಶಾಂತಿ ಇವುಗಳಿಗೆ ಕಾರಣವಾಗುತ್ತದೆ. ಮನಸ್ಸು ಎಲ್ಲದಕ್ಕೂ 'ತವರು ತೇರಿನ ತಾಯಿಯಂತೆ' ಇರಬೇಕು ಎಂದು ತಿಳಿಸಿದ್ದಾರೆ.

ನಿಸರ್ಗ

ನಿಸರ್ಗವು ಮನುಷ್ಯನಿಗೆ ಏನೆಲ್ಲವನ್ನು ಕೊಟ್ಟಿದೆ ಆದ್ದರಿಂದ ಅದನ್ನ ನಾವು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಹೋಗಬೇಕು. ಮಣ್ಣನ್ನು ಯದ್ವಾತದ್ವಾ ಬಳಸುವುದು, ನೀರಿನ್ನು ಸರಿಯಾದ ರೀತಿಯಲ್ಲಿ ಬಳಸದೆ ಇರುವುದು ಈ ರೀತಿ ಮಾಡಿದರೆ ಮನುಷ್ಯನಿಗೆ ಕಷ್ಟ ಕೋಟಲೆಗಳು ಎಂದಿಗೂ ತಪ್ಪುವುದಿಲ್ಲ ಎಂದು ಅವರು ಹೇಳುತ್ತಾರೆ.

"ತನ್ನ ತಾನರಿತಿಲ್ಲ ತನ್ನ ನೆಲೆ ಗೊತ್ತಿಲ್ಲ
ತನ್ನ ತಾಗೆದಿಲ್ಲ ಆದರಂ ಮಾನವಗೆ
ಮುನ್ನಮಾ ನಿಸರ್ಗದ ನಿಯಂತ್ರಣದಧಿಕಾರ
ವನ್ನೆಯಂ ದೊರಕಿಹುದು ಸರಿಯೇ ಮಗಳೆ"[೯]

ಅಂದರೆ ಮನುಷ್ಯ ತಾನು ಹುಟ್ಟಿದ ಬಗೆಯಾಗಲಿ ತನ್ನ ಅರಿವಿನ ಬಗೆಯಾಗಲಿ ಇನ್ನು ಸರಿಯಾಗಿ ಗೊತ್ತಿಲ್ಲದಿರುವಾಗ ಅರ್ಥಾತ್ ಮನುಷ್ಯ ತನ್ನನ್ನೇ ತಾನು ಅರ್ಥಮಾಡಿಕೊಳ್ಳದಿರುವಾಗ ನಿಸರ್ಗವನ್ನು ನಿಯಂತ್ರಿಸುವ ಹಕ್ಕನ್ನು ಅವನಿಗೆ ಕೊಟ್ಟವರ್ಯಾರು ಎಂದು ಪ್ರಶ್ನಿಸುತ್ತಾರೆ.

ಒಟ್ಟಿನಲ್ಲಿ ಈ ಮುಕ್ತಕದಲ್ಲಿ ನಿಸರ್ಗ ಮತ್ತು ಮಾನವರ ಸಂಬಂಧಗಳ ಬಗ್ಗೆ ತಿಳಿಸಿಕೊಡುತ್ತಾರೆ.

ಪುಣ್ಯ

ಪುಣ್ಯವೆನ್ನುವುದು ನಾವು ಮಾಡುವ ಕೆಲಸದ ಮೇಲೆ ನಿಂತುಕೊಂಡರೆ ನಾವು ಒಳ್ಳೆಯ ಕೆಲಸವನ್ನು ಮಾಡಿದರೆ ಅದಕ್ಕೆ ತಕ್ಕ ಪ್ರತಿಫಲ ಪಡೆಯುತ್ತೇವೆ. ಕೆಟ್ಟದ್ದನ್ನು ಮಾಡಿದರೆ ಕೆಡಕು ಬರುವುದನ್ನು ನೋಡಬಹುದು. ನಮಗೆ ಹಣ್ಣು ಬೇಕಾದರೆ ತೋಟಮಾಡಿ ಗಿಡಗಳನ್ನು ಹಾಕಿ ಬೆಳೆಯಬಹುದು. ಆದರೆ ಪುಣ್ಯ ಲಭಿಸುವುದು ಅದರಿಂದ ಸಾಧ್ಯವಿಲ್ಲ. ಅದಕ್ಕೆ ನೂರಾರು ವ್ರತಗಳನ್ನು ಮಾಡಬೇಕು. ಜೊತೆಗೆ ಬಡವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯೆಯನ್ನು ಕೊಡುವುದರಿಂದ ಪುಣ್ಯ ಲಭಿಸುವುದು.

“ಹಣ್ಣು ತೋಟಗಳ ಬೆಳಸಲದು ಪುಣ್ಯಕಾರ್ಯಂ
ತಣ್ಣನೆಯ ಕೊಳಗಳನು ನೂರಾರು ಸತ್ರಗಳ
ಪಣ್ಣಲರನಹುದು ಬಡ ಮಕ್ಕಳಿಗೆ ಸದ್ವಿದ್ಯೆ
ಯಣ್ಣಿಸರಲಧಿಕತಮ ಸೈಪುಮಗಳೆ”[೧೦]

ಹಾರುವರು

“ಹಾರುವರು ದುರ್ಜನರೆ ಬೇರೆಯವರೊಳ್ಳಿದರೆ
ಪೂರ ನಿಜವಲ್ಲವಿ ಹಳೆ ಮಾತು ಹಳೆಯ ಕತೆ
ಒಕ್ಕಲಿತಿಯೀನ ಹಾಲ್ಮೊಸರಿನಿತಿಲ್ಲ ಹೊಲೆ
ರಕ್ಕಸರ ಬಾಳ ಗುರಿ ಕೇಳು ಮಗಳೆ”[೧೧]

ಹಾರುವರು ಕೆಟ್ಟವರೆಂದು ಬೇರೆಯವ್ರು ಒಳ್ಳೆಯವರೆಂದು ನಾವು ತಿಳಿಯಬಾರದು. ಹಾಗೆಯೇ ರೈತ ವರ್ಗದವರು ಹಾಲುಮೊಸರನ್ನು ಎಲ್ಲರಿಗೂ ಕೊಡುವವರಾದರೂ ಅವರಲ್ಲಿ ಜಾತಿ ಭೇದವಿರುವುದಿಲ್ಲ. ಹಾಗಾಗಿ ನಾವು ಈ ಜಾತಿ ಭೇದವನ್ನು ಮಾಡಬಾರದು. ಈ ಜಾತಿ ಭೇದವನ್ನು ಮಾಡಿರುವವರು ರಾಕ್ಷಸರು ಎಂದು ಕವಿ ಭಾವಿಸಿದ್ದಾರೆ.

ಒಟ್ಟಿನಲ್ಲಿ ಇದುವರೆಗಿನ ಮುಕ್ತಕಗಳ ಅಧ್ಯಯನದಿಂದ ದೇಜಗೌ ನಮಗೆ ಕನ್ನಡ ಮುಕ್ತಕ ಸಾಹಿತ್ಯದ ಸರ್ವಾಂಗೀಣ ಮತ್ತು ಉತ್ಕರ್ಷಗಳಿಗೆ ಕಾರಣರಾಗಿದ್ದಾರೆ.

ಅಡಿಟಿಪ್ಪಣಿಗಳು

೧. ಎಸ್.ರಾಮಪ್ರಸಾದ್(ಸಂ) ಮುಕ್ತಕ ದಿಂಡಿಮ, ಪು. ೫, ಕರ್ನಾಟಕ ಮುಕ್ತ ಸಾಹಿತ್ಯ ಅಕಾಡೆಮಿ ಟ್ರಸ್ಟ್(ರಿ) ಮೈಸೂರು-೪, ಮೊದಲ ಮುದ್ರಣ, ೨೦೦೬.

೨. ದೇಜಗೌ ಚುಟುಕಗಳು, ಪು. ೧೦, ವೈದ್ಯವಾರ್ತೆ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು, ೧೯೯೯.

೩. ಅದೇ, ಪು. ೧೦.

೪. ಅದೇ, ಪು. ೧೨.

೫. ಎಸ್.ರಾಮಪ್ರಸಾದ್(ಸಂ), ಪುಟ. ೬, ಮುಕ್ತಕ ದಿಂಡಿಮ, ಕರ್ನಾಟಕ ಮುಕ್ತ ಸಾಹಿತ್ಯ ಅಕಾಡೆಮಿ ಟ್ರಸ್ಟ್(ರಿ) ಮೈಸೂರು-೪, ಮೊದಲ ಮುದ್ರಣ, ೨೦೦೬.

೬. ದೇಜಗೌ ಚುಟುಕಗಳು, ಮುಕ್ತಕಗಳು/ಚೌಪದಿಗಳು, ಪುಟ. ೨೧, ವೈದ್ಯವಾರ್ತೆ ಪ್ರಕಾಶನ, ವಿದ್ಯಾರಣ್ಯ ಪುರಂ, ಮೈಸೂರು-೪, ೧೯೯೯.

೭. ಅದೇ, ಪು. ೩೩.

೮. ಅದೇ, ಪು. ೩೫.

೯. ಅದೇ, ಪು. ೪೫.

೧೦. ಅದೇ, ಪು. ೫೪.

೧೧. ಅದೇ, ಪು. ೫೫.

ಅಧ್ಯಾಯ – ೬

ದೇಜಗೌ ಅವರ ಭಾವಗೀತೆಗಳು

ಭಾವಗೀತೆಯ ಅರ್ಥವನ್ನು ಸರಳವಾಗಿ ಗ್ರಹಿಸಬಹುದಾದರೆ ವ್ಯಕ್ತಿಯ ಭಾವಗಳಿಗೆ ಅಭಿವ್ಯಕ್ತಿ ಕೊಡುವ ಬಂಧವನ್ನೇ ಭಾವಗೀತೆ ಎಂದು ಕರೆಯುತ್ತಾರೆ. ಇದರಲ್ಲಿ ಹತ್ತಾರು ಒಳ ಪ್ರಭೇದಗಳಿವೆ. (ಪ್ರಗಾಥ ಅಷ್ಟಷಟ್ಪದಿ ಶೋಕಗೀತೆಗಳು...... ಇತ್ಯಾದಿ)

ಇಂಗ್ಲಿಷ್‌ನಲ್ಲಿ ಷೇಕ್ಸ್‌ಪಿಯರ್‌ನನ್ನು ಮುಖ್ಯವಾಗಿರಿಸಿಕೊಂಡಂತೆ ಬರ್ನ್ಸ್, ವರ್ಡ್ಸ್‌ವರ್ತ್, ಷೆಲ್ಲಿ, ಬ್ಲೇಕ್, ಬೈರನ್ ಮೊದಲಾದ ಕವಿಗಳು ಈ ಪ್ರಕಾರದಲ್ಲಿ ಶ್ರೇಷ್ಠವಾದ ಕೃಷಿ ಮಾಡಿದ್ದಾರೆ.

"ಕುರಿತ ಗಂಭೀರ ಹೇಳಹುಗಳನ್ನು ಕನ್ನಡದ ಸಂದರ್ಭದಲ್ಲಿ ಬಿ.ಎಂ.ಶ್ರೀಯವರು 'ಇಂಗ್ಲಿಷ್ ಗೀತೆಗಳು' ಸಂಕಲನದಲ್ಲಿಯೇ ನೀಡಿದ್ದಾರೆ. ಶ್ರೀ ಸಾಮಾನ್ಯನ ಎಲ್ಲ ಬಗೆಯ ಭಾವಗಳು, ಆ ಹಿನ್ನೆಲೆಯ ಕನಸು–ಕಲ್ಪನೆಗಳು, ಆಸೆ–ಆಕಾಂಕ್ಷೆಗಳು, ನೋವು–ನಿರಾಸೆಗಳು ಎಲ್ಲಾ ಭಾವವನ್ನು ಆಧರಿಸಿದಂತೆ ಕವಿತೆಗಳು ಸೃಷ್ಟಿಗೊಳ್ಳುವಾಗ ಅವು ಹಾಡುಗಳೂ ಆಗಬಹುದಾದ ಬಗೆಯ ಪ್ರಯೋಗಶೀಲತೆಯು ಇಲ್ಲಿಯೇ ಸಾಧ್ಯವಾಯಿತು. ಭಾವಗಳು ಗೀತೆಗಳಾದವು"[1] ಹಾಡುಗಾರಿಕೆಗಿರುವ ಮಹತ್ವವನ್ನು ಎಂದಿಗೂ ಅಲ್ಲಗಳೆಯಬಹುದಾದುದಲ್ಲ ಎನ್ನುವಂತೆ ಸಹಜವಾಗಿಯೇ ಭಾವಗೀತೆ ಯಶಸ್ವಿ ಪ್ರಯೋಗವಾಗಿತ್ತು. ಭಾವಗೀತೆ ಕನ್ನಡದ ಹೆದ್ದಾರಿಯಾಗಿ ರೂಪುಗೊಂಡಿತು.

ಭಾವವೆಂದರೆ ಇರುವಿಕೆ ಎನ್ನುವುದು ಸಾಮಾನ್ಯ ಅರ್ಥ. ಇದಕ್ಕೆ ಉಳಿದಂತೆ ಇನ್ನೂ ಹತ್ತು ಹಲವು ಅರ್ಥಗಳನ್ನು ಹೇಳಲಾಗಿದೆ. ಆದರೆ ಮನುಷ್ಯನ ಅನಿಸಿಕೆಗಳ ಮೂಲ ಅರ್ಥದಲ್ಲಿ ಪ್ರಕಟಗೊಳ್ಳುವುದನ್ನು ಭಾವ ಎನ್ನಬಹುದು. ಅಂತಹ ಭಾವಗಳು ಗೇಯತೆಯ ಲಯದ ಹಿನ್ನೆಲೆಯಲ್ಲಿ ಹಾಡುಗಳ ರೂಪದಲ್ಲಿ ವ್ಯಕ್ತವಾಗುವುದೇ ಭಾವಗೀತೆ.

ಒಂದು ಪ್ರಧಾನ ಭಾವವನ್ನು ಅದಕ್ಕೆ ಪೂರಕವಾದ ಭಾವಗಳನ್ನು ಇಲ್ಲಿ ಕಾಣಬಹುದು. ಅಂದರೆ ಭಾವಗಳ ಕಾರಣದಿಂದಲೇ ಕಾವ್ಯ ಸೃಷ್ಟಿಯಾಗಿರುವುದನ್ನೆಲ್ಲಾ ವಿಶಾಲ ಅರ್ಥದಲ್ಲಿ ಭಾವಗೀತೆಯೆಂದೇ ಗ್ರಹಿಸುವುದು ಸಾಧ್ಯವಾದರೂ ಆಧುನಿಕ ಸಾಹಿತ್ಯದ ಭಾವಗೀತೆಯ ಅರ್ಥವನ್ನು ಪಾಶ್ಚಾತ್ಯ ಪ್ರಭಾವದ ಹಿನ್ನೆಲೆಯಲ್ಲಿ

ನವೋದಯವು ಅರ್ಥೈಸಿಕೊಂಡ ರೀತಿಯ ಚರ್ಚೆ ಇಲ್ಲಿ ಮುಖ್ಯ. ಭಾವಗೀತೆಗೆ ಇರುವ ಎರಡು ಪ್ರಧಾನಗುಣಗಳೆಂದರೆ

೧) ಭಾವ ಪ್ರಧಾನತೆ

೨) ಗೀತಾತ್ಮಕತೆ

ಪಾಶ್ಚಾತ್ಯದಲ್ಲಿ ಲಿರಿಕ್(Lyric) ಎನ್ನುವ ಪದ್ಯ ಪ್ರಕಾರಕ್ಕೆ ಕನ್ನಡದ ಸಂದರ್ಭದಲ್ಲಿ ಭಾವಗೀತೆ ಎನ್ನುವ ಪದವನ್ನು ಬಳಸಲಾಗಿದೆ.

ಇಂಗ್ಲಿಷಿನ ಲಿರಿಕ್‌ಗೆ ಮೂಲ ಗ್ರೀಕ್‌ನಿಂದ ಲಭ್ಯವಾಗಿದೆ. ಲೈರಿಕೋಸ್ ಎನ್ನುವುದು ಗ್ರೀಕ್‌ಪದ. ಲೈರ್ ಎಂದರೆ ತಂತೀವಾದ್ಯ ಎನ್ನುವ ಅರ್ಥವಿದೆ. ತಂತೀವಾದ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಹಾಡುತ್ತಿದ್ದ ಕಾರಣದಿಂದಲೂ ಲೈರಿಕೋಸ್ ಅರ್ಥ ಉಂಟಾಗಿರಬಹುದೆಂಬ ಊಹೆಯಿದೆ. ಲೈರ್ ಎನ್ನುವುದು ಏಳು ತಂತಿಗಳ ವಾದ್ಯ ಎನ್ನಲಾಗಿದೆ.

"ಗ್ರೀಕ್ ಹಿನ್ನೆಲೆಯೊಂದಿಗೆ ಪ್ರಾಚೀನತೆಯ ವಿಸ್ತಾರ ಹೆಚ್ಚಾದರೂ ಖಚಿತವಾಗಿ ಇಂತಹುದೇ ಕಾಲದಲ್ಲಿ ಭಾವಗೀತೆಯ ಸೃಷ್ಟಿಯಾಯಿತೆಂದು ಹೇಳುವುದು ಸುಲಭ-ಸಾಧ್ಯವಾಗಿಲ್ಲ. ೧೫ ಮತ್ತು ೧೬ನೇ ಶತಮಾನದ ಹೊತ್ತಿಗೆ ಇಂಗ್ಲಿಷ್‌ನಲ್ಲಿಯೂ ಭಾವಗೀತೆಯು ಮಹತ್ವದ ಪ್ರಕಾರವಾಗಿ ರೂಪುಗೊಂಡಿದೆ."[೨] ಷೇಕ್ಸ್‌ಪಿಯರ್ ಸಾನೆಟ್‌ಗಳ ಸೃಷ್ಟಿಯಲ್ಲಿ ದಾಖಲಿಸಿಕೊಂಡ ಯಶಸ್ಸುಗಳನ್ನು ನಾವಿಲ್ಲಿ ಪೂರಕವಾಗಿ ಸ್ಮರಿಸಬಹುದಾಗಿದೆ.

"ಮುಂದೆ ವರ್ಡ್ಸ್‌ವರ್ತ್, ಕೋಲರಿಜ್, ಷೆಲ್ಲಿ, ಕಿಟ್ಸ್ ಮೊದಲಾದ ಕವಿಗಳು ಸಾಧಿಸಿದ್ದು ಅಪಾರವಾಗಿತ್ತು. ಸುದೀರ್ಘ ಈ ತೆರನಾದ ಯಶಸ್ಸೇ ಭಾವಗೀತೆಯ ಪ್ರಯೋಗಶೀಲತೆಯನ್ನು ನಿತ್ಯನೂತನತೆಯನ್ನು ಹೇಳುವಂತಹುದು. ಇದು ಭಾರತೀಯ ಕವಿಗಳನ್ನು ಆಕರ್ಷಿಸಿದುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಕವಿ ರವೀಂದ್ರನಾಥ್ ಟಾಗೂರರೂ ಈ ಪ್ರಕಾರದಿಂದ ಪ್ರಭಾವಿತರಾಗಿದ್ದವರಲ್ಲಿ ಮುಖ್ಯರು ಎಂಬುದನ್ನು ನಾವು ತಿಳಿಯಬಹುದಾಗಿದೆ.[೩]

ಲಿರಿಕ್‌ನ ಮುಖ್ಯವಾದ ಲಕ್ಷಣವೆಂದರೆ ಕವಿ ತನಗೆ ಅನ್ನಿಸಿದ ಅನುಭವವನ್ನು ನೇರವಾಗಿ ಹೇಳುವುದು. ಜೊತೆಗೆ ಹೆಸರೇ ಸೂಚಿಸುವಂತೆ ಹಾಡಿನ ಗುಣವೂ ಅದರ ಒಳಗೇ ಹಾಸು ಹೊಕ್ಕಾದಂತಿರುತ್ತದೆ. ಅಂದರೆ ಕಾವ್ಯವು ಮನಸ್ಸಿನ ಒಳಗೆ

ಹಾಡಾಗುವುದು. ಇದರ ಅರ್ಥ ಭಾವಗೀತೆ ಭಾವ ಪ್ರಧಾನವಾಗುವುದರಿಂದ ಇದರೊಳಗೆ ಭಾವುಕತೆಯು ತೀವ್ರವಾಗಿರುವ ಸಾಧ್ಯತೆಯು ಇರುತ್ತದೆ.

"ಕವಿಯ ತೀರ ವೈಯಕ್ತಿಕವಾದ ಅನುಭವಕ್ಕೆ ಮಾಧ್ಯಮವಾಗುವ ಈ ಕಾವ್ಯದಲ್ಲಿ ವಸ್ತುವಿಗಿಂತ ವಸ್ತುವಿನಿಂದ ಉಂಟಾಗಬಹುದಾದ ಭಾವವೇ ಪ್ರಧಾನವಾಗುತ್ತದೆ. ಸನ್ನಿವೇಶ ಅಥವಾ ಘಟನೆಗಳಿಗೆ ಪ್ರಾಮುಖ್ಯ ಬರುವುದು ಭಾವದಿಂದ ಮಾತ್ರ. ಆದ್ದರಿಂದಲೇ ಅನುಭವ ಮತ್ತು ಅದಕ್ಕೆ ಪೂರಕವಾಗುವ ಸಂವೇದನೆಗಳಿಗೆ ಮಾತ್ರವೇ ಇಲ್ಲಿ ಹೆಚ್ಚಿನ ಪ್ರಾಧಾನ್ಯತೆ ಇರುತ್ತದೆ ಎಂಬುದನ್ನು ನಾವು ತಿಳಿಯಬಹುದಾಗಿದೆ."[೪]

ಒಟ್ಟಾರೆಯಾಗಿ ಭಾವಗೀತೆ ಸಂಕ್ಷಿಪ್ತತೆಯನ್ನು ಆರೋಪಿಸಿಕೊಳ್ಳುವ ಹಿನ್ನೆಲೆಯಲ್ಲಿ ಆತ್ಮ ತೃಪ್ತಿಯನ್ನು ಪ್ರಚೋದಿಸುವಂಥದೂ ಆಗಿರುವುದೆಂಬುದನ್ನು ಬಹುಪಾಲು ಎಲ್ಲಾ ಕವಿಗಳೂ ಒಪ್ಪಿದ್ದಾರೆ.

ಆಧುನಿಕ ಕನ್ನಡ ಕಾವ್ಯದಲ್ಲಿಯೂ ಕವಿಗಳು ಹೊಸ ಛಂದೋರೂಪಗಳನ್ನು ರೂಢಿಸಿಕೊಂಡರು; ಹೊಸ ಪ್ರಯೋಗಗಳಿಗೆ ಮುಂದಾದರು. ಈ ಎಲ್ಲಾ ಪ್ರಯತ್ನಗಳಲ್ಲಿ ಭಾಷೆಯ ಪ್ರಯೋಗವೇ ಪ್ರಧಾನವಾಗಿತ್ತು. ಭಾಷೆಯನ್ನು ಭಾವಕ್ಕೆ ಪೂರಕವಾಗಿ ಬಳಸುವ ಅನಿವಾರ್ಯತೆಯೂ ಇಲ್ಲಿಯೇ ಸೃಷ್ಟಿಯಾಯಿತು, ಅಲ್ಲಲ್ಲಿ ಪ್ರಾಸದ ಪ್ರಭಾವವೂ ದಟ್ಟವಾಗಿಯೇ ಇತ್ತು. ತೀರ ಗ್ರಾಮ್ಯ ಭಾಷೆಯನ್ನು ಕಾವ್ಯದಲ್ಲಿ ಬಳಸಬಹುದಾದ ಸಾಧ್ಯತೆ ಅಲ್ಲಲ್ಲಿ ಕಾಣಿಸಿಕೊಂಡಿತು ಎಂಬುದನ್ನು ನಾವು ನೋಡಬಹುದಾಗಿದೆ.

ಒಂದು ವಸ್ತು ಅಥವಾ ಒಂದು ವಸ್ತುವಿನ ಭಾವವನ್ನು ಕವಿ ಕಾಣುವ ಕಂಡು ಗ್ರಹಿಸುವ, ಗ್ರಹಿಸಿದ್ದನ್ನು ಅನುಭವಿಸುವ, ಅನುಭವಿಸಿದ್ದನ್ನು ಅಭಿವ್ಯಕ್ತಿಸುವ ಮೂಲಕ ಆನಂದದ ರಸವನ್ನು ಹೊಂದುವುದು ಭಾವಗೀತೆಯ ಅರ್ಥ ಮತ್ತು ಗುರಿಗಳೆರಡೂ ಆಗಿದ್ದವು ಎಂಬುದನ್ನು ತಿಳಿಯಬಹುದಾಗಿದೆ.

ವ್ಯಾಪ್ತಿಯ ನೆಲೆಯಿಂದ ಪುಟ್ಟ ಸ್ವರೂಪವಾದರೂ ಸಂಗತಿಗೆ ಪೂರಕವಾದ ಭಾವಗಳು ಒಂದಕ್ಕೊಂದು ಹೆಣಿಗೆಯಾಗಿ ಏಕತಾನತೆಯಿಂದ ದೂರಾದಂತೆ ರಚನೆಗೊಂಡ ಕವನಗಳು ಭಾವಗೀತೆಯ ಸಾರ್ಥಕತೆಯ ನಿದರ್ಶನಗಳೂ ಆಗಿದ್ದವು.

"ಗೀತೆ ಎನ್ನುವ ಉತ್ತರಾರ್ಧದ ಉಲ್ಲೇಖದಂತೆ 'ಗೇಯತೆ'ಯನ್ನು ಆಧರಿಸಿದ ಗೀತಾತ್ಮಕತೆ ಭಾವಗೀತೆಯ ಮುಖ್ಯ ಲಕ್ಷಣವಾಗಿತ್ತು. ಇದೊಂದು ಹಾಡುವ ಧಾಟಿಗೆ ಸಂಬಂಧಿಸಿದ ಅಂಶ ಮತ್ತು ಅದು ಗೀತೆಯ ಚೌಕಟ್ಟು ಹೌದು, ಚಿಕ್ಕದಾಗಿದ್ದಲ್ಲಿ

ಅದಕ್ಕೊಂದು ವಿಶಿಷ್ಟವಾದ ಸೌಂದರ್ಯವೂ ಲಭ್ಯವಾಗುತ್ತಿತ್ತು ಮತ್ತು ಅದು ಕವಿಯ ನಿರೂಪಣ-ನಿಯಂತ್ರಣ ಸಾಮರ್ಥ್ಯಕ್ಕೆ ಸಂಬಂಧಿಸಿರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ."[೫]

ಈ ಭಾವಗೀತೆ ಪಾಶ್ಚಾತ್ಯರ ಪ್ರಭಾವದಿಂದಲೇ ಹಲವು ಒಳ ಪ್ರಕರಣಗಳನ್ನು ಸೃಷ್ಟಿಸಿದುಂಟು. ಪ್ರಗಾಥ, ಸಾನೆಟ್, ಶೋಕಗೀತೆ, ಲಾವಣಿ ಇತ್ಯಾದಿಗಳು. ಆದರೆ ಕನ್ನಡ ಸಂದರ್ಭದಲ್ಲಿ ಈ ತೆರನಾದ ಒಳಪ್ರಕಾರಗಳು ತೀರಗಂಭೀರವೆನ್ನುವ ಮಟ್ಟಿಗೆ ಚರ್ಚೆಯನ್ನುಂಟು ಮಾಡಲಿಲ್ಲವೆನ್ನುವುದು ಮುಖ್ಯ. ಬಹುಶಃ ಕನ್ನಡ ನಿರೀಕ್ಷೆಯ ತುರ್ತುಗಳನ್ನೆಲ್ಲಾ ಭಾವಗೀತೆ (ಕವಿತೆ)ಗಳೇ ಪೂರೈಸಿದವು ಎಂದರೆ ಅದು ಉತ್ಪ್ರೇಕ್ಷೆಯಾಗಲಿಕ್ಕಿಲ್ಲ.

ದೇಜಗೌ ನಾಡು ನುಡಿಯ ಬಗೆಗಂತೂ ಈ ಕವಿ ಕುವೆಂಪು ಅವರ ಶಿಷ್ಯರೆ ಆಗಿದ್ದಾರೆ. ಆ ಕುರಿತು ಬರೆವಾಗ ನಾಡಿನ ಬಗ್ಗೆ ಪ್ರೀತಿ, ಅಭಿಮಾನ, ಹೆಮ್ಮೆ, ಆನಂದ, ಆತ್ಮೀಯತೆ ಮತ್ತು ಗೌರವ ಭಾವಗಳು ಒಗ್ಗೂಡಿ ಎರಕ ಹೊಯ್ದಂತೆ ಭಾವಸಮುಚ್ಚಯಗಳ ಚೆಲುವು ಚೆಲ್ಲಿ ನಿಲ್ಲುತ್ತದೆ. ಜವರೇಗೌಡರಿಗೆ ಕನ್ನಡ ಎಂಬ ಹೆಸರನ್ನು ಕೇಳಿದೊಡನೆಯೇ **ಆಪ್ತಪ್ರಜ್ಞೆ** ದಾಳಿಸುತ್ತದೆ.

"ಕನ್ನಡ ನಾಡಿದು ನನ್ನದು ನಾಡು
ಭಾರತೀದೇವಿಯ ಕರುನಾಡು
ನಿಸರ್ಗ ವೈಭವ ವೈವಿಧ್ಯದ ನಾಡು
ಸಕಲ ಮತ ಧರ್ಮಗಳ ನೆಲೆಬೀಡು
ಕನ್ನಡ ನಾಡಿದು
ಕನ್ನಡ ನಾಡಿನ ಮಣ್ಣಿನ ಕಣಕಣದೆದೆಯಲ್ಲಿ
ಕನ್ನಡ ಅನುಕರಣಿಸುತ್ತಿದೆ
ಜಲಚರಭೂಚರಗಳ ಕೊರಳಲಿ
ಕನ್ನಡ ಮಾರ್ದನಿ ಗೈಯುತಿದೆ"[೬]

ಈ ಸುಂದರ ಹಾಡುಗಬ್ಬವಾದ ಇದು ಪಲ್ಲವಿಗಳ ಪುನರುಕ್ತಿಯೊಂದಿಗೆ ನಾಡಿನ ಹಿರಿಮೆಯನ್ನು ಕವಿ ಋಷಿ ಸಂತರ ಮಹಿಮೆಯನ್ನು ಅಭಿವ್ಯಕ್ತಿಸುತ್ತದೆ. ಇನ್ನು ನಾಡುನುಡಿಗೆ ದ್ರೋಹ ಬಗೆವ ವಿಶ್ವಾಸಘಾತಕ ಶಕ್ತಿಗಳ ಜನ್ಮ ಜಾಲಾಡದೆ ಬಿಡುವುದಿಲ್ಲ ಈ ಕವಿ ಪುಂಗವರು.

"ನನ್ನ ನುಡಿಯೇ ನನ್ನ ಅಭ್ಯುದಯಕಾಧಾರ
ನನ್ನ ನುಡಿ ಸೇವೆಯೇ ಸದ್ಧರ್ಮ ಮುಕ್ತಿ ನಿಧಿ
ಅನ್ಯರಿಂ ನಾಡಿಗೆ ಧಕ್ಕೆಬರೆ ಎದುರಿಸುವ ಛಲ
ಧನ್ಯತೆಯು ಎನಗಿರಲಿ ಕೇಳು ಮಗಳೆ"[೭]

ಕೇಳು ಮಗಳೆ ಅಂಕಿತದಲ್ಲಿ ಅಭಿವ್ಯಕ್ತಿಗೊಂಡಿರುವ ಮುಕ್ತಕ ಸಾಹಿತ್ಯ ಜವರೇಗೌಡರ ಕಾವ್ಯಲೋಕದ ಪ್ರಾಣಭಾಗವಾಗಿದ್ದು, ಜೀವನದ ವಿವಿಧ ವ್ಯಾಪಾರಗಳಿಗೆ ರಂಜಿತ ಅನುಭವಗಳಿಗೆ ಗಟ್ಟಿಯಾದ ನೆಲೆಯಾಗಿದೆ. ನಿಯತವಾದ ದ್ವಿತೀಯ ಪ್ರಾಸದ ಬಿಗಿ ಬಂಧಗಳಲ್ಲಿ ಸಾಮಾಜಿಕ ಅಸಮಾನತೆಯನ್ನು ವಿಷಮಿಸುವ ಮನುವನ್ನು ಅತ್ಯುಗ್ರವಾಗಿ ಖಂಡಿಸಿದ್ದಾರೆ.

"ಮನುವೊಬ್ಬ ಪಾಪಿಷ್ಟ ರಾಕ್ಷಸಂ ನಿರ್ದಯನ್
ಶನಿ ಮಾನವ ದ್ವೇಷಿ ವರ್ಣಜಾತಿಯ ಸೃಜಿಸಿ
ಘನದೇಶವನು ಪರರಿಗಿತ್ತವನತಿಗೆ ನೂಕಿ
ದನು ಸದ್ಗತಿಯೆ ಶೂನ್ಯ ಕೇಳು ಮಗಳೆ"[೮]

ಸಹಸ್ರಾರು ವರ್ಷಗಳ ಹಿಂದಿನಿಂದ ಸಂಸ್ಕೃತ ಸಾಹಿತ್ಯದಿಂದ ಸಾಗಿ ಬಂದ ಈ ಭಾವಗೀತೆ ಆಧುನಿಕ ಕನ್ನಡ ಸಾಹಿತ್ಯದಲ್ಲೂ ಒಂದು ಪ್ರಮುಖ ಪ್ರಕಾರವಾಗಿ ನೆಲೆಬೆಲೆಯನ್ನು ಕಂಡುಕೊಂಡಿದೆ.

"ಮೂರು ಕೊಟ್ಟರೆಯತ್ತೆಯಕಡೆ ನಾಲ್ಕು ಕೊಟ್ಟರೆ ಸೊಸೆಯಕಡೆ" ಎಂಬಂತಹ ಗಾದೆಮಾತುಗಳು; "ಬಚ್ಚಲಲ್ಲಿ ಜೀವಿಸುವ ಹುಳಕ್ಕೆ ಸೇರುವುದೆ ಶ್ರೀಗಂಧ ಬಳಕೆ" (ಯಾರೆನ್ನನಿಂದಿಸಿದೊಡೇನು) "ಕಾಡಾನೆ ಬಡವನ ಹೊಲಕ್ಕೆ ನುಗ್ಗುವಂತೆ" (ಕಳೆಯಿತಿಂದಿಗೆ ವರ್ಷ) ಗಾಳಿಯೆದುರ ಹಣತೆಯಂತೆ (ಇಂದಿನ ರಾಜಕೀಯ) ಇಂತಹ ಪರಿಣಾಮಕಾರಿ ಉಪಮೆಗಳು ಕವಿತಾಕನ್ಯೆಗೆ ತೊಡಿಸಿದ ಸುಂದರ ಅಲಂಕಾರಗಳಾಗಿವೆ.

"ಆನಂದವೆ ಬದುಕು ನಾನಂದವೇ ಸಾವು"[೯]
"ಚಿಂತನೆಯೆ ಇಲ್ಲದ ಮನೆ ಜನರಿಲ್ಲ"[೧೦]
'ಕಾಲಗಾಳಿ ತೂರಿದಂತೆ'

ಇಲ್ಲಿನ ಕವಿಪ್ರಜ್ಞೆ ಎಲ್ಲಿಯೂ ಕಲ್ಪನಾಗೋಪುರವನ್ನೇರಿ ಕೂರಲಿಲ್ಲ. ಕವಿಯ ವೈಯಕ್ತಿಕ ಬದುಕೇ ಬಹುಮಟ್ಟಿಗೆ ಕಾವ್ಯದ ಹಾಸಾಗಿ, ವಾಸ್ತವದ ಬೀಸಾಗಿ ನೆಲೆಸಿದೆ,

"ಇಂದ್ರಿಯ ವಹಳಿಯೆ" ಎಂಬ ಶ್ರೇಷ್ಠಮಟ್ಟದ ಕವಿತೆ ಪಂಚೇಂದ್ರಿಯಗಳು ನೀಡುವ ವಿವಿಧ ಬಗೆಯ ಸುಖಸ್ವರೂಪವನ್ನು ನೀಡಿದೆ.

ಅಸ್ಪೃಶ್ಯ ನಿವಾರಣಾ ಧೋರಣೆ, ಜವರೇಗೌಡರಲ್ಲಿ ಅದು ದೇಹವಿಜ್ಞಾನದ ರಸಗ್ರಹಣೆಯ ವಿವೇಚನಃ ಸವಿಗಾಗಿ;

"ಎಷ್ಟೊಂದು ಆನಂದ ತುಂಬಿರುವೆ ನೀನು
ನೀನಿತ್ತಿರುವ ಅಂಗಗಳೊಳಗೆ ದೇವಾ
ಕಣ್ಣಿನೊಳು ಸೌಂದರ್ಯ ದರ್ಶನಾನಂದ
ಕಿವಿಯಲ್ಲಿ ಸಂಗೀತ ಶ್ರವಣಾನಂದ
ಮೂಗಿನಲಿ ಸುಗಂಧಿತ ವಾಸನಾನಂದ
ತ್ವಕ್ಕಿನಲಿ ಮೃದು ಮಧುರ ಸ್ಪರ್ಶವಾನಂದ
ರಸನೆಯಲ್ಲಿ ಸರ್ವರಸ ಭೋಜನಾನಂದ
ಸುರತದಲ್ಲಿ ಸರ್ವಸುಖ ಸುಮನನಾನಂದ
'ಆನಂದವೇ ಬದುಕು ನಾನಂದವೇ ಸಾವು'
ಇಂದ್ರಿಯಂಗಳು ವಿನಾ ಸುಖವಿಲ್ಲ ನರಗೆ."[೧೧]

ಕವಿಯ ವಯೋಮಾನವನ್ನು ದಾಟಿ ನಿಂತ ಮನೋಧರ್ಮ ಅತ್ಯಾಧುನಿಕವಾಗಿದೆ; ನವನವೋನ್ಮಷಶಾಲಿನಿಯಾಗಿದೆ, ಡಿ.ಎಲ್.ನರಸಿಂಹಚಾರ್ ಅವರು ಹೇಳುವ:

ಹೊಸಗನ್ನಡ ಕವಿತೆ ನಿಜವಾದ ಸ್ಫೂರ್ತಿಯಿಂದ ಹಾಡುತ್ತಿದೆ. ನಾನಾಕಡೆಗಳಿಂದ ಬಂದ ಪ್ರೇರಣೆಗೆ ಹೊಳವು ಕೊಡುತ್ತ ಕೆಲವು ವೇಳೆ ಅದನ್ನು ಇನ್ನೂ ಹೆಚ್ಚು ಸಾಂದ್ರವಾಗಿಸುತ್ತ ಅದು ಜೀವನದಲ್ಲಿ ಮಂಗಳವನ್ನು ಅರಸಲು ಹೊರಟಿದೆ,' ಎಂಬ ನುಡಿ ಜವರೇಗೌಡರ ಕಾವ್ಯ ಮಾರ್ಗಕ್ಕೂ ಅನ್ವಯಿಸುತ್ತದೆ, ಅರ್ವಾಚೀನ ಕವಿ ಯಾವತ್ತೂ ಪ್ರಾಚೀನ ಕವಿಯ ಆಲೋಚನೆಯ ಗತಿಯ ಮುಂದುವರಿದ ರೂಪವಾಗುತ್ತಾನೆ ಮಾತ್ರವಲ್ಲ ತನ್ನ ಸ್ವಂತ ಚಿಂತನೆಯ ಸೇರ್ಪಡೆಯೊಂದಿಗೆ ತನ್ನ ಕಾಲೀನ ಸ್ಥಿತಿಗತಿಗಳ ನಿಜಬಿಂಬವೂ ಆಗುತ್ತಾನೆ.

ಜವರೇಗೌಡರ ಸತ್ತ್ವ ಸಂಪನ್ನ ಭಾವಗೀತೆಯನ್ನು ಬರೆದಿದ್ದಾರೆ ಎಂಬುದಕ್ಕೆ ಸಾಕ್ಷಿ ನುಡಿಯುತ್ತಿವೆ. ಅವರು ಆಧುನಿಕ ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದಾರೆ ಎಂಬುದಕ್ಕೆ ಈ ಬರೆದರುವ ಭಾವಗೀತೆ ಸಾಕ್ಷಿಯಾಗಿದೆ.

"ಈ ಕವಿತೆ ಒಂದೊಂದು ದಿಕ್ಕಿನಲ್ಲಿ ಒಂದೊಂದು ತೆರನಾಗಿದೆ. ಕಾಳಿದಾಸ ಕಾಳಿಕಾದೇವಿಯನ್ನು ಬಣ್ಣಿಸಿದಂತೆ, ಪಂಪ ಲಲಿತಾಂಗ ವಲ್ಲಭನನ್ನು ಸಂಸ್ಮರಿಸಿ ಕರೆದಂತೆ, ಕನಕದಾಸ ನಳಚರಿತೆಯಲ್ಲಿ ದಮಯಂತಿಯ ರೂಪರಾಶಿಯನ್ನು ನಿರೂಪಿಸಿದಂತೆ ಭಾಸವಾಗಿದೆ".

ಪಂಪ

"ಮದನನ ಕೈದುವೆಲ್ಲಿದನಂಗನ ಕೈಪೊಡೆಯಲ್ಲಿದಂವಿಳಾ
ಸರ ಕಣಿಯಲ್ಲಿಗಂ ಚದುರ ಪುಟ್ಟಿದನಲ್ಲಿದನೆಲ್ಲದಂ ವಿನೋ
ದದ ಮೊದಲೆಲ್ಲಿದಂ ಸೊಖಗಿನಾಗರಮಲ್ಲಿದ ನಿಚ್ಚೇಯಾಣ್ಮನೆ
ಲ್ಲಿದನೆರ್ದೆನೆಯಾಣ್ಮ ನೆನೆರಸನೆಲ್ಲಿದನೋ ಲಲಿತಾಂಗವಲ್ಲಭಂ"[೧೨]

ಸತ್ತ ಪತಿಯನ್ನು ನೆನೆಯುವ ಈ ವಿಪ್ರಲಂಬ ಶೃಂಗಾರ ಕನ್ನಡ ಸಾಹಿತ್ಯದ ಶ್ರೇಷ್ಠ ಮನೋಹರ ಪದ್ಯಗಳಲ್ಲೊಂದು ಇಲ್ಲಿಯೂ ಸಹ "ಲಲಿತಾಂಗವಲ್ಲಭಂ" ಎಂಬುದನ್ನು ತೆಗೆದರೆ ಉಳಿದ ಇಡೀ ಬಂಧ ಒಂದು ಸುಂದರ ಸ್ವತಂತ್ರ್ಯ ಭಾವಗೀತೆ, ದೇಜಗೌ ಅವರ ಕವಿತೆ ಶೃಂಗಾರ ಮಾತ್ರವಲ್ಲದೆ ಆಧ್ಯಾತ್ಮದ ಬಾಂಧವ್ಯದ ಬೆಸುಗೆಯೂ ಆಗಿದೆ.

ಮಾನವನ ಅಭ್ಯುದಯ ಶ್ರೇಯಸ್ಸುಗಳಿಗಾಗಿ ನೊಂದವರು, ಬೆಂದವರು, ಮನರಂಜನೆಯಂತೆ ಬಾಳಿ ಹೋರಾಡಿ ಸಂದವರು, ವೈರಾಗಿಗಳು ಮಾತ್ರ ವಿಜ್ಞಾನ ಯುಗದಲ್ಲಿ ಆರಾಧ್ಯಾರಾಗುತ್ತಾರೆ ಎಂಬ ಮಾತು ಸತ್ಯ. ಅಂತಹ ಸತ್ಯವಾದ ಭಾವಗೀತೆಯನ್ನು ದೇಜಗೌ ಈ ಕೆಳಕಂಡ ಈ ಸಾಲುಗಳಲ್ಲಿ ಉದ್ಧರಿಸಿದ್ದಾರೆ.

"ಈ ಮಹಾ ಸ್ವಾತಂತ್ರ್ಯ ಯಾಗ ಧೂಮದಲಿ
ಶ್ವೇತಾಗ್ನಿ ಜ್ವಾಲೆಯೊಂದುರಿಯುತಿದೆ ನಿಶ್ಚಲಂ
ರಂಜಿಸುತ್ತಿದೆ – ಶಾಂತಿಯಲಿ ಹಿಮಾಮಹಾಚಲಂ
ರಾರಾಜಿಸಿದಂತೆ ನೀಲಿಮ ನಭೋದಾಮದಲ್ಲಿ
ಲೋಕಲೋಚನದಂತೆ ರಾಳದಾರಾಮದಲಿ.. . . . . "[೧೩]

ಎಂಬ ಭಾವ ಅರ್ಥವತ್ತಾಗಿದೆ. ಸತ್ಯಾಗ್ರಹ ಸಿದ್ಧಾಂತದ ಸ್ವರೂಪವನ್ನು ಪ್ರಾಯೋಗಿಕವಾಗಿ ಅಲ್ಲದೆ ಗಾಂಧಿಜೀವನದ ಘಟನೆಗಳನ್ನು "ಸತ್ಯಾಗ್ರಹ" ಕವಿತೆ ಹೇಗೆ ನಮಗೆ ನೀಡುತ್ತದೆ ಎಂಬ ಅಂಶವನ್ನು ದೇಜಗೌ ಈ ಕಾವ್ಯದ ಮುಖಾಂತರ ನಮಗೆ ಮನದಟ್ಟು ಮಾಡಿಕೊಟ್ಟಿದ್ದಾರೆ.

ಅಡಿಟಿಪ್ಪಣಿಗಳು

೧. ಪ್ರೊ. ಎಲ್.ಎಸ್.ಶೇಷಗಿರಿರಾವ್, ಆಧುನಿಕ ಕನ್ನಡ ಸಾಹಿತ್ಯ ಒಂದು ಪ್ರಕಾರ, ಪುಟ. ೩೪, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ೨೦೦೮.

೨. ಅದೇ, ೩೫.

೩. ಅದೇ, ೩೭.

೪. ಅದೇ, ೪೦.

೫. ಅದೇ, ೪೧.

೬. ದೇಜಗೌ ಸೆಳಕು ಮೆಲುಕು, ಡಾ. ಮಳಲಿವಸಂತಕುಮಾರ್, ಮುನ್ನುಡಿಯಿಂದ, ಪುಟ. ೧೪, ವೈದ್ಯವಾರ್ತ ಪ್ರಕಾಶನ, ಮೈಸೂರು

೭. ಅದೇ, ಪು. ೧೭.

೮. ಅದೇ, ಪು. ೧೫.

೯. ಅದೇ, ಪು. ೧೬.

೧೦. ಅದೇ, ಪು. ೧೭.

೧೧. ಅದೇ, ಪು. ೧೯.

೧೨. ಅದೇ, ಪು. ೧೭.

೧೩. ಡಾ. ಟಿ.ಕೆ. ಕೆಂಪೇಗೌಡ, ಅನಿಕೇತನದಲ್ಲೊಂದು ವಿಶ್ವಚೇತನ, ಪುಟ. ೨೫೯, ಯಡಿಯೂರು ಸಿದ್ದಲಿಂಗೇಶ್ವರ ಪ್ರಕಾಶನ, ಮೈಸೂರು.

ಅಧ್ಯಾಯ – ೭

ದೇಜಗೌ ಕವಿತೆಗಳಲ್ಲಿ ಕ್ರಾಂತಿ

ಕನ್ನಡ ನಾಡಿನ ವಿದ್ವತ್ ಪರಂಪರೆಯಲ್ಲಿ ಬಹುದೊಡ್ಡ ಹೆಸರು ಪ್ರೊ. ದೇಜಗೌ. ಅವರ ಸಾಹಿತ್ಯ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲೂ ತನ್ನ ಪ್ರತಿಭೆಯನ್ನು ಮೆರೆದ ಅವರು ಅತ್ಯುತ್ತಮ ಕವನಗಳನ್ನು ರಚಿಸಿದ್ದಾರೆ.

ಅವರ ಕವನಗಳಲ್ಲಿ ಹದಗೆಟ್ಟ ರಾಜಕೀಯ ಸನ್ನಿವೇಶಗಳಿವೆ. ಸ್ವಾರ್ಥ ರಾಜಕಾರಣಿಗಳ ನಾಚಿಕೆಗೆಟ್ಟ ಬದುಕು ದೇಶದಲ್ಲಿ ನಾನಾ ಅನಾಹುತಗಳನ್ನು ಹೇಗೆ ಸೃಷ್ಟಿಸುತ್ತವೆ; ಭ್ರಷ್ಟಾಚಾರ; ದೇಶದ ಆರ್ಥಿಕ ಅಭದ್ರತೆ, ವೋಟಿಗಾಗಿ ತೊಡುವ ರಾಜಕಾರಣಿಗಳ ಜಾತೀಯ ಕಂದಕಗಳು ಇವೆಲ್ಲವನ್ನು ದೇಜಗೌ ಕವಿತೆಗಳಲ್ಲಿ ಪ್ರ ಕಟಪಡಿಸಿದ್ದಾರೆ.

ದೇಜಗೌ ಕವನಗಳನ್ನು ಓದುತ್ತ ಹೋದಂತೆ ನಿಜಕ್ಕೂ ಅವರು ಹಿಡಿದ ಲೇಖನಿ ಖಡ್ಗವಾಗಿದೆ. ಪ್ರೊ. ಮಳಲಿವಸಂತಕುಮಾರ್ ಅವರು ದೇಜಗೌ ಅವರ ಕಾವ್ಯ ಕುರಿತು ಹೀಗೆ ಬರೆದಿದ್ದಾರೆ:

"ಅವರು ರಾಜಕಾರಣಿಗಳ ಈ ಹೀನ ಧೋರಣೆಗಳನ್ನು ಉಗ್ರವಾಗಿ ಖಂಡಿಸಿ ಮುಖದ ಬೆವರಿಳಿಸಿದ್ದಾರೆ. ಆತ್ಮಗೌರವ ಇರುವ ಯಾವ ರಾಜಕಾರಣಿಯು ಬೆಚ್ಚಿಬೀಳುವಂತೆ, ಆತ್ಮಾವಲೋಕನ ಮಾಡಿಕೊಳ್ಳುವಂತೆ ಕಾವ್ಯದ ಈಟಿಯಿಂದ ತಿವಿದಿದ್ದಾರೆ.

ಅವರ ಚುಟುಕುಗಳಾಗಲಿ, ಮುಕ್ತಕಗಳಾಗಲಿ, ವಚನಗಳಾಗಲಿ ಅಥವಾ ಸಂಕಲನದ ಶುದ್ಧಾಂಗ ಭಾವ ಗೀತೆಗಳಾಗಲಿ ರಾಜಕೀಯ ವಿಡಂಬನೆಯ ಸಿಂಹ ಶಕ್ತಿಯಾಗಿ ರೂಪ ತಳೆದಿದೆ.

"ಪಾಪಪುಣ್ಯ ನ್ಯಾಯ ನೀಡಿ
ಭೀತಿ ತೊಡದು ಇಲ್ಲವವಕೆ
ಕಾಲಗಾಳಿ ತೂರಿದಂತೆ
ಬಗ್ಗಿ ನಡೆವುದರ ಚಾಳಿ
ಬಂಡ ಭಂಡರೆಲ್ಲರು

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕರುಣೆ ಮರಕವೆಂಬುದಿಲ್ಲ
ರಾಜಕೀಯ ನಾಗರಿಕರಿಗೆ
ಲೂಟಿಯವರ ಬದುಕಿನ ಗುರಿ
ಸ್ವಾರ್ಥವೊಂದೆಯವರ ಸ್ವರ್ಗ
ಸುಳ್ಳೆಯವರ ಮನೆ ದೇವರು"[೧]

ರಾಜಕೀಯ ಹೊಲಸು ಇಲ್ಲಿ ಕಾವ್ಯಮಯವಾಗಿದೆ. 'ಕಾಲಗಾಳಿ'ಯಂತ ಸಮರ್ಥ ರೂಪಕ ಸ್ವಾರ್ಥದ ಸ್ವರ್ಗ, ಸುಳ್ಳನು ಮನೆದೇವರಾಗಿಸಿದ ಉಪಮಾ ಚಿತ್ರಗಳು ಮನಸೆಳೆಯುತ್ತವೆ. (ಸೆಳಕು-ಮೆಲುಕು-ಮುನ್ನುಡಿ) ಸೆಳಕು ಮೆಲಕು ಸಂಕಲನದಲ್ಲಿ ರಾಜಕೀಯ ಅವಿವೇಕನ ವಿವಿಧ ಅವಾಂತರಗಳ ಕಟು ಟೀಕೆಯನ್ನು ಕಾಣಬಹುದು.

ರಾಜಕಾರಣಿ ಎಂಬ ಶೀರ್ಷಕೆಯಡಿಯಲ್ಲಿ ಪ್ರಕಟವಾಗುವ ಮುಕ್ತಕಗಳಲ್ಲಿ ರಾಜಕಾರಣಿಗಳ ವಂಚನೆಯ ಬದುಕನ್ನು ನಗ್ನಗೊಳಿಸಿದ್ದಾರೆ.

"ತಾಯಿಗ್ಗಂಡರು ಪಕ್ಷಾಂತರಿಗಳು
ಕೋಡಿಂ ಕೋಡಿಗೆ ಹಾರುವ ಮರ್ಕಟಗಳು
ತತ್ವದಗಾಳಿಗೆ ತೂರಿದ ಸೈತಾನಿಗಳು
ಹಡೆದಾ ತಾಯಿಯ ಮರೆತಾ ಈಡಿಪಸ್ ವಂಶಜರು"[೨]

ಹೀಗೆ ರಾಜಕಾರಣಿಗಳ ಗೋಸುಂಬೆತನ ಅವರ ಜೀವನ ವ್ಯಾಪಾರವನ್ನು ಚಿತ್ರಿಸಿದ್ದಾರೆ.

ಪ್ರೊ. ಮಳಲಿ ವಸಂತಕುಮಾರ ಅವರು ಹೇಳುವಾಗ "ಮುಕ್ತಕದಲ್ಲಿ ಅವರ ಆಸುರೀ ಶಕ್ತಿಯ ಘೋರ ಚಿತ್ರಣವಿದೆ. ನನಗೆ ತಿಳಿದ ಮಟ್ಟಿಗೆ ಇಷ್ಟು ನಿಷ್ಠುರರಾಗಿ ಇಷ್ಟು ಕಠೋರವಾಗಿ ಇಷ್ಟು ನಿರ್ಭಿಡೆಯಿಂದ ರಾಜಕಾರಣಿಗಳನ್ನು ಉಗಿದಿರುವ ಬೇರೊಬ್ಬ ಕವಿಯನ್ನು ಕವಿ ನಾ ಕಾಣೆ" ಈ ಮಾತು ಅಕ್ಷರಶಃ ಸತ್ಯ. ಕಂಡದ್ದನ್ನು ಕಂಡಂತೆ ಹೇಳುವುದೇ ದೇಜಗೌರವರ ಕಾವ್ಯ ಧರ್ಮವಾಗಿದೆ ಎಂಬುದನ್ನು ತಿಳಿಯಲಾಗಿದೆ.

ಇಂದಿನ ದುಷ್ಟ ರಾಜಕೀಯದ ಕರಾಳ ವ್ಯವಸ್ಥೆಯಲ್ಲಿ ಕೆಟ್ಟದ್ದಕ್ಕೂ ಸಾಕ್ಷಿ ಪ್ರಜ್ಞೆಯಾಗುವ ತಾಕತ್ತು ನಿಜಕ್ಕೂ ಅಸಮಾನ್ಯವಾದುದಾಗಿದೆ. ದೇಜಗೌರವರ ಕವಿತೆಗಳು ಸಮಕಾಲೀನ ರಾಜಕೀಯ ವ್ಯವಸ್ಥೆಯ ಮೇಲೆ ಪರಿಣಾಮಕಾರಿ ಬೆಳಕನ್ನು ಚೆಲ್ಲುತ್ತವೆ.

"ಒಂದೆಡೆ ಉದ್ಯಮ ಪತಿಗೆ ಎಚ್ಚರಿಕೆ ಪದ್ಯದಲ್ಲಿ
ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ
ಬಸವೇಶ್ವರರ ಅಮೃತವಾಣಿ ತಿಳಿದಿದೆಯೆ ನಿನಗೆ ಬೆಪ್ಪ
ನಿರುತಮಿದು ತಿಳಿಯೆ ನಿನಗೆ ತಪ್ಪರಪ್ಪುದು ಒಪ್ಪು"[೩]

"ಹುಲಿ ಸಿಂಹಗಳ ನಂಬಬಹುದಯ್ಯ
ರಾಜಕಾರಣಿಯ ನಂಬಲಾಗದು ಗುರು
ಹುಲಿಯ ಗವಿಯಿಂದ ಬದಕಿ ಬರಬಹುದಯ್ಯ
ರಾಜಕಾರಣಿಗಳ ಮನೆಯಿಂದ ಬದುಕಿ ಬರಲಾಗದಯ್ಯ
ರಾಜಕಾರಣಿಗಳ ನಂಬಿ ಕೆಟ್ಟವರುಂಟು
ನಿನ್ನನು ನಂಬಿ ಕೆಟ್ಟವರಿಲ್ಲವಯ್ಯ"[೪]

ಹೀಗೆ ಹಲವಾರು ನಿದರ್ಶನಗಳಿವೆ. ಇಂದಿನ ರಾಜಕೀಯ ವ್ಯವಸ್ಥೆ ಕಲುಷಿತ ಮಾತ್ರವಲ್ಲ, ಅದು ಕ್ರೂರವು ಆದುದಾಗಿದೆ. ದೇಜಗೌ ಅವರು ಕುವೆಂಪು ಅವರಿಂದ ಪಡೆದ ಎದೆಗಾರಿಕೆ ನಿಜಕ್ಕೂ ಅವರ ವ್ಯಕ್ತಿತ್ವದ ಔನ್ನತ್ಯವನ್ನು ಇಲ್ಲಿನ ಎಷ್ಟೋ ಕವಿತೆಗಳು ಎತ್ತಿ ತೋರಿಸುತ್ತವೆ. ನಿರ್ದಾಕ್ಷಿಣ್ಯ ಧೋರಣೆ ದೇಜಗೌರವರ ಕವಿತೆಗಳಲ್ಲಿದೆ.

ಸಂಕೀರ್ಣತೆ ದೇಜಗೌ ಕವಿತೆಗಳ ಹೆಗ್ಗಳಿಕೆಗೆ ಜೀವನದ ವ್ಯಾಪಕವಾದ ಅನುಭವ ಜೊತೆಗೆ ದೇಜಗೌರವರ ಹೋರಾಟದ ಬದುಕು ಸಹ ಕಾವ್ಯಕ್ಕೆ ಮುಖ್ಯ ನೆಲೆಯಾಗಿದೆ. ರೈತನ ಬಗ್ಗೆ ಒಂದೆಡೆ ಹೀಗೆ ಬರೆದಿದ್ದಾರೆ.

"ರೈತನುಸಿರು ಜ್ವಾಲೆಯಾಗಿ
ಅವನ ಬೆವರು ಲಾವವಾಗಿ
ಸಿರಿಯ ಜನರ ನೊಣೆವುದು
ತಿರೆಯನೆಲ್ಲ ಸುಡುವುದು
ರೈತನೊಬ್ಬನೆಯೆ ಧರೆಗನ್ನದಾತ ನಿಜದಿಂ
ರೈತನಿಂದುಳಿದಿಹರು ಸಂಸದರು ಶಾಸಕರು
ರೈತನಿರೆ ಬಾಂಬುಯಂತ್ರಗಳು ಹಾರಾಡುವುದು
ರೈತನಿಲ್ಲದಿರೆ ಜಗಶೂನ್ಯ ಮಗಳೆ"[೫]

ಇಲ್ಲಿಯ ಕವಿತೆಯ ಹಿಂದೆ ಕವಿಯ ಅದಮ್ಯ ಜೀವನೋತ್ಸಾಹ, ಆಶಾವಾದವಿರುವುದನ್ನು ಗಮನಿಸಬಹುದು. ಮಾತೆ ಶ್ರೀಮತಿ ಸಾವಿತ್ರಮ್ಮ ದೇಜಗೌ ಅವರನ್ನು ಕುರಿತ ಕವನಗಳು ಇಲ್ಲಿವೆ.

ಉದಾಹರಣೆಗೆ ಈ ಕವಿತೆಯ ಕೆಲವು ಸಾಲುಗಳನ್ನು ಗಮನಿಸಬಹುದು.

“ಸುಸ್ಮಿತೆ ಸುಮನಸೇ ಸುಲಲಿತೇ ಸುರುಚಿರೇ
ಸುರಮೋಹಿನಿ ಸುನಿರ್ಮಲೇ ಸುಭಾಷಿಣೀ
ಸುಚಿತಾಪಹರಿಣಿ ಸುವಿವೇಕ ಚೂಡಾಮಣಿ
ಸದಾ ಮಮ ಹೃದಯವಾಸಿ ಸರ್ವನುತೇ”[೬]

ದಾಂಪತ್ಯ ಜೀವನದ ಪ್ರೇಮ ಪರಕಾಷ್ಠೆಯ ಅನನ್ಯ ಅನುಬಂಧವನ್ನು ಈ ಕವಿತೆಯಲ್ಲಿ ಕಾಣಬಹುದು.

ಪ್ರೊ. ಮಳಲಿವಸಂತಕುಮಾರ್ ಅವರು ದೇಜಗೌರವರ ದಾಂಪತ್ಯ ಚಿತ್ರಣವನ್ನು ಹೀಗೆ ಬರೆದಿದ್ದಾರೆ, ಈ ಕವಿತೆ “ಸತಿ ಅಳಿದ ಒಂದು ವರ್ಷದ ಅವಧಿಯಲ್ಲಿ ಬರೆದುದು. ಕವಿ ಬದುಕಿನ ಯಾವ ಹಿನ್ನೆಲೆಯೂ ಗೊತ್ತಿಲ್ಲದೆ ನೋಡಿದಾಗ ಸ್ವತಂತ್ರ್ಯವಾದ ಸರ್ವಸುಂದರ ಭಾವಗೀತೆ, ಕಾಲಾತೀತವಾಗಿ ಲೋಕಾತೀತವಾಗಿ ನಿಲ್ಲುವ ಬಿಡಿಯಾದ ಮಾತಾಗಿದೆ.

“ತನಗೆ ತಾನೇ ಇಡಿಯಾದ ಕವನ, ಯಾವುದೇ ಕವಿತೆ ಸನ್ನಿವೇಶದಿಂದ ಪ್ರತ್ಯೇಕಿಸಿದಾಗ ಅದು ಸ್ವತಂತ್ರ್ಯವಾದ ಅರ್ಥದಿಂದ ವಿಜೃಂಭಿಸಿದರೆ ಅದು ಕಾವ್ಯೋತ್ಪತ್ತಿಯ ಯಶಸ್ಸಿನ ಗುಣಾಂಶಗಳಲ್ಲಿ ಒಂದಾಗುತ್ತದೆ.”[೭]

ಪ್ರತಿಭಾಸಂಪನ್ನ ಮಹಿಮಾನ್ವಿತ ಕವಿಗಳಿಗೆ ಮಾತ್ರ ಇಂತಹ ನಿರ್ಮಿತಿ ಸಾಧ್ಯವಾಗುತ್ತದೆ. ಪ್ರಾಸ, ಅನುಪ್ರಾಸ, ಲಯ, ಸಮನ್ವಯ ಮತ್ತು ಭಾವೋನ್ಮಾದದಿಂದ ಅರ್ಥಂಚನ ಗೈದ ಈ ಕವಿತೆ ಲಲಿತ ಪದ ಬಾಹುಳ್ಯದ ಮಧುರತೆಯಿಂದ ಮನೋಹರವಾಗಿದೆ.

ಕೊಳಲ ನುಡಿಯಿಂದ ಶೃಂಗಾರರಸ ಹೊರ ಹೊಮ್ಮಿದಂತೆ ವೀಣಾ ಕಂಪನದಿಂದ ಪಾವಿತ್ರ್ಯಬಾವ ಹೊರಸೂಸಿದಂತೆ ಇವೆರಡು ಸಂಲಗ್ನಗೊಂಡು ಒಂದು ಅಪರೂಪದ ಗೀತೆದನಿ ಝೇಂಕರಿಸಿದೆ.

"ಶಬ್ದಕ್ಷೀರಕ್ಕೆ ಅರ್ಥದ ಜೇನು ಸಮ್ಮಿಶ್ರಗೊಂಡಂತೆ ಸವಿಯಾಗಿದೆ" (ಸೆಳಕು-ಮೆಲಕು-ಮುನ್ನುಡಿ). ಹೀಗೆ ದೇಜಗೌರವರು ಇಂದಿನ ಅವರ ಬದುಕು ಬರಹಗಳ ಕ್ರಿಯಾಶೀಲತೆಗೆ ಪ್ರೇರಣಾಶಕ್ತಿ ಶ್ರೀಮತಿ ಸಾವಿತ್ರಮ್ಮನವರು.

ಟಾಲ್‌ಸ್ಟಾಯ್ ಮಹರ್ಷಿ ಕವಿತೆಯನ್ನು ಗಮನಿಸಬಹುದು. ಇದು ಅತ್ಯುತ್ತಮ್ಮ ಕವಿತೆಗಳಲ್ಲಿ ಒಂದಾಗಿದೆ. ಕನ್ನಡದ ವ್ಯಕ್ತಿ ಚಿತ್ರಗಳನ್ನು ಕುರಿತ ಮಹತ್ವದ ಕವಿತೆಗಳ ಸಾಲಿಗೆ ಸೇರುತ್ತದೆ ಇದೊಂದು ಸುನೀತ.

"ಜೀವನ ಮಹಾಯಾತ್ರೆಯಲ್ಲಿ ಬಿದ್ದೆದ್ದು ಗೆದ್ದ
ದುಃಖಾಗ್ನಿ ದಗ್ದ ನಿರ್ದೋಷಿ ಸಾಧಕ ಸಿದ್ದ
ಸರಳ ಜೀವನ ಸೋತು ಸರ್ವೋದಯಕ್ಕೆಳಸಿ
ಓದಿನ ಬಂಧು ಸಿರಿತೊರೆದ ಕಷ್ಟವ ಬಳಸಿ
ಸಾಹಿತ್ಯಧವಳನಗೆ ಗೌರೀಶಂಕರವೇದುನ
ಸತ್ಯ ಶಿವ ಸೌಂದರ್ಯ ದರ್ಶನಂಗಳ ಸಾದುನ
ಮಹಾಕವಿ ಮಹಾತ್ಮರ ಬಾಳ ಬಟ್ಟೆಯ ತೋರಿ
ರೆನ್ನೆದೆಯ ಸಗ್ಗವೆಂದೊಗೆದೆ ಸನ್ನಿಯ ಸಾರಿ
ಚರ್ಚುಗಳ ವಂಚನೆಯ ಜಾಲವನು ರೋಡಾಡಿ
ಕೃತಿಮತಿಗಳಿಗೆ ಕ್ರಿಸ್ತ ವಚನಾಮೃತವ ನೋಡಿ
ಸಮತವಜ್ಞಾನ ಮೌಢ್ಯಗಳ ತಿರಿಯಿಂದಿಳಿಸೆ
ಮಾನವತೆಯಂ ಮರೆದೆಯಲ್ತೆ ಶಾಂತಿಯನುಳಿಸೆ
ಧನ್ಯನೆಂ ಗುರುರೂಪಿ ನೀನೆನ್ನ ಕೈಹಿಡಿಯೆ
ಟಾಲ್‌ಸ್ಟಾಯ್ ಮಹರ್ಷಿ ಜಗಧನ್ಯಂ ನಿನ್ನಂ ಪಡೆಯೆ"[೮]

ಇದು ಘನೀಕೃತವುಂ ಸಾಂದ್ರ ಬಂಧುರವೂ ಆದ ಕವಿತೆಯಾಗಿದೆ. ಟಾಲ್‌ಸ್ಟಾಯ್ ಅವರ ಜೀವನ ಧೋರಣೆಗಳು ಈ ಕವಿತೆಯಲ್ಲಿವೆ, ಸಿ.ಪಿ.ಕೆ. ಲತಾರಾಜಶೇಖರ್ ತಮ್ಮ ಮಗಳ ಬಗ್ಗೆ ಗುರುವಿನ ಬಗ್ಗೆ ಸತ್ತ್ವ ಸಂಪನ್ನ ಕವಿತೆಗಳಿವೆ. ಈ ಸಂಕಲನದಲ್ಲಿ ಬರುವ ಕನ್ನಡದ ಬಗ್ಗೆ ರಚಿಸಿರುವ ಕವನಗಳು ತುಂಬು ವೈಚಾರಿಕ ಗುಣ ಸಂಪನ್ನದಿಂದ ಕೂಡಿವೆ ತಮ್ಮ ಗುರುವಿನ ಬಗ್ಗೆ ರಚಿಸಿದ ಒಂದು ಕವಿತೆ.

"ನೀ ಕರೆದೆ ನಾ ಬಂದೆ
ನೀ ನೆರೆದೆ ನಾ ಬೆಳೆದೆ
ನೀ ಕುಣಿಸೆ ನಾ ಕುಣಿದೆ

ನೀ ಮೆರೆಸೆ ನಾ ಮೆರೆದೆ
ನೀ ನಿದ್ದೆ ನಾ ಗೆದ್ದೆ
ನೀ ನಿರದೆ ಓ ಗುರುವೆ
ಬರಿ ಸೊನ್ನೆ ನಾಬರಬ"

ಛಂದೋಬಂಧದ ಯಶಸ್ಸಿನ ಎಲ್ಲಾ ಸಾಧ್ಯತೆಗಳನ್ನು ದೇಜಗೌ ಕವಿತೆಗಳಲ್ಲಿ ಸಾಧಿಸಿದ್ದಾರೆ.

ಆದರೆ ಇತ್ತೀಚೆಗೆ ಬರೆದ ಟಾಲ್‌ಸ್ಟಾಯ್ ಮತ್ತು ಸಿ.ಪಿ.ಕೆ. ಕುರಿತ ಕವಿಗಳಲ್ಲಿ ಕಾವ್ಯಗುಣ ವಿಜೃಂಭಿಸಿವೆ. 'ಟಾಲ್‌ಸ್ಟಾಯ್ ಮಹರ್ಷಿ' ದೇಜಗೌ ಅವರ ಅತ್ಯುತ್ತಮ ಕವಿಗಳಲ್ಲೊಂದು ಮಾತ್ರವಲ್ಲ ಕನ್ನಡದ ವ್ಯಕ್ತಿಚಿತ್ರಗಳನ್ನು ಕುರಿತು ಮಹತ್ವದ ಕವಿತೆಗಳ ಸಾಲಿಗೆ ಸೇರುತ್ತದೆ. ವಿಶ್ವವನ್ನೇ ಆವರಿಸಿರುವ ಶೋಷಕ ವ್ಯವಸ್ಥೆ ನಮ್ಮಲ್ಲಿ ದೇವಾಲಯಗಳು ಈ ವ್ಯವಸ್ಥೆಯ ಕೇಂದ್ರಗಳಾದರೆ ಪಾಶ್ಚಿಮಾತ್ಯರಲ್ಲಿ ಚರ್ಚ್‌ಗಳು ಇಂತಹ ಅನಿಷ್ಠಾಸ್ಥಾನಗಳಾಗಿವೆ.

ಇವರ ವಿರುದ್ಧ ಪ್ರಬಲ ಹೋರಾಟ ಮಾಡಿದವನು ಏಸುಕ್ರಿಸ್ತ ಚರ್ಚಿನಲ್ಲಿಡಗಿದ್ದ ವ್ಯಾಪಾರಿಗಳನ್ನು ಗಂಟೆಯಿಂದ ಬಡಿದು ಹೊರದಬ್ಬಿದ.

ಜಗತ್ತಿನ ಮಹಾಚಿಂತಕ ಟಾಲ್‌ಸ್ಟಾಯ್ ಶೋಷಣೆಯ ವಿರುದ್ಧ ಹೋರಾಡಿ ಮಾನವತೆಯನ್ನು ಮೆರೆದ ಮಹಾನುಭಾವ. ಜವರೇಗೌಡರ ಅಚ್ಚುಮೆಚ್ಚಿನ ಸಾಹಿತಿ. ಅವನ ಜೀವನ ಧೋರಣೆಗಳು ಇವರ ಕಾವ್ಯದ ಹೃದ್ದನಿಯಾಗಿ ಮೂಡಿ ಬಂದಿರುವುದು ದೇಜಗೌ ಎಂಬುದನ್ನಿಲ್ಲಿ ಪುನರುಚ್ಚರಿಸಿರುವುದನ್ನು ನಾವು ತಿಳಿಯಬಹುದು.

ಇದೇ ಲೇಖಕರು ಮೆಚ್ಚಿದ ಇನ್ನೊಬ್ಬ ಕವಿ ಸಿ.ಪಿ.ಕೆ. ಸಾಹಿತ್ಯದ ನಾನಾ ಪ್ರಕಾರಗಳನ್ನು ಕುರಿತಂತೆ ಸುಮಾರು ಮುನ್ನೂರು ಮಹತ್ವದ ಕೃತಿಗಳನ್ನು ರಚಿಸಿ ಅದ್ವಿತೀಯರ ಸಾಲಿನಲ್ಲಿ ದ್ವಿತೀಯರಾಗಿ ದಾಖಲೆ ನಿರ್ಮಿಸಿ ಸಾಹಿತ್ಯದ ಸರ್ವ ಪ್ರಕಾರಗಳನ್ನು ಶ್ರೀಮಂತಗೊಳಿಸಿದ ಸಿಪಿಕೆ ಅವರನ್ನು ಕುರಿತು "ತ್ರ್ಯಕ್ಷರೀ ಮಂತ್ರ" ರಚಿಸಿದ್ದಾರೆ ದೇಜಗೌ.

ದೇಜಗೌ ಅವರಂತೆಯೇ ವಿಫುಲ ಸಾಹಿತ್ಯ ಸಮೃದ್ಧಿಯಲ್ಲಿ ಸಿಪಿಕೆ ಕೂಡ ವಿಸ್ಮಯದಲ್ಲಿ ವಿಸ್ಮಯ ಇವರು ದೈತ್ಯ ಪ್ರತಿಭೆಯ ಲೇಖಕರು.

ಕಾವ್ಯ, ವಿಮರ್ಶೆ, ಅನುವಾದ ಮತ್ತು ಜಾನಪದ ಕ್ಷೇತ್ರಗಳಲ್ಲಿ ಇತಿಹಾಸ ಮತ್ತು ಕ್ರಾಂತಿಯನ್ನೇ ಮಾಡಿದವರು. ಇದನ್ನು ಕವಿ "ಸಾಹಿತ್ಯದ ಸಮಸ್ತ ಶಾಖೆಗಳೊಳ್ ವಿರಾಜಿಸುತಿಹರು ಬ್ರಹ್ಮಸೃಷ್ಟಿಗೆ ಪಡಿಯೆನುವಂತೆ" ಎನ್ನುತ್ತಾರೆ ಮಾತ್ರವಲ್ಲ ಇವರು.

"ಸರಸ್ವತಿಯೆಲವರದ ಭಾಗ್ಯಶಾಲಿ ಮಗ
ವಿದ್ವತ್ತಿನ ಖನ (ಖನಿ) ಸಾಹಿತ್ಯದ ಬನಿ
ಅದೆ ಅವನಾಡೊಂಬಲದವನಿ
ನಯಾಗರದೊಲ್ ಭೋರ್ಗರೆಯುವ ಶಕ್ತಿಯ
ನಿವನೊಬ್ಬನಿಗೀಯುವ ಧಾರಾಳತೆ ಸರಿಯೇ"[೧೦]

ಹೀಗೆ ಕವಿಶಕ್ತಿಯನ್ನು ಅಲೌಕಿಕ ಸ್ತರದಲ್ಲಿ ವಿಜೃಂಭಣೆಗೊಳಿಸುವ ಹೃದಯ ವೈಶಾಲ್ಯತೆ ಜವರೇಗೌಡರದು. ವಾಮನ ತ್ರಿವಿಕ್ರಮತ್ವದ ಸಂಕೇತವೇ ಇದರ ಹಿರಿಮೆ. ರೈತ ತಾನೇ ನೆಟ್ಟ ಸಸಿ ಬೃಹತ್ ಮರವಾಗಿ ಫಲನೀಡತೊಡಗಿದಾಗ ಅದರ ಬೆಳವಣಿಗೆಯ ವೈಭವಕ್ಕೆ ಬೆರಗಾಗಿ ಮೆಚ್ಚಿ ತಲೆದೂಗುವಂತೆ ಇದರ ಪರಿ. ಸಿಪಿಕೆ ದೇಜಗೌ ಸಂಬಂಧವರಿಯುವ ದಾಖಲೆಗಳಿಗಾಗಿ ತಡಕಾಡುವ ಮಂದಿ ಈ ಕವಿತೆಯನ್ನು ಓದಬೇಕು.

ಅಡಿಟಿಪ್ಪಣಿಗಳು

೧. ದೇಜಗೌ ಸೆಳಕು ಮೆಲುಕು, ಡಾ. ಮಳಲಿವಸಂತಕುಮಾರ್, ಮುನ್ನುಡಿಯಿಂದ, ಪುಟ. ೬, ವೈದ್ಯವಾರ್ತೆ ಪ್ರಕಾಶನ, ಮೈಸೂರು

೨. ಅದೇ, ಪು. ೭.

೩. ಡಾ.ಟಿ.ಕೆ.ಕೆಂಪೇಗೌಡ, ಅನಿಕೇತನದಲ್ಲೊಂದು ವಿಶ್ವಚೇತನ, ಪುಟ. ೧೭೮, ಯಡಿಯೂರು ಸಿದ್ಧಲಿಂಗೇಶ್ವರ ಪ್ರಕಾಶನ, ಮೈಸೂರು, ೨೦೦೯

೪. ಅದೇ, ಪು. ೧೭೯.

೫. ಅದೇ, ಪು. ೧೭೯.

೬. ಅದೇ, ಪು. ೧೭೯.

೭. ಅದೇ, ಪು. ೧೭೯.

೮. ಡಾ. ಮಳಲಿ ವಸಂತಕುಮಾರ್, ಮುನ್ನುಡಿಯಿಂದ, ದೇಜಗೌ ಸೆಳಕು ಮೆಲುಕು, ಪುಟ. ೧೩, ವೈದ್ಯವಾರ್ತೆ ಪ್ರಕಾಶನ, ಮೈಸೂರು

೯. ಅದೇ, ಪುಟ. ೧೪.

೧೦. ಅದೇ, ಪು. ೧೫.

ಅಧ್ಯಾಯ – ೮

ದೇಜಗೌ ಕಾವ್ಯದ ಭಾಷೆ ಮತ್ತು ಶೈಲಿ

ಶೈಲಿಯ ಅಧ್ಯಯನ ವಿಮರ್ಶೆಯ ಒಂದು ಅಂಗ. ಶೈಲಿಯ ವಿಶ್ಲೇಷಣೆಯಿಲ್ಲದೆ ಕಾವ್ಯ ಅಪೂರ್ಣವಾಗುತ್ತದೆ. ಅನೇಕಾರ್ಥವುಳ್ಳ ಇಂಗ್ಲಿಷಿನ ಸ್ಟೈಲ್ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಶೈಲಿ ಎನ್ನುವ ಪದ ಪ್ರಯುಕ್ತವಾಗುತ್ತದೆ. ಅವೆರಡು ಪದಗಳ ವ್ಯುತ್ಪತ್ತಿಯನ್ನು ಹೋಲಿಸಿದಾಗ ಶೈಲಿ ಶಬ್ದ ಹೆಚ್ಚು ಅರ್ಥವತ್ತಾದದ್ದೆಂದು ತೋರುತ್ತದೆ.

ಒಬ್ಬೊಬ್ಬ ವಿದ್ವಾಂಸರು ಒಂದೊಂದು ರೀತಿಯಲ್ಲಿ ಶೈಲಿಯನ್ನು ವ್ಯಾಖ್ಯಾನಿಸಿದ್ದಾರೆ. ಒಬ್ಬ ವ್ಯಕ್ತಿಯ ಪದ ಪ್ರಯೋಗ ವೈಶಿಷ್ಟ್ಯ; ಕೃತಿಕಾರನೊಬ್ಬನ ಅಭಿವ್ಯಕ್ತಿ ವೈಲಕ್ಷಣ; ಆಲೋಚನೆಗಳ ಉಡುಪು, ಭಾವನೆಗಳ ಕ್ರಮಾನುಗತ ಸ್ಪಷ್ಟಾಭಿವ್ಯಕ್ತಿ; ಗ್ರಂಥಕರ್ತನ ಶೀಲವೆ ಶೈಲಿ, ವ್ಯಕ್ತಿಯೇ ಶೈಲಿ – ಇವೇ ಮೊದಲಾದ ಶೈಲಿಯ ಬಗೆಗಿನ ಬಗೆಬಗೆಯ ಲಕ್ಷಣಗಳು ಅಭಿವ್ಯಕ್ತಗೊಂಡಿದೆ. ಕವಿತೆಯ ಸೌಂದರ್ಯವನ್ನು ಬೆಳಗುವಲ್ಲಿ ಹಾಗೂ ಅದರ ಗುಣಾವಗುಣಗಳನ್ನು ವಿಶ್ಲೇಷಿಸುವಲ್ಲಿ ಶೈಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಕವಿಯ ಭಾವಾನುಭವ ಆಲೋಚನೆಗಳನ್ನು ಸಹೃದಯನ ಚಿತ್ಕೋಶಕ್ಕೆ ಮುಟ್ಟಿಸುವ ಮಾಧ್ಯಮವೇ ಶೈಲಿ. ಶರೀರಕರಣಗೊಂಡ ಭಾವ ಭಾವನೆಗಳೇ ಶೈಲಿಯೆಂದರೂ ಸಲ್ಲುತ್ತದೆ. ಅಮೂರ್ತ ಸ್ವರೂಪದ ಭಾವ ಭಾವನೆಗಳು ಶೈಲಿಯ ಮೂಲಕವೇ ಮೂರ್ತತ್ವವನ್ನು ಪಡೆಯಬೇಕಾಗುತ್ತದೆ. ಅದು ಕಳಚಿ ಬಿಸಾಡುವಂಥ ಉಡುಪೂ ಅಲ್ಲ, ಆಭರಣವೂ ಅಲ್ಲ, ಭಾವಲೋಚನೆಗಳೊಂದಿಗೆ ಅವಿಭಕ್ತ ಸಂಬಂಧವನ್ನು ಹೊಂದಿರುವ ದೇಹವೇ ಶೈಲಿ.

ಒಂದು ಸಾಹಿತ್ಯ ಕೃತಿಯ ಪಾತ್ರರಚನೆಯಾಗಲಿ ಕಥಾ ಸಂವಿಧಾನವಾಗಲಿ, ವರ್ಣನೆಯಾಗಲಿ, ಘಟನಾ ಸನ್ನಿವೇಶಗಳ ನಿರ್ಮಾಣವಾಗಲಿ ಭಾಷೆಯ ಮೂಲಕವೇ ಮೈದೋರಬೇಕಾಗಿರುವುದರಿಂದ ಶೈಲಿಯ ವಿಶ್ಲೇಷಣೆಯಲ್ಲಿ ಅವೆಲ್ಲವನ್ನು ಲಕ್ಷ್ಯದಲ್ಲಿರಿಸಿ–ಕೊಳ್ಳಬೇಕಾಗಿದೆ. ಈ ಕಾರಣದಿಂದಲೇ ಪ್ರಾಚೀನ ಭಾರತೀಯ ಕಾವ್ಯಮೀಮಾಂಸಕರು 'ರೀತಿರಾತ್ಮಾ ಕಾವ್ಯಸ್ಯ' ಎಂದು ಹೇಳಿ ರೀತಿಗೆ ಪ್ರಾಶಸ್ತ್ಯ ನೀಡಿದರೆಂದು ತೋರುತ್ತದೆ. ವ್ಯಕ್ತಿ ವೈಶಿಷ್ಟ್ಯದ ಸಂಕೇತವಾಗಿ ಅಭಿವ್ಯಕ್ತಿಯ ತಂತ್ರವಾಗಿ ಸಾಹಿತ್ಯದ ಶಿಖರ ಸಿದ್ಧಿಯಾಗಿ

[illegible]

ಶೈಲಿಯ ಸ್ವರೂಪವನ್ನು ನಿರ್ಧರಿಸಬಹುದೆಂದು 'ಮಿಡ್ಲಟನ್ ಮರ್ರೆ' ಎಂಬ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ.

ಕಲಾವಿದನ ಯಶಸ್ಸು ಸೂಕ್ಷ್ಮ-ಸಂವೇದನೆ ಹಾಗೂ ಅದರ ಅಭಿವ್ಯಕ್ತಿಯನ್ನು ಅವಲಂಬಿಸಿದೆ. ಅಭಿವ್ಯಕ್ತಿ ಸಾಮರ್ಥ್ಯವಿಲ್ಲದ ವ್ಯಕ್ತಿಯ ಅನುಭವ ಶ್ರೀಮಂತಿಕೆ ಬಂಜೆ ಕಂಡ ಕೂಸಿನ ಕನಸಾಗುತ್ತದೆ. ಶ್ರೇಷ್ಠ ಸಾಹಿತಿಯ ಚಿತ್ರ ಅಥವಾ ವರ್ಣನೆಗಳು ಕೈಯಿಂದ ಮುಟ್ಟಬಹುದೇನೋ ಎಂಬ ಭ್ರಮೆ ಮೂಡಿಸುತ್ತದೆ ಶೈಲಿ.

ಭಾವಾನುಭವ ಪ್ರಕಾಶನಕ್ಕೂ ಅತ್ಯಗತ್ಯವಾದ ಉಕ್ತಿ ಮತ್ತು ಉಕ್ತಿವೈಚಿತ್ರ್ಯಗಳನ್ನುಳ್ಳ ಅಭಿವ್ಯಕ್ತಿ ತಂತ್ರವನ್ನು ಸಹಜಶೈಲಿಯೆಂದೂ ಆಡಂಬರಕ್ಕಾಗಿ ಬಳಸುವ ಬೊಜ್ಜು ಭಾಷೆಯನ್ನು ಕೃತಕ ಶೈಲಿಯೆಂದೂ ಕರೆಯಬಹುದು. ಭಾವಭಾವನೆಗಳು ಭಾಷೆಯ ನೆರವಿನಿಂದ ಹರಳುಗೊಂಡಾಗ ಕಲ್ಪನೆ ಭಾಷಾರೂಪವನ್ನು ಪಡೆದಾಗ ಶೈಲಿ ವಿಕಾಸಗೊಳ್ಳುತ್ತದೆ. ತನ್ನ ಭಾವಭಾವನೆಗಳಿಗೆ ಆಕಾರ ಕೊಡುವಲ್ಲಿ ಕವಿ ಪದಗಳಿಗೆ ನಿಘಂಟಿನಲ್ಲಿಲ್ಲದ ಹೊಸ ಅರ್ಥವನ್ನು ತುಂಬುತ್ತಾನೆ.

ಹಳೆಯ ಪದಗಳನ್ನು ಪುನರ್ಜೀವಗೊಳಿಸುತ್ತಾನೆ. ಅತ್ಯಗತ್ಯವೆಂದು ಕಂಡುಬಂದರೆ ಭಾಷಾಸಂಪ್ರದಾಯವನ್ನು ಸಹ ಉಲ್ಲಂಘಿಸುತ್ತಾನೆ. ಪ್ರೊ. ದೇಜಗೌ ರವರು ಕನ್ನಡದ ಅತ್ಯುತ್ತಮ ಗದ್ಯ ಲೇಖಕರಲ್ಲಿ ಒಬ್ಬರೆನ್ನಬಹುದು. ಅವರ ಗದ್ಯಪದ್ಯವಲ್ಲದ್ದರಿಂದ ಮಾತ್ರ ಗದ್ಯವಾಗಿಲ್ಲ; ಅದು ತನ್ನದೇ ಆದ ವೈಲಕ್ಷಣ, ಕಾಂತಿ, ಸತ್ತ್ವ, ಸೌಂದರ್ಯ ನಿಶಿತತೆಗಳನ್ನು ಮೈಗೂಡಿಸಿಗೊಂಡಿದೆ.

ಪ್ರೊ. ದೇಜಗೌ ಅವರ ಶೈಲಿಯ ಜೀವಗುಣ ಓಜಸ್ಸು; ಅಲಂಕಾರಶಾಸ್ತ್ರದ ಪರಿಭಾಷೆಯಲ್ಲಿ ಅದನ್ನು ಗೌಡೀ ಶೈಲಿಯೆಂದು ಕರೆಯಬಹುದು. ಅದು ಅಲಂಕಾರ ಪರಿಪೂರ್ಣವೂ ಹೌದು. ಹಾಗೆಂದರೆ ಅದರಲ್ಲಿ ವ್ಯರ್ಥಾಡಂಬರ, ನಿರರ್ಥಕ ಅಲಂಕಾರ ವೈಚಿತ್ರ್ಯ ಇವೆಯೆಂದು ತಾತ್ಪರ್ಯವಲ್ಲ, ಈ ವಿಶಿಷ್ಟ ಶೈಲಿಯ ಹಿಂದೆ ಅರ್ಥಗಹನತೆ, ವಿಚಾರ ಪರಿವಾರಗಳು ತುಂಬಿಕೊಂಡಿವೆ.

ಭಾವ ಕಲ್ಪನೆಗಳ ಆವೇಗ ಔನ್ನತ್ಯಕ್ಕೆ ತಕ್ಕಂತೆ ದೇಜಗೌ ಅವರ ಭಾಷೆ ದೀಪ್ತವಾಗುತ್ತದೆ. ಅಲಂಕಾರಗಳು ನಿರಾಯಾಸವಾಗಿ ಸ್ಫುರಿಸಿ ಅರ್ಥದ್ಯೋತನಕ್ಕೆ ಸಹಕಾರಿಯಾಗುತ್ತವೆ. ಶ್ರೀಯುತರ ಭಾಷಾಪ್ರಭುತ್ವ, ಶಬ್ದ ಶ್ರೀಮಂತಿಕೆ ಅಚ್ಚರಿಗೊಳಿಸು-ವಂಥದ್ದು; ಕನ್ನಡವಾಗಲಿ, ಸಂಸ್ಕೃತವಾಗಲಿ, ಶಬ್ದಗಳು ಅಥವಾ ಶಬ್ದಪುಂಜಗಳು ಅವರ

ಬತ್ತಳಿಕೆಯಿಂದ ಲೀಲಾಜಾಲವಾಗಿ ಚಿಮ್ಮುತ್ತವೆ. ಶಬ್ದಗಳನ್ನು ಸಾರ್ಥಕವಾದ ರೀತಿಯಲ್ಲಿ ಔಚಿತ್ಯಪೂರ್ವಕವಾಗಿ ಪ್ರಯೋಗಿಸುವ ಕಲೆ ದೇಜಗೌ ಅವರಿಗೆ ವಶವಾಗಿದೆ.

ಅವರ ಗದ್ಯ ಒಂದು ರೀತಿಯಲ್ಲಿ ಕವಿತೆಗೆ ಹತ್ತಿರವಾದದು; ಅದರಲ್ಲಿ ಕಲ್ಪನೆಯುಂಟು, ಚಮತ್ಕಾರವುಂಟು, ಧ್ವನಿರಮ್ಯತೆಯುಂಟು, ವಿಷಯ ಸ್ಪಷ್ಟೀಕರಣಕ್ಕಾಗಿ ಅವರು ಸೊಗಸಾದ, ಸಮುಚಿತವಾದ ಉಪಮೆ ರೂಪಕಗಳನ್ನು ಮೇಲಿಂದ ಮೇಲೆ ತಂದುಕೊಡುತ್ತಾರೆ. ಇವುಗಳಲ್ಲಿ ಕೆಲವನ್ನು ಇಲ್ಲಿ ನಿದರ್ಶನಾರ್ಥವಾಗಿ ಉಲ್ಲೇಖಿಸಬಹುದು.

"ನೆನ್ನೆಯ ಮಜ್ಜಿಗೆಯಿಲ್ಲದೆ ಈ ಹೊತ್ತಿನ ಹಾಲು ಹೆರಲಾರದು (ಸಂಪ್ರದಾಯದ ಬಸಿರಿಂದಲೇ ಪ್ರಗತಿಯ ಜನನವೆಂದು ಹೇಳುವಲ್ಲಿ); "ಕಾವ್ಯದಲ್ಲಿ ಚರಿತ್ರೆಯನ್ನುಸುವ ಪ್ರಯತ್ನ ಜಿಲೇಬಿಯಲ್ಲಿ ಕಡಲೆಯನ್ನರಸಿದಂತಾಗುತ್ತದೆ";[೧]

"ಶಬ್ದತೇಜಿಯನ್ನೇರುವ ಬುದ್ಧಿಯಸವಾರ ಶಕ್ತಿಯುತನಾಗಿದ್ದರೆ ಸರಿ, ಇಲ್ಲವಾದರೆ ತೇಜ ಸವಾರನನ್ನೆಸೆದು ಪಲಾಯನ ಮಾಡುತ್ತದೆ" ಕೊಳದಿಂದ ಕಿತ್ತೆಸದ ಕಮಲ ಬಾಡಿಹೋಗುವಂತೆ ಜನಜೀವನದಿಂದ ಬೇರ್ಪಟ್ಟ ಕಾವ್ಯ ಹಾರಿಹೋಗುತ್ತದೆ"[೨]

"ಸ್ವಾತಿಯ ಹನಿ ಚಿಪ್ಪನ್ನು ಸೇರಿ ಮುತ್ತಾಗುವಂತೆ ಮಾತು ಶ್ರೇಷ್ಠ ಸಾಹಿತಿಯ ಕೈಯಲ್ಲಿ ವಿದ್ಯುದಾಗಾರವಾಗುತ್ತದೆ"[೩] ಮಿತಿಮೀರಿದ ವಿವರಣೆ ಲಂಬಾಣಿ ಹೆಂಗಸರ ಅಲಂಕಾರಗಳಂತೆ ಹೊರೆಯಾಗುತ್ತದೆ. "ಒಲಿದವನಿಗೆ ವಜ್ರಸಮಾನ, ಒಲ್ಲದವನಿಗೆ ಬರಿಯ ಇದ್ದಲು"[೪]

ಪ್ರೊ. ದೇಜಗೌ ಅವರ ಕಲ್ಪನೆಯ ಎತ್ತರಕ್ಕೆ, ರೂಪಕ್ಕೆ, ವೈಭವಕ್ಕೆ, ಉಜ್ವಲತಮ ಕಾವ್ಯಶೈಲಿಗೆ ಉದಾಹರಣೆಯಾಗಿ ಈ ಭಾಗಗಳನ್ನು ಅಗತ್ಯವಾಗಿ ನೋಡಬಹುದು.

೧) ದೇಜಗೌ ಸೃಜನಶೀಲ ಲೇಖಕರೂ ಹೌದೆಂಬುದನ್ನು ನೆನೆಯಬಹುದು; ಅವರ ಕಡುಗಲಿ ಕುಮಾರರಾಮ' ಇದಕ್ಕೊಂದು ಒಳ್ಳೆಯ ಸಮರ್ಥನೆ.

"ಭೂಲೋಕದ ನೆಲೆಗಟ್ಟಿನಲ್ಲಿ ನಿಂತು ಸಕಲ ಲೋಕಗಳನ್ನೆಳೆಯುವ ವಾಮನ ಶಕ್ತಿಯಲ್ಲಿ ಭೂಲೋಕದಿಂದ ಸ್ವರ್ಗಲೋಕದವರೆಗೆ ಸೋಪಾನ ನಿರ್ಮಿಸಿ ಸ್ವರ್ಗಲೋಕದ ವಸ್ತುಗಳನ್ನು ಭೂಲೋಕಕ್ಕೆ ತರುವ ಫಲ್ಗುಣ ಶೌರ್ಯದಲ್ಲಿ, ದೇವಗಂಗೆಯನ್ನು ಧರೆಯ ಮೇಲೆ ಹರಿಸುವ ಭಗೀರಥ ಸಾಹಸದಲ್ಲಿ, ಯಮಲೋಕದಿಂದ ಅಗ್ನಿಶಕ್ತಿಯನ್ನು ಕಸೆದುಕೊಮಡು ಬರುವ ನಚಿಕೇತ ಸಾಮರ್ಥ್ಯದಲ್ಲಿ ಪ್ರಾಚೀನ ಗ್ರೀಕರಿಗೆ ಅಪಾರ

ಗೌರವವಿತ್ತು."[೫] ಯಾವುದೋ ಒಂದು ಜನಾಂಗಕ್ಕೆ ಸೇರಿದ ಸಹಸ್ರ ಸಹಸ್ರ ಜನರಲ್ಲಿ ಯಾವನೂ ಒಬ್ಬ ವ್ಯಕ್ತಿ ಮಾತ್ರ ಸ್ವರ್ಶ ಸ್ವಸಾಮರ್ಥ್ಯಗಳಿಂದ ಸ್ವಯಂಭೂತವಾಗಿ ವಿಜೃಂಭಿಸುತ್ತಾನೆ.

ಬ್ರಹ್ಮಸೃಷ್ಟಿಗೆ ಬದಲಾಗಿ ಮತ್ತೊಂದು ಲೋಕದವನ್ನೆ ಸೃಜಿಸುವ ವಿಶ್ವಾಮಿತ್ರ ಶಕ್ತಿ ಅವನದು. ತನ್ನ ಶಕ್ತಿ ಅಪೂರ್ಣವಾದದ್ದು, ಅಪ್ರತಿಹತವಾದದ್ದು ನಿರುಪಮವಾದದ್ದು ಎಂಬ ಆ ಪ್ರತ್ಯಯದಿಂದ ಅದ್ಭುತಕಾರ್ಯಗಳೆನ್ನಸಗಿ ಅವನು ಜನ ಮನಸ್ಸಿನಲ್ಲಿ ಆಶ್ಚರ್ಯ ಚಿಹ್ನೆಯಾಗಿ ನಿಲ್ಲುತ್ತಾನೆ.

"ದೇಜಗೌ ಅವರ ಶೈಲಿಯ ಇನ್ನೊಂದು ಮಹತ್ತರ ವೈಶಿಷ್ಟ್ಯವೆಂದರೆ ದೇಸಿನುಡಿಗಳ ವಿಶೇಷ ಪ್ರಾಚುರ್ಯ. ಅವರು ಸಂಸ್ಕೃತ ಭೂಯಿಷ್ಠವಾಗಿ ಹೇಗೆ ಬರೆಯಬಲ್ಲರೊ ಹಾಗೆಯೆ ಅಚ್ಚಗನ್ನಡವನ್ನು ಚಲುವಾಗಿ ಬಳಸಬಲ್ಲರು. ಸಂಸ್ಕೃತ ಕನ್ನಡಗಳ ಮಧುರ ಸಮನ್ವಯವೆ ಅವರ ಶೈಲಿಯ ಯಶಸ್ಸು, ನಾಗರಿಕ ಜಗತ್ತಿಗೆ ಅಜ್ಞಾತವಾಗಿರುವ, ಅಪೂರ್ವವಾದ ಎಷ್ಟೋ ಕನ್ನಡ ಶಬ್ದಗಳು ದೇಜಗೌರವರ ಕೃತಿಗಳಲ್ಲಿ ದೊರಕುತ್ತವೆ;"[೬]

ಶ್ರೀಯುತರು ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ ಬೆಳೆದವರಾದರಿಂದ ದೇಸಿಯನ್ನು ಇಷ್ಟೊಂದು ಸಹಜವಾಗಿ ಸಲೀಸಾಗಿ ವೀರ್ಯಾವತ್ತಾಗಿ ಪ್ರಯೋಗಿಸಬಲ್ಲರು, ಅವರ ಸಂಸ್ಕೃತಶೈಲಿ ಎಷ್ಟೋ ವೇಳೆ ಕುವೆಂಪು ಅವರ ಶೈಲಿಯನ್ನು ನೆನಪಿಗೆ ತರುತ್ತದೆ. ಆದರೆ ದೇಸಿಯ ಬಳಕೆಯಲ್ಲಿ ಅವರ ರೀತಿ ಮತ್ತೊಬ್ಬರದಲ್ಲ, ಕತೆ ಕಾದಂಬರಿಗಳಲ್ಲಿ ದೇಸಿ ನುಡಿಗಳನ್ನು ಬಳಸುವ ಲೇಖಕರು ಅನೇಕರಿದ್ದಾರೆ. ಆದರೆ ವಿಚಾರ ಗ್ರಂಥಗಳಲ್ಲಿ ಹೀಗೆ ದೇಸಿಯ ಸೊಂಪು ಸೊಗಡು ಕಸವು ಕಮನೀಯತೆಗಳನ್ನು ಸೂರೆ ಮಾಡಿದವರು ಮತ್ತಾರೂ ಇಲ್ಲವೆಂದು ತೋರುತ್ತದೆ.

ಗ್ರಾಮಾಂತರಗಳಿಂದ ಬಂದ ಲೇಖಕರೆಲ್ಲ ಹೀಗೆ ದೇಸಿ ಮಾತುಗಳನ್ನು ಕೃತಿಗಳಲ್ಲಿ ಉಳಿಸಿಕೊಟ್ಟಿದ್ದರೆ ಕನ್ನಡ ಶಬ್ದಭಂಡಾರಕ್ಕೆ ಮಹೋಪಕರವಾಗುತ್ತಿತ್ತು. ಅಪೂರ್ವ ಶಬ್ದಗಳನ್ನು ಯಾಂತ್ರಿಕವಾಗಿ ಸಂಗ್ರಹಿಸಿಡುವುದಕ್ಕಿಂತ ಈ ಬಗೆಯಲ್ಲಿ ಸಾಹಿತ್ಯ ಕೃತಿಗಳಲ್ಲಿ ಪ್ರಯೋಗಿಸಿದರೆ ಅವುಗಳನ್ನು ಜೀವಂತವಾಗಿ ಸಂರಕ್ಷಿಸಿ-ದಂತಾಗುತ್ತದೆ. ಈ ದಿಸೆಯಲ್ಲಿ ದೇಜಗೌ ಅವರದು ಸ್ತುತ್ಯವಾದ, ಅನುಕರಣ ಯೋಗ್ಯವಾದ ಕೃಷಿ. ಅವರಲ್ಲಿ ಬರುವ ಕೆಲವು ದೇಸಿ ಮಾತುಗಳನ್ನು ಕುತೂಹಲಕ್ಕಾಗಿ

ನೋಡಬಹುದು. ಗೋರಂದ, ನರಚಲು, ಚೇಗು, ಬೊಕ್ಕಣ, ಗುದಿಗಾಲು, ಜೀರ್ಕುಣಿಕೆ, ಕೋಬೆ, ಹುದಿ, ಬಾಡಬಕ್ಕ ಹುನಾರು ಇತ್ಯಾದಿ.

ವಿಮರ್ಶೆಯೂ ಒಂದು ಕಾವ್ಯ ಪ್ರಕಾರವಾದುದರಿಂದ ಇತರ ಪ್ರಕಾರಗಳಲ್ಲೆಂತೂ ಇಲ್ಲಿಯೂ ವಿಮರ್ಶಕನ ವ್ಯಕ್ತಿತ್ವ ಪ್ರದರ್ಶನಕ್ಕೆ ಮನೋಧರ್ಮಾಭಿವ್ಯಕ್ತಿಗೆ, ಜೀವನ ದೃಷ್ಟಿ ಪ್ರಕಾಶನಕ್ಕೆ ಅವಕಾಶವುಂಟು.

ದೇಜಗೌ ಅವರ ವಿಮರ್ಶೆಯ ವ್ಯಾಸಂಗದಿಂದ ಅವರ ವ್ಯಕ್ತಿತ್ವದ ಸ್ಥೂಲಕಲ್ಪನೆಯನ್ನು ಮಾಡಿಕೊಳ್ಳುವುದು ಸಾಧ್ಯ. "ಕನ್ನಡದ ಬಗ್ಗೆ ಅತ್ಯುತ್ಕಟ ಶ್ರದ್ಧೆ ಪ್ರೀತಿ ಅಭಿಮಾನ; ಅನೀತಿ ಅನ್ಯಾಯ ಅಧರ್ಮಗಳನ್ನು ಕುರಿತ ರೊಚ್ಚು, ಪ್ರತಿಭಟನೆ ಬದುಕಿನ ಶಿವಮೌಲ್ಯಗಳಲ್ಲಿ ಅಚಂಚಲ ನಿಷ್ಠೆ, ಗೌರವ, ಕೊಂಕು ಕಪಟಗಳನ್ನರಿಯದ ಋಜುಮನೋವೃತ್ತಿ; ದೋಷಖಂಡನೆಯಲ್ಲಿ ಅಸಂಕೋಚ; ಗುಣವಿದ್ದಲ್ಲಿ ಗ್ರಹಿಸಿ ಮುಕ್ತಕಂಠದಿಂದ ಪ್ರಶಂಸಿಸುವ ಸೌಜನ್ಯ – ಇವೇ ಮೊದಲಾದ ಗುಣಗಳು ಅವರ ವಿಮರ್ಶೆಯನ್ನು ಕಣ್ಣಿಟ್ಟು ಗಮನಿಸಿದಾಗ ಅರಿವಾಗದಿರುವುದಿಲ್ಲ. ನಿಜ ಜೀವನದಲ್ಲೂ ಅವರು ಹೀಗೆಯೆ ಇದ್ದಾರೆನ್ನುವುದು ಅವರನ್ನು ಹತ್ತಿರದಿಂದ ಬಲ್ಲವರಿಗೆ ಗೊತ್ತು."[೭]

ದೇಜಗೌ ಅವರ ಬರಹ ಮತ್ತು ಭಾಷೆ ಮತ್ತು ಶೈಲಿ ಅಲ್ಲಲ್ಲಿ ಕಾಣುವ ಒಂದೆರಡು ಅನಪೇಕ್ಷಣೀಯವಾದ ಅಂಶಗಳನ್ನು ಈಗ ಸೂಚಿಸಬಹುದು. ಒಮ್ಮೊಮ್ಮೆ ಅವರು ಅನಗತ್ಯವಾಗಿ ವಾಚಾಳಿಯಾದಂತೆ ತೋರುತ್ತಾರೆ. ಕೆಲವಡೆ ಅವರು ವಿಮರ್ಶಿಸುತ್ತಿರುವ ವಸ್ತು ಅಥವಾ ವಿಷಯ ಅವರ ವಾಕ್ಸಂಪತ್ತಿನ ಮುಂದೆ ಪೇಲವವಾಗಿ ಕಾಣುತ್ತದೆ. ಎಂದರೆ ಅವರ ಪ್ರಶಂಸೆ ತುಸು ಅಳತೆಮೀರಿ ಹೋಗುವುದುಂಟು. ಎಷ್ಟೋ ಕಡೆ ಪೌನರುಕ್ತ್ಯ ಹಣೆದೋರುತ್ತದೆ. ಆದರೆ ಇದೆಲ್ಲ ದೇಜಗೌರವರ ಕಾವ್ಯ ಹೃದಯಗುಣಕ್ಕೆ ಮೂಲಭೂತ ಸತ್ವಕ್ಕೆ ಭಾದಕವಾಗುವುದಿಲ್ಲ.

ಒಟ್ಟಿನಲ್ಲಿ ಉತ್ಕೃಷ್ಟವಾದ ಪ್ರಬುದ್ಧವಾದ ವಿಶ್ವಸನೀಯವಾದ ಕವಿತೆಯನ್ನು ದೇಜಗೌ ಕನ್ನಡಕ್ಕೆ ಒದಗಿಸಿಕೊಟ್ಟಿದ್ದಾರೆ.

ಅಡಿಟಿಪ್ಪಣಿಗಳು

೧. ದೇಜಗೌ, ಕುವೆಂಪು ಶೈಲಿ, ಪುಟ. ೧, ಸಹ್ಯಾದ್ರಿ ಪ್ರಕಾಶನ, ೧೯೯೧.

೨. ಅದೇ, ಪು. ೪.

೩. ಅದೇ, ಪು. ೪.

೪. ಅದೇ, ಪು. ೧೦೭.

೫. ಅದೇ, ಪು. ೧೦೯.

೬. ಅದೇ, ಪು. ೧೧೦.

೭. ಸಿಪಿಕೆ, ದೇಜಗೌ, ವ್ಯಕ್ತಿ ಮತ್ತು ಕೃತಿ, ಪು. ೭೦.

ಅಧ್ಯಾಯ – ೯

ಉಪಸಂಹಾರ

ದೇಜಗೌ ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮದೇ ಆಧ ಸ್ಥಾನವನ್ನು ಗುರುತಿಸಿ–ಕೊಂಡಿದ್ದಾರೆ. ಇವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿಯನ್ನು ಮಾಡಿದ್ದಾರೆ. ಅವರ ಸಾಹಿತ್ಯಕ ಬರವಣಿಗೆಗಳು, ಚಿಂತನೆಗಳು ನಮ್ಮ ಸಾರಸ್ವತಲೋಕಕ್ಕೆ ಕೊಟ್ಟ ಉತ್ತಮ ಕಾಣಿಕೆಗಳಾಗಿವೆ. ಸನಾತನ ಸಂಸ್ಕೃತಿಯ ಜೊತೆಯಲ್ಲಿ ಪ್ರಸ್ತುತ ಸ್ಥಿತಿಗತಿಗಳನ್ನು ಸೇರಿಸಿ ಸಾಹಿತ್ಯ ರಚನೆ ಮಾಡಿದವರು ದೇಜಗೌ

'ದೇಜಗೌ ಕಾವ್ಯ – ಒಂದು ಅಧ್ಯಯನ'ದಲ್ಲಿ ಒಟ್ಟು ೯ ಅಧ್ಯಾಯಗಳನ್ನು ಮಾಡಿಕೊಂಡು ಒಂದೊಂದು ಅಧ್ಯಾಯವನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಅಧ್ಯಾಯ ಒಂದರಲ್ಲಿ ಕಾವ್ಯ ಎಂದರೇನು, ಅದರ ಅರ್ಥ, ಜನಪದರು ಕಾವ್ಯವನ್ನು ಹೇಗೆ ನೋಡಿದ್ದಾರೆ ಎನ್ನುವುದನ್ನು ಕುರಿತು ಚರ್ಚಿಸಲಾಗಿದೆ. ಕಾವ್ಯ ಒಂದು ಕಲೆ. ಕಾವ್ಯ ಮೊದಲು ಜನನ ಪಡೆದದ್ದು ಜನಪದರಲ್ಲಿ. ಕವಿಯ ಅನುಭವ ವಿಶೇಷವೆ ಕಾವ್ಯ ಎಂದು ಭಾರತೀಯ ಅಲಂಕಾರಿಕರು ಕಾವ್ಯವನ್ನು ಕುರಿತು ಚರ್ಚಿಸಿರುವುದನ್ನು ಕೂಡ ನೋಡಲಾಗಿದೆ.

ಕಾವ್ಯದ ಸ್ವರೂಪವನ್ನು ಹಾಗೂ ಕಾವ್ಯಕ್ಕೆ ಕಾರಣಗಳೇನು ಎಂಬುದನ್ನು ಕೂಡ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ದೇಜಗೌರವರ ಜನನ, ಬಾಲ್ಯ ಮತ್ತು ವಿದ್ಯಾಭ್ಯಾಸ ಕುರಿತು ಚರ್ಚಿಸಲಾಗಿದೆ. ನಾಡಿನ ಪ್ರತಿಷ್ಠಿತ ವಿದ್ವಾಂಸರುಗಳಲ್ಲಿ ಇವರು ಒಬ್ಬರು. ಇವರು ಚನ್ನಪಟ್ಟಣದ ಚಕ್ಕರೆಯಲ್ಲಿ ಜನಿಸಿದರು. ಕಡುಬಡತನದಲ್ಲಿ ಬೆಳೆದು ಬಂದ ಶ್ರೀಯುತರು ತಮ್ಮದೇ ಆದ ಪರಿಶ್ರಮ ಹಾಗೂ ಪ್ರಯತ್ನಗಳ ಫಲದಿಂದ ಪ್ರಾಧ್ಯಾಪಕರಾಗಿ ಕುಲಪತಿಗಳಾಗಿ ಒಳ್ಳೆಯ ಆಡಳಿತಗಾರರಾಗಿ ಕೆಲಸಮಾಡಿದರು. ಅವರ ಆಸೆ ಕನಸುಗಳಿಗೆ ನೀರೇರದವರು ಶಾಲೆಯ ಮುಖ್ಯೋಪಾಧ್ಯಾಯರಾದ ಎಚ್.ಕೆ.ವೀರಣ್ಣನವರು. ಅವರಿಗೆ ಬೇಕಾದ ಸೌಕರ್ಯವನ್ನೆಲ್ಲ ಕೊಟ್ಟು ಬೆಳೆಸಿದರು. ಬೆಂಗಳೂರು, ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಕುವೆಂಪುರವರಿಂದ ಸ್ಫೂರ್ತಿಗೊಂಡು ಕನ್ನಡವನ್ನು ಕಟ್ಟುವ ಕೆಲಸವನ್ನು ಮಾಡಿದರು. ಹಲವಾರು ಸಾಹಿತ್ಯ ಕೃತಿಗಳನ್ನು ಹೊರತಂದರು. ಅನುವಾದ, ಜೀವನಚರಿತ್ರೆ, ವ್ಯಕ್ತಿಚರಿತ್ರೆ, ಪ್ರವಾಸ

ಸಾಹಿತ್ಯವನ್ನು ಬರೆದರು. ರಾಜಕರಣವನ್ನು ಹಲವಾರು ರೀತಿಯಲ್ಲಿ ಖಂಡಿಸಿರು-ವುದನ್ನು ವಿಡಂಬಿಸಿರುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ದೇಜಗೌರವರ ಕಾವ್ಯಸಂಕಲನವನ್ನು ಕುರಿತು ಚರ್ಚಿಸಲಾಗಿದೆ. ಈ ಸಂಕಲನದಲ್ಲಿ ಒಟ್ಟು ನಲವತ್ತೆಂಟು ಕವನಗಳಿದ್ದು ಒಂದೊಂದು ಕವನವು ಬೇರೆ ಬೇರೆ ವಿಷಯಗಳನ್ನು ಒಳಗೊಂಡಿದೆ. ಸ್ವಾಭಿಮಾನ ಕವಿಯ ಆಶಯವಾಗಿದ್ದು, ಅದನ್ನು ಬಿಟ್ಟು ಬದುಕಬಾರದೆನ್ನುತ್ತಾರೆ. ಗುರು, ಮಗಳು, ತಾಯಿ, ಮಕ್ಕಳ ಮೊಮ್ಮಕ್ಕಳು ಮುಂತಾದವರುಗಳ ಸಂಬಂಧವನ್ನು ಕುರಿತು ಚರ್ಚಿಸುತ್ತಾರೆ. ಹಿಂದೂಧರ್ಮದ ಬಗ್ಗೆ ಚರ್ಚಿಸಿರುವುದನ್ನು ನೋಡಬಹುದು. ಅಲ್ಲದೆ ರಾಮಾಯಣದ ಬಗೆಯೂ ಕವನ ರೂಪುಗೊಂಡಿದೆ. ಗುರುವಿಗೆ ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದಾರೆ. ಕೆಲಸ ಕಾರ್ಯಗಳು ಶಾಶ್ವತ, ಉಳಿದೆಲ್ಲವು ಅಶಾಶ್ವತ ಎಂದಿದ್ದಾರೆ. ಕೆಲವು ಕವನಗಳಲ್ಲಿ ಸಾಮಾಜಿಕ ಚಿಂತನೆ ಇದೆ. ಮಾನವ ಧರ್ಮವನ್ನು ಕುರಿತು ಚರ್ಚೆ ಇದೆ. ಇವುಗಳನ್ನೆಲ್ಲ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಚುಟುಕು ಸಾಹಿತ್ಯವನ್ನು ಕುರಿತು ಚರ್ಚಿಸಲಾಗಿದೆ. ಕೆಲವೆ ಪದಗಳಿಂದ ಕೂಡಿದ್ದು ಚುಟುಕ್ಕಾಗಿದೆ. ಸಂಕ್ಷಿಪ್ತ ನಿರೂಪಣೆ ಇದಾಗಿದೆ. ಹೊಸಮೌಲ್ಯವನ್ನು ಇದರಲ್ಲಿ ಹೇಳುವ ಪ್ರಯತ್ನವಿದೆ. ದಿನಕರ ದೇಸಾಯಿಂದ ಹಿಡಿದು ದುಂಡಿರಾಜರವರೆಗೂ ಇದರ ವಿಸ್ತಾರವಿದೆ. ಜೀವನಮೌಲ್ಯ ಮತ್ತು ಕಾವ್ಯಮೌಲ್ಯ ಎರಡನ್ನು ಇದು ಒಳಗೊಂಡಿದೆ. ಚುಟುಕುಕವಿ ಸಮಾಜದ ಚಿಂತಕನಾಗಿದ್ದಾನೆ.

ಸಮಾಜದ ಸಮಸ್ತ ವಿಷಯಗಳು ಇದರಲ್ಲಿ ಒಳಗೊಂಡಿವೆ. ಸ್ವಾಭಿಮಾನ-ಗಳಿಂದ, ವಿಡಂಬನೆಗಳಿಂದ ಹಿಡಿದು ಕಾಲಜ್ಞಾನ ಮತ್ತು ಅಲಂಕಿ ಒಕ್ಕಲುಗಳು ಸಮಾಜದ ಸಮಸ್ಯೆಗಳು ಎಲ್ಲವು ಇದರಲ್ಲಿ ವಿಡಂಗಿಸಿದ್ದಾರೆ. ರಾಜಕೀಯವನ್ನು ಕಂಡಿಸಿದ್ದಾರೆ. ಕುವೆಂಪುರವರ ವಿಚಾರಗಳಲ್ಲಿ ಸಂದೇಶಗಳನ್ನು ಇದರಲ್ಲಿ ತಿಳಿಸಿದ್ದಾರೆ. ಮಂತ್ರಮಾಂಗಲ್ಯದ ಬಗ್ಗೆ ಪ್ರಸ್ತಾಪಿಸಿದ್ದಾರೆ. ದೇವರು ಧರ್ಮದ ಹೆಸರಿನಲ್ಲಿ ನಡೆಯುವ ಕಂದಾಚಾರದ ರೈತವರ್ಗವನ್ನು, ಮತ್ತು ಸ್ತ್ರೀಯರ ಚುಟುಕುಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಮುಕ್ತಕಗಳನ್ನು ಕುರಿತು ಚರ್ಚಿಸಲಾಗಿದೆ. ಇದೊಂದು ಕಾವ್ಯಪ್ರಕಾರ; ಸ್ವತಂತ್ರ್ಯವೂ ಸರಳವಾದುದು ಆಗಿದೆ. ಅನುಭವದ ನೆಲೆಯಲ್ಲಿ ರೂಪುಗೊಂಡದ್ದು ಮುಕ್ತಕ. ಅಲಂಕಾರಿಕರು ಇವುಗಳನ್ನು ಕುರಿತು

ತಮ್ಮದೇ ಆದ ನೆಲೆಯಲ್ಲಿ ಚರ್ಚಿಸಿದ್ದಾರೆ. ಸರ್ವಜ್ಞ, ವಚನಕಾರರಿಂದ ಹಿಡಿದು ಇಂದಿನ ಎಸ್.ವಿ.ಪರಮೇಶ್ವರಭಟ್ಟ, ಸಿ.ಪಿ.ಕೆ., ದೇಜಗೌರವರೆಗೂ ಇದರ ವಿಸ್ತಾರದ ಹರವು ಚಾಚಿಕೊಂಡಿದೆ. ಮುಕ್ತಕಗಳಿಗೆ ಪಂಕ್ತಿಗಳ ನಿರ್ಬಂಧವಿಲ್ಲ. ದೇಜಗೌ ಮುಕ್ತಕಗಳು ವಚನಕಾರರ ನೆನಪನ್ನು ತರುತ್ತವೆ. ಇವರ ಮುಕ್ತಕಗಳಲ್ಲಿ ಸಾಮಾನ್ಯವಾಗಿ ನಾಲ್ಕು ಸಾಲುಗಳಿವೆ. ಪ್ರೀತಿ, ಮನಸ್ಸು, ನಿಸರ್ಗ, ಪುಣ್ಯ, ಹಾರುವರು ಮುಂತಾದ ಮುಕ್ತಕಗಳು ತಮ್ಮದೇ ಆದ ನೆಲೆಯಲ್ಲಿ ಚರ್ಚಿಸಿರುವುದನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಭಾವಗೀತೆಗಳನ್ನು ಕುರಿತು ಚರ್ಚಿಸಲಾಗಿದೆ. ಭಾವಗಳ ಗೀತೆಯೆ ಭಾವಗೀತೆಯಾಗಿದೆ. ಇದೊಂದು ಹಾಡಿನರೂಪ ಲಿರಿಕ್‌ನ (Lyric) ತನ್ನದೇ ಆದ ರೂಪಾಂತರವೆ ಭಾವಗೀತೆ, ಇದು ಗ್ರೀಕ್‌ನ ಹಿನ್ನೆಲೆಯಲ್ಲಿ ರೂಪುಗೊಂಡಿರಬಹುದೆಂದು ರೂಪಿಸಲಾಗಿದೆ. ಷೇಕ್ಸ್‌ಪಿಯರ್, ಇದಕ್ಕೆ ಮುನ್ನುಡಿ ಬರೆದ ಇಂಗ್ಲಿಷ್ ಕವಿಗಳು ಇದನ್ನು ಮುಂದುವರೆಸಿದರು.

ರವೀಂದ್ರನಾಥ ಟ್ಯಾಗೂರರು ತಮ್ಮ ಕಾವ್ಯದಲ್ಲಿ ಇದನ್ನು ಬಳಸಿಕೊಂಡರು. ಕವಿಯ ವೈಯಕ್ತಿಕ ವ್ಯಾಮೋಹವೆ, ಭಾವಗೀತೆ ಏಕತಾನತೆಯಿಂದ ರೂಪಗೊಂಡಿರುತ್ತದೆ. ಇದರಲ್ಲಿ ಗೇಯತೆಯ ಅಂಶವಿದೆ. ಪ್ರಗಾಥ, ಲಾವಣಿ, ಸಾನೆಟ್, ಶೋಕಗೀತೆಗಳು ಒಳಪ್ರಕಾರವಾಗಿ ರೂಪುಗೊಂಡಿವೆ. ದೇಜಗೌ ಇದನ್ನು ನಾಡಿನ ಬಗ್ಗೆ ಬರೆಯುವಾಗ ಬಳಸಿಕೊಂಡಿದ್ದಾರೆ. ನಾಡುನುಡಿಯ ಜನ್ಮಜಾತರ ಬಗ್ಗೆ ಬರೆಯುವಾಗಲೂ ಕೂಡ ಇದನ್ನು ಬಳಸಿಕೊಂಡಿದ್ದಾರೆ. ಆಧುನಿಕ ಸಾಹಿತ್ಯ ಪ್ರಕಾರದಲ್ಲಿ ಭಾವಗೀತೆ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ದೇಜಗೌರವರು ಅಸ್ಪೃಶ್ಯ ನಿವಾರಣೆಗೆ ಹೇಳುವಾಗ ಮತ್ತು ಕಾಲೇಜಿನ ಘಟನೆಗಳನ್ನು ಹೇಳುವಾಗ ಈ ಭಾವಗೀತೆ ಪ್ರಕಾರವನ್ನು ಬಳಸಿ-ಕೊಂಡಿರುವುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ದೇಜಗೌ ಕವಿತೆಗಳಲ್ಲಿ ಕ್ರಾಂತಿಯನ್ನು ಕುರಿತು ಚರ್ಚಿಸಲಾಗಿದೆ. ಬದಲಾವಣೆಯನ್ನು ಬಯಸುವುದೆ ಕ್ರಾಂತಿ. ಇದನ್ನು ಅವರು ಹದಗೆಟ್ಟ ರಾಜಕೀಯ ಹಿನ್ನೆಲೆಯಲ್ಲಿ ಬಳಸಿಕೊಂಡಿದ್ದಾರೆ. ಅವರ ಲೇಖನಿ ಖಡ್ಗವಾಗಿದೆ. ಆತ್ಮಾವಲೋಕನಮಾಡಲು ಕರೆಯುತ್ತಿದ್ದಾರೆ. ರಾಜಕೀಯದವರನ್ನು ಈಡಿಪಸ್ಸ್ ವಂಶದವರು ಎಂದಿದ್ದಾರೆ. ಸಮಕಾಲೀನ ರಾಜಕೀಯ ವ್ಯವಸ್ಥೆಯ ಮೇಲೆ ಈ ಕವಿತೆಗಳು ಪರಿಣಾಮ ಬೀರಿವೆ. ಹುಲಿಸಿಂಹಗಳನ್ನಾದರೂ ನಂಬಬಹುದು.

ಆದರೆ ರಾಜಕಾರಣಿಗಳನ್ನು ನಂಬಬಾರದು ಎಂದು ಹೇಳುತ್ತಾರೆ. ಜೀವನದ ಅನುಭವದ ಬಗ್ಗೆ, ರೈತಾಪಿವರ್ಗದ ಬಗ್ಗೆ ಬರೆಯುತ್ತಾರೆ. ಅಲ್ಲದೆ ಟಾಲ್‌ಸ್ಟಾಯ್ ಕುರಿತು ಕೂಡ ಬರೆದಿದ್ದಾರೆ.

ಎಂಟನೆಯ ಅಧ್ಯಾಯದಲ್ಲಿ ಶೈಲಿ ಎಂದರೇನು? ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಶೈಲಿ ಎಂದರೆ ಒಂದು ಬರವಣಿಗೆಯ ರೂಪ ಅಭಿವ್ಯಕ್ತಿಯ ವೈಲಕ್ಷಣ. ಶೈಲಿ ಅಮೂರ್ತತೆಯಿಂದ ಮೂರ್ತತೆಯ ಕಡೆಗೆ ನಡೆಯುವ ಒಂದು ಪ್ರಯೋಗ. ಮರ್ರೆ ಎಂಬುವವರು ಶೈಲಿಯನ್ನು ಕುರಿತು ಮೊದಲು ಚರ್ಚಿಸಿದರು. ಶೈಲಿಯಲ್ಲಿ ಸಹಜ ಮತ್ತು ಕೃತಕ ಎಂದು ಎರಡು ಬಗೆಗಳಿವೆ. ದೇಜಗೌರವರ ಶೈಲಿಯನ್ನು ಗೌಡಿಶೈಲಿ ಎಂದು ಕರೆಯಬಹುದಾಗಿದೆ. ಅವರ ಗದ್ಯ; ಕವಿತೆಗೆ ಹತ್ತಿರವಾದದ್ದು. ದೇಶೀಯ ನುಡಿಯಲ್ಲಿ ಬಳಸುವುದೇ ಅವರ ಶೈಲಿಯಾಗಿದೆ. ದೇಜಗೌರವರ ಕಾವ್ಯ ಹೃದಯಕ್ಕೆ ಹೇಗೆ ಹತ್ತಿರವಾಗಿದ್ದೆಂದು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ದೇಜಗೌರವರ ಕಾವ್ಯ ಒಂದು ಅಧ್ಯಯನವು ಪ್ರಸ್ತುತ ಸಂದರ್ಭದಲ್ಲಿ ಬಹಳ ಮಹತ್ವದ ಮೌಲ್ಯವನ್ನು ಪಡೆದುಕೊಂಡಿದೆ ಎಂದು ಹೇಳಬಹುದಾಗಿದೆ. ಆಧುನಿಕ ಕನ್ನಡ ಕಾವ್ಯಕ್ಷೇತ್ರದಲ್ಲಿ ದೇಜಗೌ ಸ್ಥಾನ ಉನ್ನತವಾದದ್ದು.

ಗ್ರಂಥಋಣ

೧. ಡಾ. ಚಿ.ಸಿ.ನಿಂಗಣ್ಣ – ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ
ಶ್ರೀ ಸಿದ್ಧಲಿಂಗೇಶ್ವರ ಪ್ರಕಾನ,
ಸರಸ್ವತಿ ಗೋದಾಮ, ಗುಲಬರ್ಗಾ
(೨೦೦೮)

೨. ತೀ.ನಂ.ಶ್ರೀಕಂಠಯ್ಯ – ಭಾರತೀಯ ಕಾವ್ಯಮಿಮಾಂಸೆ
ಪ್ರಸಾರಾಂಗ,
ಮೈಸೂರು ವಿಶ್ವವಿದ್ಯಾನಿಲಯ
೧೯೭೩.

೩. ಕೆ.ವಿ.ಪುಟ್ಟಪ್ಪ – ಕನ್ನಡ ಕೈಪಿಡಿ
ಸಹ್ಯಾದ್ರಿ ಪ್ರಕಾಶನ, ಮೈಸೂರು

೪. ರಾಜಪ್ಪ ದಳವಾಯಿ – ಕನ್ನಡ ಸಾಹಿತ್ಯ ಕೋಶ

೫. ಪ್ರೊ. ಎಲ್.ಎಸ್.ಶೇಷಗಿರಿರಾವ್ – ಹೊಸಗನ್ನಡ ಸಾಹಿತ್ಯ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
೨೦೦೮

೬. ಡಾ. ಎಂ.ಜಿ.ಆರ್.ಅರಸ್ – ದೇಜಗೌ ಚುಟುಕುಗಳು
ವೈದ್ಯವಾರ್ತಾ ಪ್ರಕಾಶನ, ಮೈಸೂರು
೧೯೯೯

೭. ಡಾ. ಟಿ.ಕೆ.ಕೆಂಪೇಗೌಡ – ಕರ್ನಾಟಕ ಕೇಸರಿ
ರಿಯಾ – ಏಜೆನ್ಸೀಸ್ ಪುಸ್ತಕ
ವ್ಯಾಪಾರಿಗಳು ಪ್ರಕಾಶಕರು,
ಮೈಸೂರು, ೨೦೦೮

೮. ದೇಜಗೌ – ಗುರುದೇವನಡಿಗೆ
ಸಂವಹನ ಪ್ರಕಾಶನ, ೧೨/೧ಎ,
ಈವನಿಂಗ್ ಬಜಾರ್, ಮೈಸೂರು
೧೯೯೯

೯. ಡಾ. ಟಿ.ಕೆ.ಕೆಂಪೇಗೌಡ – ನಿವೇದನ
ಪದ್ಮಶೇಖರ ಪ್ರಿಂಟರ್, ಮೈಸೂರು
೨೦೦೭.

೧೦. ಡಾ. ಎಂ.ಜಿ.ಆರ್.ಅರಸ್ – ದೇಜಗೌ ಕಾವ್ಯಸಂಕಲನ
ವೈದ್ಯವಾರ್ತಾ ಪ್ರಕಾಶನ, ಮೈಸೂರು
೨೦೦೬

೧೧. ಡಾ. ಎಂ.ಜಿ.ಆರ್.ಅರಸ್ – ಸೆಳಕು–ಮೆಲುಕು
ವೈದ್ಯವಾರ್ತಾ ಪ್ರಕಾಶನ, ಮೈಸೂರು
೨೦೦೯

೧೨. ಡಾ. ಮಳಲಿ ವಸಂತಕುಮಾರ್ – ಕನ್ನಡ ದೀಪ
ಪ್ರಕಾಶಕರು ಅಖಿಲ ಭಾರತ
ದೇಜಗೌ ಸಾಂಸ್ಕೃತಿಕ ಟ್ರಸ್ಟ್,
ವಿಜಯನಗರ, ಮೈಸೂರು, ೨೦೦೭.

೧೩. ಡಾ. ಟಿ.ಕೆ.ಕೆಂಪೇಗೌಡ – ಅನಿಕೇತನದಲ್ಲೊಂದು ವಿಶ್ವಚೇತನ
ಪ್ರಕಾಶಕರು, ಯಡಿಯೂರು
ಸಿದ್ಧಲಿಂಗೇಶ್ವರ ಪ್ರಕಾಶನ,
ಮೈಸೂರು, ೨೦೦೯

೧೪. ಎಸ್.ರಾಮಪ್ರಸಾದ್ – ಮುಕ್ತಕ ಡಿಂಡಿಮ
ಕರ್ನಾಟಕ ಮುಕ್ತಕ ಸಾಹಿತ್ಯ
ಅಕಾಡೆಮಿ ಟ್ರಸ್ಟ್, ಮೈಸೂರು
೨೦೦೬

೧೫. ದೇಜಗೌ – ಕುವೆಂಪು ಶೈಲಿ
ಸಹ್ಯಾದ್ರಿ ಪ್ರಕಾಶನ, ಮೈಸೂರು,
೧೯೯೧

೧೬. ಸಿ.ಪಿ.ಕೆ. – ದೇಜಗೌ ವ್ಯಕ್ತಿ ಮತ್ತು ಕೃತಿ
ಸಹ್ಯಾದ್ರಿ ಪ್ರಕಾಶನ, ಮೈಸೂರು,
೧೯೯೧

೧೭. ದೇಜಗೌ – ವ್ಯಕ್ತಿ ಮತ್ತು ಸಾಹಿತ್ಯ
ಮುದ್ರಕರು: ಮೈಸೂರು ಪ್ರಿಂಟಿಂಗ್
ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

೧೮. ದೇಜಗೌ – ಹೋರಾಟದ ಬದುಕು
ಡಿ.ವಿ.ಕೆ. ಪ್ರಕಾಶನ, ಮೈಸೂರು

೧೯. ದೇಜಗೌ – ವ್ಯಕ್ತಿ–ಶಕ್ತಿ
ಪ್ರಕಾಶಕರು: ಭಾರತೀಯ ವಿದ್ಯಾಭವನ,
ಬೆಂಗಳೂರು, ೨೦೦೫

೨೦. ಡಾ. ಕೆ.ಕೆಂಪೇಗೌಡ – ಕನ್ನಡ ಭಾಷಾಚರಿತ್ರೆ
ನವಭಾರತಿ ಪ್ರಕಾಶನ, ಸರಸ್ವತಿಪುರಂ
ಮೈಸೂರು, ೨೦೦೭

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

೨೧. ಡಾ. ಟಿ.ಕೆ.ಕೆಂಪೇಗೌಡ – ಡಾ. ಮಳಲಿ ವಸಂತಕುಮಾರ್
ವ್ಯಕ್ತಿಪರಿಚಯ
ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು, ೨೦೧೦

೨೨. ಕುವೆಂಪು ರಸೋ ವೈ ಸಃ – ಉದಯರವಿ ಪ್ರಕಾಶನ
ಮೈಸೂರು, ೫ನೇ ಮುದ್ರಣ,
೧೯೯೭.

೨೩. ದೇಜಗೌ – ಕುವೆಂಪು ದರ್ಶನ ವಿಚಾರ
ಸ್ವಪ್ನ ಬುಕ್‌ಹೌಸ್, ಬೆಂಗಳೂರು
ಮಾರ್ಚ್, ೨೦೧೦